ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಮೇ 23 ಶುಕ್ರವಾರ 2025

ಸಂಪುಟ: 46 | ಸಂಚಿಕೆ: 37 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಸಿಎಂ ಸಿದ್ದರಾಮಯ್ಯ ಬಳಿ ಜಾತಿಗಣತಿ ವರದಿಗೆ

ವೀರಶೈವ ಸಚಿವರ ವಿರೋಧ

- ಪ್ರಸಕ್ತ ವರದಿ ತಿರಸ್ಕರಿಸಿ; ಕೇಂದ್ರದ ಜಾತಿಗಣತಿ ವರದಿ ಬರುವವರೆಗೆ ಸುಮ್ನಿರಿ
- ಇಲ್ಲ ಮರು ಸಮೀಕ್ಷೆ ನಡೆಸುವಂತೆ ಆಗ್ರಹ
- ಸಂಪುಟ ಸಭೆಯಲ್ಲಿ ಈ ಸಂಬಂಧ ಯಾವುದೇ ಪ್ರಸ್ತಾಪ ಮಾಡದೇ ವಿಷಯ ಮುಂದೂಡಿಕೆ

ಬೆಂಗಳೂರು, ಮೇ 22(ಕೆಎಂಶಿ)–ಸಾಮಾಜಿಕ, ಆರ್ಥಿಕ ಸಮೀಕ್ಷೆ ಕುರಿತ ಶಾಶ್ವತ ಹಿಂದುಳಿದ ವರ್ಗಗಳ ಆಯೋಗದ ವರದಿ ತಿರಸ್ಕರಿಸಿ ಮರುಸಮೀಕ್ಷೆ ನಡೆಸುವಂತೆ ವೀರಶೈವ ಸಮುದಾಯಕ್ಕೆ ಸೇರಿದ ಸಚಿವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಿದ್ದಾರೆ.



ಸಿದ್ದರಾಮಯ್ಯ

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ವೀರಶೈವ ಸಮಾಜಕ್ಕೆ ಸೇರಿದ ಸಚಿವರಾದ ಎಂ.ಬಿ.ಪಾಟೀಲ್, ಶಿವಾನಂದ ಪಾಟೀಲ್, ಶರಣಬಸಪ್ಪ ದರ್ಶನಾಪುರ, ಈಶ್ವರ್ ಬಿ.ಖಂಡ್ರೆ, ಎಸ್.ಎಸ್.ಮಲ್ಲಿಕಾರ್ಜುನ್, ಡಾ.ಶರಣ ಪ್ರಕಾಶ್ ಪಾಟೀಲ್ ಹಾಗೂ ಲಕ್ಷ್ಮೀ ಹೆಬ್ಬಾಳ್ಕರ್ ಅವರು ಒಮ್ಮತದಿಂದ ಹೊಸದಾಗಿ ಸಮೀಕ್ಷೆ ನಡೆಸುವಂತೆ ಕೋರಿದ್ದಾರೆ.

ಸಪ್ತ ಸಚಿವರು ಪ್ರತ್ಯೇಕವಾಗಿ ಮುಖ್ಯಮಂತ್ರಿ ಅವರಿಗೆ ಲಿಖಿತ ಪತ್ರ ನೀಡಿದ್ದರೂ, ಎಲ್ಲಾ ಸಚಿವರ ಅಭಿಪ್ರಾಯ ಮತ್ತು ನಿರ್ಣಯ ಒಂದೇ ಆಗಿದೆ. ವೀರಶೈವ/ಲಿಂಗಾಯತ ಸಮುದಾಯದ ಜನಸಂಖ್ಯೆ ವರದಿಯಲ್ಲಿ ಶೇ.11ರಷ್ಟಕ್ಕೆ ಇಳಿದಿದೆ. ಈ ಅಂಕಿ–ಅಂಶಗಳ ಬಗ್ಗೆ ಸಂಶಯವಿದೆ. ಜನಸಂಖ್ಯೆ ಇಳಿಕೆ ಆಗಲು ಹೇಗೆ ಸಾಧ್ಯ? ಹಿಂದಿನ ವರದಿ ಹಾಗೂ ಜನಸಂಖ್ಯಾ ಅಂಕಿ–ಅಂಶಗಳ ಪ್ರಕಾರ ಅಜಗಜಾಂತರ ವ್ಯತ್ಯಾಸವಿದೆ.

ಕಳೆದ 10 ವರ್ಷಗಳ ಹಿಂದಿನ ಸಮೀಕ್ಷೆ ನಂತರ ಕೋವಿಡ್–19 ರಾಜ್ಯದಲ್ಲಿ ಸಹಸ್ರಾರು ಜನರ ಬಲಿ ಪಡೆದಿದೆ. ಈ ಹಿನ್ನೆಲೆಯಲ್ಲಿ ಅಂಕಿ–ಅಂಶಗಳೇ ಬದಲಾಗುತ್ತವೆ. ಇದಕ್ಕೂ ಹೊಸ ಮಾನದಂಡ ಬೇಕಲ್ಲವೆ. ಒಟ್ಟಾರೆ ವರದಿಯಲ್ಲಿನ ಅಂಕಿ–ಅಂಶಗಳ ಬಗ್ಗೆ ನಮ್ಮ ಸಮುದಾಯ ಆಕ್ಷೇಪಿಸಿದ್ದು, ಇದನ್ನು ಒಪ್ಪಲು ಸಾಧ್ಯವಿಲ್ಲ ಎಂಬುದಾಗಿ ತಿಳಿಸಿದೆ. ಆದ್ದರಿಂದ ಸಮುದಾಯದ ಅಭಿಪ್ರಾಯ ಮತ್ತು ವಾಸ್ತವ ಅಂಕಿ–ಅಂಶಗಳನ್ನು ನೀಡಿದ್ದೇವೆ ಎಂದಿದ್ದಾರೆ. ಕೇಂದ್ರ ಸರ್ಕಾರ ಜನಗಣತಿಯೊಂದಿಗೆ ಜಾತಿ ಗಣತಿ ಮಾಡುವ ಘೋಷಣೆ ಮಾಡಿದೆ. ಅದರ ಅಂಕಿ–ಅಂಶಗಳನ್ನು ಹೊಂದಾಣಿಕೆ ಮಾಡಿ. ಇದರಿಂದ ಜನರಿಗೆ ವಿಶ್ವಾಸ ಬರಲಿದ್ದು, ಸರ್ಕಾರಕ್ಕೂ ಒಳ್ಳೆಯ ಹೆಸರು ಬರಲಿದೆ. ಅಲ್ಲಿವರೆಗೆ ಯಾವುದೇ ನಿರ್ಣಯ ಕೈಗೊಳ್ಳುವುದು ಬೇಡ ▶ 6ನೇ ಪುಟಕ್ಕೆ

2011ನೇ ಸಾಲಿನ ಕೆಎಎಸ್ ಅಧಿಕಾರಿಗಳ ಆಯ್ಕೆ ಅವ್ಯವಹಾರ

ಕೆಪಿಎಸ್‌ಸಿಯ ಅಂದಿನ ಅಧ್ಯಕ್ಷರು, 8 ಸದಸ್ಯರ ವಿರುದ್ಧ ಕಾನೂನು ಕ್ರಮಕ್ಕೆ ಸಂಪುಟ ಸಮ್ಮತಿ

- ಮೈಸೂರು ಜಿಲ್ಲಾ ಆಸ್ಪತ್ರೆಯಲ್ಲಿ ಎಂಆರ್‌ಐ ಸ್ಕ್ಯಾನ್ ಯಂತ್ರ ಅಳವಡಿಕೆ
- ಮದ್ದೂರು ನಗರಸಭೆಯಾಗಿ ಮೇಲ್ದರ್ಜೆಗೆ
- ಟಿ.ನರಸೀಪುರ ವ್ಯಾಪ್ತಿ ನಾಲೆಗಳ ಅಭಿವೃದ್ಧಿ

ಬೆಂಗಳೂರು, ಮೇ 22(ಕೆಎಂಶಿ)– 2011ನೇ ಸಾಲಿನ ಗೆಜೆಟೆಡ್ ಪ್ರೊಬೆಷನರ್‌ಗಳ ಆಯ್ಕೆ ಪ್ರಕ್ರಿಯೆಯಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರಗಳಲ್ಲಿ ಭಾಗಿಯಾಗಿರುವ ಕರ್ನಾಟಕ ಲೋಕಸೇವಾ ಆಯೋಗದ ಹಿಂದಿನ ಅಧ್ಯಕ್ಷರು ಹಾಗೂ 8 ಸದಸ್ಯರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ರಾಜ್ಯ ಸಚಿವ ಸಂಪುಟ ಇಂದಿಲ್ಲಿ ಸಮ್ಮತಿಸಿದೆ.



ಎಚ್.ಕೆ.ಪಾಟೀಲ್

ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ವಿಷಯ ತಿಳಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಸಂಬಂಧಪಟ್ಟ ಸಂಸ್ಥೆ ಕ್ರಮ ಕೈಗೊಳ್ಳಲು ಅನುಮತಿ ನೀಡುವಂತೆ ರಾಷ್ಟ್ರಪತಿ ಹಾಗೂ ರಾಜ್ಯಪಾಲರನ್ನು ಕೋರಲು ಸಭೆ ತೀರ್ಮಾನಿಸಿದೆ ಎಂದರು.

ಮೈಸೂರು ಮತ್ತು ದಾವಣಗೆರೆ ಜಿಲ್ಲಾ ಆಸ್ಪತ್ರೆಗಳಲ್ಲಿ ಇನ್‌ಹೌಸ್ ಮಾದರಿಯಲ್ಲಿ 2 ಎಂಆರ್‌ಐ ಸ್ಕ್ಯಾನ್ ಯಂತ್ರಗಳನ್ನು 30 ಕೋಟಿ ರೂ. ವೆಚ್ಚದಲ್ಲಿ ಅಳವಡಿಸಲು ಸಂಪುಟ ಅನುಮೋದನೆ ನೀಡಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮದಡಿ ▶ 6ನೇ ಪುಟಕ್ಕೆ

ರಾಮನಗರ ಇನ್ನು ಮುಂದೆ ಬೆಂಗಳೂರು ದಕ್ಷಿಣ ಜಿಲ್ಲೆ

ಬೆಂಗಳೂರು, ಮೇ 22(ಕೆಎಂಶಿ)– ರಾಮನಗರ ಇನ್ನು ಮುಂದೆ ಬೆಂಗಳೂರು ದಕ್ಷಿಣ ಜಿಲ್ಲೆಯಾಗಿ ಗುರುತಿಸಿಕೊಳ್ಳಲಿದೆ. ಇಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಜಿಲ್ಲೆಯ ಹೆಸರು ಬದಲಾವಣೆಗೆ ಮಹತ್ವದ ತೀರ್ಮಾನ ಕೈಗೊಂಡಿರುವುದಲ್ಲದೆ, ಮುಂದಿನ ದಿನಗಳಲ್ಲಿ ದಾಖಲೆಗಳು ಹೊಸ ಜಿಲ್ಲೆ ಹೆಸರಿನಲ್ಲೇ ನಮೂದಾಗಲಿವೆ. ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಆಡಳಿತಾತ್ಮಕ ದೃಷ್ಟಿಯಿಂದ ಸರ್ಕಾರ ಈ ನಿರ್ಧಾರ ಕೈಗೊಂಡಿದೆ ಎಂದರು. ಜಿಲ್ಲೆ ಮರುನಾಮಕರಣ ಮಾಡುವುದರಿಂದ ಸರ್ಕಾರದ ಮೇಲೆ ಯಾವುದೇ ಆರ್ಥಿಕ ಹೊರೆ ಬೀಳುವುದಿಲ್ಲ. ಎಂದಿನಂತೆ ▶ 6ನೇ ಪುಟಕ್ಕೆ



ಸಂಪುಟ ಸಭೆಯಲ್ಲಿ ನಿರ್ಣಯ; ಸರ್ಕಾರದ ಮೇಲೆ ಯಾವುದೇ ಆರ್ಥಿಕ ಹೊರೆ ಇಲ್ಲ

ಕೊಡಗು, ಚಿಕ್ಕಮಗಳೂರಲ್ಲಿ ವಿಮಾನ ನಿಲ್ದಾಣ ಸ್ಥಾಪನೆಗೆ ಸಿದ್ಧತೆ

ಸಂಪುಟದ ಒಪ್ಪಿಗೆ ಬಳಿಕ ಕಾಮಗಾರಿ ಆರಂಭ; ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ಮಾಹಿತಿ

ಬೆಂಗಳೂರು,ಮೇ 22(ಕೆಎಂಶಿ)– ಪ್ರವಾಸಿ ತಾಣವಾಗಿರುವ ಕೊಡಗು ಮತ್ತು ಚಿಕ್ಕಮಗಳೂರಿನಲ್ಲಿ ವಿಮಾನ ನಿಲ್ದಾಣ ಸ್ಥಾಪಿಸುವುದಾಗಿ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ್ ತಿಳಿಸಿದ್ದಾರೆ.



ವಿಮಾನ ನಿಲ್ದಾಣ ಸ್ಥಾಪನೆಗೆ ಸಂಬಂಧಿಸಿದಂತೆ ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಅಧಿಕಾರಿಗಳೊಂದಿಗೆ ಸಭೆ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ಕರಡು ಯೋಜನೆ ಸಿದ್ಧಪಡಿಸಿ ಸಂಪುಟ ಸಭೆ ಅನುಮೋದನೆ ಪಡೆದು ಕಾಮಗಾರಿಗೆ ಚಾಲನೆ ನೀಡುವುದಾಗಿ ಹೇಳಿದರು. ಉದ್ದೇಶಿತ ಏರ್‌ಸ್ಟ್ರಿಪ್‌ನಲ್ಲೇ ಹೆಲಿಪೋರ್ಟ್ ಸಹ ಅಭಿವೃದ್ಧಿಪಡಿಸಲಾಗುವುದು. ▶ 6ನೇ ಪುಟಕ್ಕೆ

ಸದ್ಯದಲ್ಲೇ ರಾಜ್ಯಕ್ಕೆ 4,500 ಎಲೆಕ್ಟ್ರಿಕ್ ಬಸ್



ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಘೋಷಣೆ

ಬೆಂಗಳೂರು, ಮೇ22(ಕೆಎಂಶಿ)–ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಪಿಎಂ ಇ–ಡ್ರೈವ್ ಯೋಜನೆಯಡಿ ಕರ್ನಾಟಕಕ್ಕೆ 4,500 ಎಲೆಕ್ಟ್ರಿಕ್ ಬಸ್‌ಗಳ ಹಂಚಿಕೆ ಮಾಡಲಾಗುವುದು ಎಂದು ಕೇಂದ್ರ ಬೃಹತ್ ಕೈಗಾರಿಕೆ–ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

ಇದಕ್ಕೂ ಮುನ್ನ ರಾಜ್ಯ ಸಾರಿಗೆ ಸಂಸ್ಥೆ ತಮ್ಮ ಬಸ್ ಡಿಪೋಗಳಲ್ಲಿ ಚಾರ್ಜಿಂಗ್ ಕೇಂದ್ರ, ಡಿಪೋಗಳ ಮೇಲ್ದರ್ಜೆಗೇರಿಸುವುದು, ಅಗತ್ಯಬಿದ್ದಲ್ಲಿ ಹೊಸ ಡಿಪೋಗಳ ಸ್ಥಾಪನೆ ಸೇರಿದಂತೆ ▶ 6ನೇ ಪುಟಕ್ಕೆ



ಇಡಿ ದಾಳಿ ಉದ್ದೇಶ ನಂಗೊತ್ತಿಲ್ಲ...!

- ಗೃಹ ಸಚಿವ ಡಾ.ಜಿ.ಪರಮೇಶ್ವರ್ ಸ್ಪಷ್ಟನೆ
- ದಲಿತ ಎಂಬ ಕಾರಣಕ್ಕೆ ದಾಳಿ ಎಂಬ ಸುರ್ಜೇವಾಲ ಹೇಳಿಕೆಗೆ ಪ್ರತಿಕ್ರಿಯೆ; ಯಾರೂ ಜಾತಿ ನೋಡಿ ಬರಲ್ಲ!

ಬೆಂಗಳೂರು, ಮೇ 22(ಕೆಎಂಶಿ)– ತಮ್ಮ ಮಾಲೀಕತ್ವದ ಶಿಕ್ಷಣ ಸಂಸ್ಥೆಗಳ ಮೇಲೆ ಜಾರಿ ನಿರ್ದೇಶನಾಲಯ (ಇ.ಡಿ.) ದಾಳಿ ಮಾಡಿರುವ ಹಿಂದಿನ ಉದ್ದೇಶ ತಮಗೆ ಗೊತ್ತಿಲ್ಲ. ಆದರೂ ತನಿಖೆಯಲ್ಲಿ ಸಹಕಾರ ಕೊಟ್ಟಿದ್ದೇವೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಇಂದಿಲ್ಲಿ ತಿಳಿಸಿದ್ದಾರೆ.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇ.ಡಿ. ಅಧಿಕಾರಿಗಳು ನಮ್ಮ ಸಂಸ್ಥೆಯ ಅಕೌಂಟ್ಸ್ ಕೇಳಿದ್ದಾರೆ. ಯಾವ ವರ್ಷದ ಲೆಕ್ಕ ಕೇಳುತ್ತಾರೋ, ಅದರ ವಿವರ ಕೊಡಿ ಎಂಬುದಾಗಿ ಸಿಬ್ಬಂದಿಗೆ ಸೂಚಿಸಿದ್ದೇನೆ ಎಂದರು.

ಕಾನೂನಿಗೆ ಬೆಲೆ ಕೊಡುವವನು ನಾನು, ಕಾನೂನು ಎಲ್ಲರಿಗೂ ಒಂದೇ. ಇ.ಡಿ. ಅಧಿಕಾರಿಗಳು ಏನು ಬೇಕಾದರೂ ಪರಿಶೀಲನೆ ಮಾಡಲಿ, ನಾವು ಸಹಕಾರ ನೀಡುತ್ತೇವೆ. ದಲಿತ ಎಂಬ ಕಾರಣಕ್ಕೆ ಡಾ.ಪರಮೇಶ್ವರ್ ಸಂಸ್ಥೆಗಳ ಮೇಲೆ ಇ.ಡಿ. ಅಧಿಕಾರಿಗಳು ದಾಳಿ ಮಾಡಿದ್ದಾರೆಂಬುದಾಗಿ ರಾಜ್ಯ ಕಾಂಗ್ರೆಸ್ ▶ 6ನೇ ಪುಟಕ್ಕೆ

ನಟಿ ರನ್ಯಾರಾವ್‌ಗೆ 25–15 ಲಕ್ಷ ನೀಡಿದ್ದಾಗಿ ಡಾ. ಪರಮೇಶ್ವರ್ ನನಗೆ ತಿಳಿಸಿದ್ದಾರೆ

ಈ ರೀತಿ ಹಣ ಕೊಡುವುದರಲ್ಲಿ ತಪ್ಪೇನಿದೆ!

ಬೆಂಗಳೂರು, ಮೇ 22(ಕೆಎಂಶಿ)– ಚಿನ್ನ ಕಳ್ಳಸಾಗಣೆ ಆರೋಪದಲ್ಲಿ ಸಿಲುಕಿರುವ ನಟಿ ರನ್ಯಾರಾವ್‌ಗೆ ಗೃಹ ಸಚಿವ ಡಾ.ಜಿ.ಪರಮೇಶ್ವರ್ 25 ಮತ್ತು 15 ಲಕ್ಷ ರೂ. ನೀಡಿರುವುದಾಗಿ ತಮಗೆ ಅವರೇ ತಿಳಿಸಿದ್ದಾರೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಬಹಿರಂಗಪಡಿಸಿದ್ದಾರೆ. ಈ ಹಣವನ್ನು ▶ 6ನೇ ಪುಟಕ್ಕೆ



ಸಿಎಂ ಭೇಟಿಯಾದ ಪರಮೇಶ್ವರ್

ಬೆಂಗಳೂರು, ಮೇ 22– ತಮ್ಮ ಒಡೆತನದ ಶಿಕ್ಷಣ ಸಂಸ್ಥೆಗಳ ಮೇಲೆ ಇಡಿ ದಾಳಿ ನಡೆಯುತ್ತಿರುವ ನಡುವೆಯೇ ಗೃಹ ಸಚಿವ ಜಿ.ಪರಮೇಶ್ವರ ಅವರು ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದ್ದಾರೆ.

ಭೇಟಿಯಲ್ಲಿ ನಡೆದ ಮಾತುಕತೆ ಬಗ್ಗೆ ನಿಖರವಾದ ವಿವರಗಳು ತಿಳಿದಿಲ್ಲ. ಆದರೆ, ಕಾಂಗ್ರೆಸ್ ಮೂಲಗಳು ಹೇಳುವಂತೆ ಪರಮೇಶ್ವರ್ ಅವರು ಚಿನ್ನ ಕಳ್ಳಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಎಂಗೆ ದಾಳಿಯ ಬಗ್ಗೆ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ. ಚಿನ್ನದ ಕಳ್ಳಸಾಗಣೆ ದಂಧೆ ಸೇರಿದಂತೆ ಅಕ್ರಮ ಹಣಕಾಸು ವಹಿವಾಟು ಬಗ್ಗೆ ಇಡಿ ತನಿಖೆ ನಡೆಸುತ್ತಿದೆ. ಚಿನ್ನ ಕಳ್ಳ ಸಾಗಣೆ ಆರೋಪಿ, ನಟಿ ರನ್ಯಾರಾವ್ ಖಾತೆಗೆ ಹವಾಲಾ ಹಣ ವರ್ಗಾವಣೆ ಮಾಡಿದವರನ್ನು ಗುರಿಯಾಗಿಸಿಕೊಂಡು ಇಡಿ ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಅಡಿಯಲ್ಲಿ ರಾಜ್ಯದ 16 ಸ್ಥಳಗಳಲ್ಲಿ ದಾಳಿ ನಡೆಸಿದೆ.

ಇದರಲ್ಲಿ ಪರಮೇಶ್ವರ್ ಅವರಿಗೆ ಸಂಬಂಧಿಸಿದ ಮೂರು ಶಿಕ್ಷಣ ಸಂಸ್ಥೆಗಳೂ ಸೇರಿವೆ. ಸಿದ್ಧಾರ್ಥ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಮತ್ತು ಸಿದ್ಧಾರ್ಥ ವೈದ್ಯಕೀಯ ಕಾಲೇಜು ಸೇರಿದಂತೆ ಮೂರು ಸಂಸ್ಥೆಗಳಿಗೆ ಇಡಿ ಅಧಿಕಾರಿಗಳು ಭೇಟಿ ನೀಡಿದ್ದು, ▶ 6ನೇ ಪುಟಕ್ಕೆ

ಹಾಸನ ಮಿತ್ರ

ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಡಿಸಿಗೆ ಮಕ್ಕಳ ರಕ್ಷಣಾ ನಿರ್ದೇಶನಾಲಯದ ಖಾಯಂಯೇತರ ನೌಕರರ ಮನವಿ



ಹಾಸನ, ಮೇ 22– ಜಿಲ್ಲೆಯಲ್ಲಿ ಅನಾಥ, ಪರಿತ್ಯಕ್ತ ಮತ್ತು ಸಂಕಷ್ಟದಲ್ಲಿರುವ ಮಕ್ಕಳ ರಕ್ಷಣೆಗಾಗಿ ಶ್ರಮಿಸುತ್ತಿರುವ ಮಕ್ಕಳ ರಕ್ಷಣಾ ಸಿಬ್ಬಂದಿಯ ಬೇಡಿಕೆಗಳ ಈಡೇರಿಸಲು ಈ ಮನವಿ ಪತ್ರವನ್ನು ಮುಖ್ಯಮಂತ್ರಿಗಳಿಗೆ ರವಾನಿಸಲು ಕರ್ನಾಟಕ ರಾಜ್ಯ ಮಕ್ಕಳ ರಕ್ಷಣಾ ನಿರ್ದೇಶನಾಲಯ ಖಾಯಂಮೇತರ ನೌಕರರ ಸಂಘದ ನೇತೃತ್ವದಲ್ಲಿ ಹಾಸನ ಜಿಲ್ಲಾಧಿಕಾರಿ ಸಿ. ಸತ್ಯಭಾಮ ಅವರಿಗೆ ಸಲ್ಲಿಸಲಾಯಿತು.

ಸಂಘದ ಪ್ರಧಾನ ಕಾರ್ಯದರ್ಶಿ ಕಾಂತರಾಜು ಮಾತನಾಡಿ, ಮಕ್ಕಳ ರಕ್ಷಣಾ ಕಾರ್ಯಚಟುವಟಿಕೆಗಳು ಅತೀ ಸೂಕ್ಷ್ಮ, ಖಾಯಂ ಸ್ವರೂಪದ, ಶಾಸನಾತ್ಮಕ ಹಾಗೂ ಅತ್ಯಗತ್ಯ ಸೇವೆ ಆಗಿರುವುದರಿಂದ ಕೇಂದ್ರ ಸರ್ಕಾರದ ಮಕ್ಕಳ ರಕ್ಷಣಾ ಯೋಜನೆಯಲ್ಲಿ ಅನುಭವಿ, ಖಾಯಂ ಅಥವಾ ಕೌಶಲ್ಯಭರಿತ ಸಿಬ್ಬಂದಿಯನ್ನು ಆಯಾ ರಾಜ್ಯ ಸರ್ಕಾರಗಳು ಹೆಚ್ಚಿನ ಗೌರವ ಧನ ನೀಡಿ ನೇಮಕಾತಿ ಮಾಡಿಕೊಳ್ಳಲು ಅವಕಾಶ ಇರುತ್ತದೆ. ಆದರೆ ನಮ್ಮ ರಾಜ್ಯದಲ್ಲಿ ಮಕ್ಕಳ ರಕ್ಷಣೆಗಾಗಿ ಪದವೀಧರರ ಹಾಗೂ ಸ್ನಾತಕೋತ್ತರ ಪದವೀಧರರನ್ನು ಹೊರಗುತ್ತಿಗೆ ವಿಧಾನದಲ್ಲಿ ನೇಮಿಸಿಕೊಳ್ಳಲಾಗಿದೆ, ಮಕ್ಕಳ ರಕ್ಷಣೆಯ ಸಂವಿಧಾನಾತ್ಮಕ, ಶಾಸನಾತ್ಮಕ ಜವಾಬ್ದಾರಿಯನ್ನು ಅಪಾಯಕಾರಿ ಸನ್ನಿವೇಶಗಳನ್ನೂ ಲೆಕ್ಕಿಸದೇ ಮಕ್ಕಳಿಗಾಗಿ ದುಡಿಯುತ್ತಿರುವ ಮಕ್ಕಳ ರಕ್ಷಣಾ ಸಿಬ್ಬಂದಿಗೆ ವೇತನ ನೇರವಾಗಿ ಪಾವತಿಸುವುದು, ಸೇವಾ ಭದ್ರತೆ, ವೇತನ ಹೆಚ್ಚಳ ಹಾಗೂ ಸಿಬ್ಬಂದಿ ಸೇವೆ ಮತ್ತು ಅನುಭವ ಪರಿಗಣಿಸಿ ಇಲಾಖೆಯಡಿ ವಿಲೀನ ಮಾಡುವ ಮೂಲಕ ಖಾಯಂ ಮಾಡಬೇಕಾಗಿ ಮನವಿ ಮಾಡಲಾಗಿದೆ ಎಂದರು.

ಈ ವೇಳೆ ಉಪಾಧ್ಯಕ್ಷ ಶಿವಣ್ಣ, ಸರಸ್ವತಿ, ದಿಲೀಪ್, ಬಾಲಮಂದಿರದ ಸರಸ್ವತಿ, ಇಂದಿರಾ ಇನ್ನಿತರರಿದ್ದರು.

ಬಿಕಾಂ ಪರೀಕ್ಷೆ ಬರೆದ ನವವಧು



ಹಾಸನ, ಮೇ22– ಹಸೆಮಣೆ ಏರಿ ತಾಳಿ ಕಟ್ಟಿಸಿಕೊಳ್ಳುವ ಶಾಸ್ತ್ರ ಮುಗಿಯುತ್ತಿದ್ದಂತೆ ಕೆಲವೇ ಕ್ಷಣಗಳಲ್ಲಿ ವಧು ಪರೀಕ್ಷಾ ಕೇಂದ್ರಕ್ಕೆ ಅವಸರದಲ್ಲಿ ಬಂದು ಅಂತಿಮ ವರ್ಷದ ಬಿಕಾಂ ಪರೀಕ್ಷೆಯನ್ನು ಬರೆದ ಅಪರೂಪದ ಸಂಗತಿ ನಗರದಲ್ಲಿ ನಡೆದಿದೆ.

ನಗರದ ಚನ್ನಪಟ್ಟಣ ಬಡಾವಣೆಯ ಕುಮಾರ್–ಅನಸೂಯ ದಂಪತಿ ಪುತ್ರಿ ಕವನ ಪರೀಕ್ಷೆ ಬರೆದ ನವವಧು. ಪ್ರೈಡ್ ಪದವಿ ಕಾಲೇಜಿನಲ್ಲಿ ಅಂತಿಮ ಬಿಕಾಂ ಓದುತ್ತಿದ್ದು, ಗುರುವಾರದಂದು ಬೆಳಗ್ಗೆ 9 ಗಂಟೆಗೆ ಮುಹೂರ್ತ ನಿಗದಿಯಾಗಿತ್ತು. ನಗರದ ಹೊರವಲಯದ ಗುಡ್ಡೇನಹಳ್ಳಿಯ ದಿನೇಶ್ ಎಂಬುವರ ಜೊತೆ ಕವನ ವೈವಾಹಿಕ ಜೀವನಕ್ಕೆ ಕಾಲಿಟ್ಟಿದ್ದರು. ಮದುವೆಯ ದಿನವೇ ಅಂತಿಮ ವರ್ಷದ ಕೊನೆಯ ವಿಷಯ ಪರೀಕ್ಷೆ ಇತ್ತು. ಮಾಂಗಲ್ಯ ಧಾರಣೆ ಆಗುತ್ತಿದ್ದಂತೆಯೇ ಪರೀಕ್ಷೆಗೆ ಹಾಜರಾದ ಕವನ ಪರೀಕ್ಷೆ ಬರೆದರು. ಅಂತಿಮ ವರ್ಷದ ಬಿಕಾಂನಲ್ಲಿ ಆದಾಯ ತೆರಿಗೆಗೆ ಸಂಬಂಧಿಸಿದ ಎರಡು ವಿಷಯಗಳ ಪರೀಕ್ಷೆ ತೆಗೆದುಕೊಂಡಿದ್ದರು. ಮದುವೆ ಮುಗಿದ ಕೂಡಲೇ ಪರೀಕ್ಷೆ ಬರೆಯಲೇಬೇಕೆಂಬ ಮಗಳ ಒತ್ತಾಸೆಗೆ ಆಕೆಯ ಪೋಷಕರು, ಒಡಹುಟ್ಟಿದವರು ಸಾಥ್ ನೀಡಿದರು. ಮುಹೂರ್ತ ಮುಗಿದ ಕೂಡಲೇ ಅಣ್ಣ ಕಾರ್ತಿಕ್ ಪರೀಕ್ಷಾ ಕೇಂದ್ರಕ್ಕೆ ಸಹೋದರಿಯನ್ನು ಕರೆದುಕೊಂಡು ಬಂದರು. ಪರೀಕ್ಷೆ ಮುಗಿದ ನಂತರ ಯುವತಿ ಕಲ್ಯಾಣ ಮಂಟಪಕ್ಕೆ ಮರಳಿ ಆರತಕ್ಷತೆ ಕಾರ್ಯಕ್ರಮದಲ್ಲಿ ಭಾಗಿಯಾದರು. ಮದುವೆಗೆ ಬಂದಿದ್ದ ಸಂಬಂಧಿಕರು, ಸ್ನೇಹಿತರು ಈಕೆಯ ಉದ್ದೇಶಕ್ಕೆ ಶ್ಲಾಘನೆ ವ್ಯಕ್ತಪಡಿಸಿದರು.

ಜೂ.1, 330ನೇ ಮನೆ ಮನೆ ಕವಿಗೋಷ್ಠಿ

ಹಾಸನ, ಮೇ22– ಹಾಸನದ ಮನೆ ಮನೆ ಕವಿಗೋಷ್ಠಿ ಸಾಹಿತ್ಯ ಸಂಘಟನೆ, ಕವಯಿತ್ರಿ ಶ್ರೀಮತಿ ರೇಖಾ ಪ್ರಕಾಶ್ ಪ್ರಾಯೋಜಕತ್ವದಲ್ಲಿ ಹಾಸನದ ವಿಜಯನಗರ ಬಡಾವಣೆಯ ಲಕ್ಷ್ಮೀನಿವಾಸ, 6ನೇ ಕ್ರಾಸ್, 2ನೇ ಹಂತ, ಆದಾಯ ತೆರಿಗೆ ಕಚೇರಿ ಹಿಂಭಾಗ 2025ರ ಜೂನ್ 1ರಂದು ಸಂಜೆ 3.30 ಗಂಟೆಗೆ ಕವಿಗೋಷ್ಠಿ ಆಯೋಜಿಸಲಾಗಿದೆ. ಮೊದಲಿಗೆ ಕವಯಿತ್ರಿ ಶ್ರೀಮತಿ ಶಾಂತ ಅತ್ನಿಯವರ ಕಷ್ಟಗಳಿಗೂ ಸಾವಿದೆ ಕೃತಿ ಕುರಿತು ಸಾಹಿತಿ ಶ್ರೀಮತಿ ವಾಣಿ ಮಹೇಶ್ ವಿಶ್ಲೇಷಣೆ ಹಾಗೂ ಕವಿಗಳಿಂದ ಕವನವಾಚನ, ವಿಮರ್ಶೆ ಕಾರ್ಯಕ್ರಮವಿದೆ. ಎಂ.ಕುಸುಮ ಅವರ ಸಂವಾದಿ ಕವನ ಸಂಕಲನ ಬಿಡುಗಡೆ ಕೂಡ ನಡೆಯಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಕವಿಗಳು, ಸಾಹಿತ್ಯಾಸಕ್ತರು ಭಾಗವಹಿಸಬೇಕೆಂದು ಮನೆ ಮನೆ ಕವಿಗೋಷ್ಠಿ ಸಂಚಾಲಕಿ ಸುಕನ್ಯ ಮುಕುಂದ ಕೋರಿದ್ದಾರೆ. ಮಾಹಿತಿಗಾಗಿ ಮೊ.81238 27811, 8660468341, 9449311298, 7975353693 ಸಂಪರ್ಕಿಸಬಹುದು.

ಒಳ ಮೀಸಲಾತಿ ಸಮೀಕ್ಷೆ ಕಾಲಾವಕಾಶ ವಿಸ್ತರಣೆಗೆ ಒತ್ತಾಯ

ಮೈಸೂರು, ಮೇ22(ಜಿಎ)–ಒಳ ಮೀಸಲಾತಿ ಸಮೀಕ್ಷೆಯ ಕಾಲಾವಕಾಶವನ್ನು ವಿಸ್ತರಿಸಬೇಕು ಎಂದು ದಲಿತ ಮಹಾಸಭಾ ಅಧ್ಯಕ್ಷ ಎಸ್.ರಾಜೇಶ್ ಒತ್ತಾಯಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಜಾತಿ ಗಣತಿ ಸಮರ್ಪಕವಾಗಿ ನಡೆಯುತ್ತಿಲ್ಲ, ಕೂಲಿ ಕಾರ್ಮಿಕರು, ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡುವವರು, ಕೈಗಾರಿಕೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವವರು, ಬೀದಿಬದಿ ವ್ಯಾಪಾರಸ್ಥರು, ಅವಿದ್ಯಾವಂತ ಬಡ ವರ್ಗದವರು, ಶಿಕ್ಷಣದಿಂದ ವಂಚಿತರಾದವರು, ಈ ಸಮೀಕ್ಷೆಯಿಂದ ದೂರು ಉಳಿಸಿದ್ದಾರೆ. ಇವರಿಗೆಲ್ಲ ಸರಿಯಾದ ಮಾಹಿತಿ ಹಾಗೂ ಸಮಯ ಇಲ್ಲದೇ ಇರುವುದರಿಂದ ಸಮೀಕ್ಷೆ ವೇಳೆಯಲ್ಲಿ ಮಾಹಿತಿ ನೀಡಲು ಕಷ್ಟವಾಗುತ್ತಿದೆ ಎಂದರು.

ಸಮೀಕ್ಷೆ ನಡೆಸುವ ಸಿಬ್ಬಂದಿ ವರ್ಗ ಬೆಳಗ್ಗೆ 10ರಿಂದ ಸಂಜೆ 6ರವರೆಗೆ ಕೆಲಸ ನಿರ್ವಹಿಸಿ, ನಂತರ ತೆರಳುತ್ತಾರೆ. ರೇಷನ್ ಕಾರ್ಡ್‌ನಲ್ಲಿ ಹೆಸರಿಲ್ಲದವರನ್ನು ಜಾತಿ ಗಣತಿ ಸಮೀಕ್ಷೆಯಿಂದ ಕೈ ಬಿಡುತ್ತಿದ್ದಾರೆ. ಜಾತಿಗಣತಿಗೆ ಐದಾರು ದಿನಗಳು ಸಾಕಾಗುವುದಿಲ್ಲ. ಎಸ್‌ಸಿ ಜನಾಂಗದವರು, ಒಂದೆಡೆ ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಪರಿಶಿಷ್ಟ ಪ್ರದೇಶಗಳಲ್ಲಿ ಜಾತಿ ಸಮೀಕ್ಷೆ ಯಶಸ್ವಿಯಾಗುತ್ತಿದೆ. ಆದರೆ ಮೇಲ್ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಪ್ರದೇಶಗಳಲ್ಲಿ ಎಸ್‌ಸಿ ಸಮುದಾಯದ ಜಾತಿಗಣತಿ ಸಮೀಕ್ಷೆಗೆ ಹಿನ್ನಡೆಯಾಗುತ್ತಿದೆ. ಈ ಪ್ರದೇಶದಲ್ಲಿ ವಾಸಿಸುತ್ತಿರುವ ಎಸ್‌ಸಿ ಜನಾಂಗ ತಮ್ಮ ಜಾತಿ ಗೊತ್ತಾದರೆ ಸಾಮಾಜಿಕ ಬಹಿಷ್ಕಾರಕ್ಕೆ ಒಳಗಾಗುತ್ತೇವೆ ಎಂಬ ಭಯದಿಂದ ಜಾತಿಗಣತಿ ಸಮೀಕ್ಷೆಯಿಂದ ದೂರ ಉಳಿಯುವ ಪರಿಸ್ಥಿತಿ ನಿರ್ಮಾಣವಾಗಲಿದೆ. ಹೀಗಾಗಿ ಜಾತಿಗಣತಿ ಸಮೀಕ್ಷೆ ಕೇಂದ್ರಗಳನ್ನು ತೆರೆಯಬೇಕು ಎಂದರು.

ನಿಧನ

ಶ್ರೀಮತಿ ಪುಟ್ಟ ಲಕ್ಷ್ಮಮ್ಮ



ಮೈಸೂರು: ಮೈಸೂರಿನ ಪಡುವಾರಹಳ್ಳಿಯ ದಿವಂಗತ ಬೆಟ್ಟಪ್ಪನವರ ಪತ್ನಿ ಶ್ರೀಮತಿ ಪುಟ್ಟಲಕ್ಷ್ಮಮ್ಮ (82) ಅವರು ಇಂದು ಮುಂಜಾನೆ ನಿಧನರಾದರು. ಮೃತರು ಪುತ್ರರು, ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಇಂದು ಸಂಜೆ ಗೋಕುಲಂ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕನ್ನಂಡ ವೀಣಾ ಪ್ರಕಾಶ್



ಮೈಸೂರಿನ ವಿವಿ ಮೊಹಲ್ಲಾ ನಿವಾಸಿ ಕನ್ನಂಡ ವೀಣಾ ಪ್ರಕಾಶ್ (ತಾಮನೆ ಚಿಯ್ಯಾಬಿರ) ಅವರು ಇಂದು ಸಂಜೆ ನಿಧನರಾದರು. ಮೃತರು ಪತಿ ಕನ್ನಂಡ ಪ್ರಕಾಶ್, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗ ಅಗಲಿದ್ದು, ನಾಳೆ (ಮೇ 23) ಮಧ್ಯಾಹ್ನ 1 ಗಂಟೆಗೆ ಗೋಕುಲಂನಲ್ಲಿರುವ ಚಿರಶಾಂತಿ ಧಾಮದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಲಿನ ನೀರಿನಿಂದ ತುಂಬಿ ತುಳುಕುತ್ತಿರುವ ಮೈಸೂರು ದಳವಾಯಿ ಕೆರೆಗೆ ಮುಕ್ತಿ ಕಲ್ಪಿಸಲು ಹೊಸ ಯೋಜನೆ

ಶುದ್ಧೀಕರಿಸಿದ ನೀರು ಕೆರೆಗೆ ಹರಿಸಲು 18.71 ಕೋಟಿ ಯೋಜನೆಗೆ ಸರ್ಕಾರದ ಅನುಮೋದನೆ



ಮೈಸೂರು, ಮೇ 22(ಎಸ್‌ಪಿಎನ್)– ಹಲವು ವರ್ಷಗಳಿಂದ ಕಲುಷಿತ ನೀರು ತುಂಬಿಕೊಂಡು ಸುತ್ತಮುತ್ತಲಿನ ಪ್ರದೇಶಗಳಿಗೆ ದುರ್ವಾಸನೆ ಬೀರುತ್ತಿದ್ದ ಮೈಸೂರು–ನಂಜನಗೂಡು ರಸ್ತೆಯ ಐತಿಹಾಸಿಕ ದಳವಾಯಿ ಕೆರೆಗೆ ಇದೀಗ ಶುದ್ಧೀಕರಿಸಿದ ನೀರು ಹರಿಸಲು ನಿರ್ಧರಿಸಿದೆ.

ಕೆರೆಗೆ ಕೊಳಚೆ ನೀರು ಹರಿಯುವುದನ್ನು ತಪ್ಪಿಸಲು ರಾಜ್ಯ ಸರ್ಕಾರ ಮೊದಲ ಬಾರಿಗೆ ಎಸ್‌ಬಿಆರ್ (ಸಿಕ್ವೆನ್ಸಿಂಗ್ ಬ್ಯಾಚ್ ರಿಯಾಕ್ಟರ್) ತಂತ್ರಜ್ಞಾನದಲ್ಲಿ ಅಂದಾಜು 18.71 ಕೋಟಿ ರೂ. ವೆಚ್ಚದಲ್ಲಿ 3 ಎಂಎಲ್‌ಡಿ ಮಲಿನ ನೀರು ಶುದ್ಧೀಕರಣ ಘಟಕವನ್ನು ಸ್ಥಾಪಿಸುವ ಯೋಜನೆಗೆ ಸಂಪುಟದ ಅನುಮೋದನೆ ದೊರೆತಿದ್ದು, ಸದ್ಯದಲ್ಲಿಯೇ ಟೆಂಡರ್ ಪ್ರಕ್ರಿಯೆ ಆರಂಭವಾಗಲಿದೆ.

ಈ ಯೋಜನೆಯನ್ನು ಕರ್ನಾಟಕ ಜಲಮಂಡಳಿ ವತಿಯಿಂದ ಅನುಷ್ಠಾನಗೊಳಿಸಲು ಚಿಂತಿಸಿದ್ದು, ಎಸ್‌ಬಿಆರ್ ತಂತ್ರಜ್ಞಾನದಲ್ಲಿ ಮತ್ತಷ್ಟು ಪರಿಣಾಮಕಾರಿಯಾಗಿ ಹಾಗೂ ದೊಡ್ಡ ಮಟ್ಟದಲ್ಲಿ ಕಲುಷಿತ ನೀರನ್ನು ಶುದ್ಧೀಕರಿಸಬಹುದಾಗಿದೆ. ಮೈಸೂರಲ್ಲಿ ಇದೇ ಮೊದಲ ಬಾರಿಗೆ ಸರ್ಕಾರಿ ವ್ಯವಸ್ಥೆಯಲ್ಲಿ ಕಲುಷಿತ ನೀರನ್ನು ಶುದ್ಧೀಕರಿಸಲು ಈ ತಂತ್ರಜ್ಞಾನ ಬಳಸಲಾಗುತ್ತಿದೆ.

ಕೆರೆಯ ಮೇಲ್ಭಾಗದ ಕುಪ್ಪಲೂರು ಬಳಿ ಘಟಕ ನಿರ್ಮಿಸಲು ಚಿಂತಿಸಿದ್ದು, ಕಾಮಗಾರಿ ಅನುಷ್ಠಾನ ಜವಾಬ್ದಾರಿ ನಿರ್ವಹಣೆ ಮಾಡುವವರು 5 ವರ್ಷಗಳವರೆಗೆ ಅದರ ಕಾರ್ಯಾಚರಣೆ ಮತ್ತು ನಿರ್ವಹಣೆ ಮಾಡಬೇಕು. ಕೆಲವೇ ತಿಂಗಳಲ್ಲಿ ಕಾಮಗಾರಿ ಕೈಗೊಳ್ಳಲು ಟೆಂಡರ್ ಪ್ರಕ್ರಿಯೆ ಆರಂಭಿಸಲಾಗುವುದು. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಒಂದೂವರೆ ವರ್ಷದಲ್ಲಿ ಯೋಜನೆ ಪೂರ್ಣಗೊಳಿಸಬೇಕು ಎಂದು ಷರತ್ತು ವಿಧಿಸಲಾಗುವುದು ಎಂದು ನಗರ ನೀರು ಸರಬರಾಜು ಮತ್ತು ಒಳಚರಂಡಿ ಇಲಾಖೆ ಕಾರ್ಯಪಾಲಕ ಅಭಿಯಂತರ ಆಸಿಫ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಎನ್‌ಜಿಟಿ ನಿಯಮಕ್ಕೆ ಅನುಗುಣವಾಗಿ ಪರಿಷ್ಕರಣೆ: ದಳವಾಯಿ ಕೆರೆ ಮೇಲ್ಭಾಗದ ಬಡಾವಣೆಗಳ ತ್ಯಾಜ್ಯ ನೀರು ಸೇರುವ ಜಾಗದಲ್ಲಿ ಪೈಪ್‌ಲೈನ್ ಅಳವಡಿಸಿ, ಅದರ ಕೆಳಗೆ ತೇವಬಾವಿ (ವೆಟ್‌ವೆಲ್)ನಿರ್ಮಿಸಲಾಗುವುದು. ಇಲ್ಲಿ ಮಲಿನ ನೀರು ಪ್ರಾಥಮಿಕ ಶುದ್ಧೀಕರಣವಾಗುತ್ತದೆ. ಈ ಹಂತದಲ್ಲಿ ತೇಲುವ ವಸ್ತುಗಳ ಪರಿಷ್ಕರಣೆಯಾಗುತ್ತದೆ. ಜೊತೆಗೆ ಬಿಒಡಿ(ಬಯೋ ಆಕ್ಸಿಜನ್ ಡಿಮಾಂಡ್) ಪ್ರಮಾಣವನ್ನು ಎನ್‌ಜಿಟಿ(ನ್ಯಾಷನಲ್ ಗ್ರೀನ್ ಟ್ರಿಬ್ಯುನಲ್) ನಿಯಮಾನುಸಾರವಾಗಿ 150ರಿಂದ 200ರಷ್ಟಿರುವ ಬಯೋ ಆಕ್ಸಿಜನ್ ಪ್ರಮಾಣವನ್ನು 10ಕ್ಕಿಂತ ಕಡಿಮೆ ಪ್ರಮಾಣಕ್ಕೆ ಇಳಿಸಲಾಗುತ್ತದೆ. ನಂತರ ಈ ನೀರನ್ನು ಕೆರೆಗೆ ಹರಿಸಲಾಗುತ್ತದೆ.

ಮೈಸೂರು–ನಂಜನಗೂಡು ಮಾರ್ಗದಲ್ಲಿ 5 ಕಿ.ಮೀ. ಸಾಗಿದರೆ ದಳವಾಯಿ ಕೆರೆ ಸಾರ್ವಜನಿಕರ ಗಮನ ಸೆಳೆಯುತ್ತದೆ. ಈ ಕೆರೆಗೆ ಗೆಜ್ಜಗಳ್ಳಿಯ ಮೂಲಕ ಹೋದಾಗ ವಾಸನೆ ಬೀರುತ್ತಿದೆ. ಒಂದು ಕಾಲದಲ್ಲಿ ಕೃಷಿ, ಕುಡಿಯುವ ನೀರಿನ ಅಗತ್ಯಕ್ಕಾಗಿ ರಾಜರು ನಿರ್ಮಿಸಿರುವ ಕೆರೆಯಾಗಿದ್ದು, ಈ ಕೆರೆ ವ್ಯಾಪ್ತಿಗೆ ಬಿಇಎಂಎಲ್ ನಗರ, ಶ್ರೀನಗರ ಇತರೆ ಖಾಸಗಿ ಬಡಾವಣೆಗಳು, ಜೆಪಿ ನಗರ, ನಾಚನಹಳ್ಳಿ ಪಾಳ್ಯ, ವಿಶ್ವೇಶ್ವರಯ್ಯ ನಗರದ ಭಾಗಶಃ ಪ್ರದೇಶಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯ ನೀರು ಕೊಪ್ಪಲೂರು ಬಳಿ ದೊಡ್ಡ ತೊರೆಯಂತೆ ಹರಿದು ಸೇರುತ್ತದೆ.

ನಗರೀಕರಣದಿಂದ ಹಲವು ಕೆರೆಗಳ ಒತ್ತುವರಿ: ಬಯಲು ಪ್ರದೇಶಗಳಲ್ಲಿ ಕೆರೆಗಳ ಸಂಪ್ರದಾಯ ಹಳೆಯದು. ಮೈಸೂರು ಪ್ರಾಂತ್ಯವು ರಾಜಾಶ್ರಯದಲ್ಲಿ ಅನೇಕ ಕೆರೆಕಟ್ಟೆಗಳನ್ನು ಹೊಂದಿತ್ತು. ಕೃಷಿಗೆ ನೀರು, ದನಕರುಗಳು, ಪ್ರಾಣಿ– ಪಕ್ಷಿಗಳಿಗೆ ಕುಡಿಯಲು ಮತ್ತು ಮೇವಿಗೆ ವರ್ಷಪೂರ್ತಿ ನೀರು ಒದಗಿಸಲು ಈ ಕೆರೆಗಳು ಜಲಾಶ್ರಯ ತಾಣಗಳಾಗಿದ್ದವು.

ಮೈಸೂರು ತಾಲೂಕಿನ ಶೇ.25 ಕೆರೆಗಳೀಗ ಮುಚ್ಚಿಹೋಗಿವೆ. ಹಲವು ಕೆರೆಗಳು ನಗರೀಕರಣದಿಂದಾಗಿ ಒತ್ತುವರಿ ಆಗಿವೆ. ಇದಲ್ಲದೇ ಮೈಸೂರಿನ ಬಹುತೇಕ ಕೆರೆಗಳಿಗೆ ಕಾಲುವೆ ಮೂಲಕ ಚರಂಡಿ ನೀರು ಹರಿಯುತ್ತಿದ್ದು, ಲಿಂಗಾಂಬುದಿ, ಕಾರಂಜಿ, ಕುಕ್ಕರಹಳ್ಳಿ ಹಾಗೂ ಬೋಗಾದಿ ಕೆರೆಗಳು ಕೊಳಚೆ ನೀರಿನಿಂದ ಬಾಧಿತವಾಗಿವೆ. ವರ್ತುಲ ರಸ್ತೆ ನಿರ್ಮಾಣದಿಂದಾಗಿ ನಗರದ ಸಂಚಾರ ದಟ್ಟಣೆ ಕ್ಷೀಣಿಸಿದೆಯಾದರೂ ಐದು ಕೆರೆಗಳು ಅಳಿವಿನ ಅಂಚಿಗೆ ಸಿಲುಕಿವೆ. ಇದರ ಪೈಕಿ ಮೈಸೂರು–ನಂಜನಗೂಡು ರಸ್ತೆಗೆ ಹೊಂದಿಕೊಂಡಿರುವ ದಳವಾಯಿ ಕೆರೆಯೂ ಒಂದಾಗಿದೆ. ಇದು 16.50 ಚ.ಕಿ.ಮೀ. ಜಲಾನಯನ ಪ್ರದೇಶ ಹೊಂದಿದೆ ಎನ್ನುತ್ತಾರೆ ಮೈಗ್ರಾಪ ಸದಸ್ಯ ಭಾಮಿ ವಿ.ಶೆಣೈ.



ಐತಿಹಾಸಿಕ ಕೆರೆಗಳನ್ನು ಉಳಿಸಿಕೊಳ್ಳಬೇಕೆಂಬುದು ಎಲ್ಲರ ಒತ್ತಾಸೆ. ಕೆರೆಯ ಸುತ್ತಮುತ್ತ ಒತ್ತುವರಿ ತೆರವುಗೊಳಿಸಿ ಯಥಾಸ್ಥಿತಿಯಲ್ಲಿ ಉಳಿಸಿಕೊಳ್ಳಬೇಕು ಎಂಬುದು ಪರಿಸರ ಪ್ರಿಯರ ಒತ್ತಾಯ. ಅಂತೆಯೇ ಮಲಿನ ನೀರು ಕೆರೆಗೆ ಬಾರದಂತೆ ತಡೆಯುವುದು ಸರ್ಕಾರದ ಮೊದಲ ಆದ್ಯತೆ ಆಗಬೇಕು. ಮಲಿನ ನೀರು ಶುದ್ಧೀಕರಿಸುವ ನೆಪದಲ್ಲಿ ಅಲ್ಲಿ ಹಣ ಹೂಡಿಕೆ ಮಾಡುವುದರಲ್ಲಿ ಅರ್ಥ ಇದೆಯೇ?. **–ಭಾಮಿ ವಿ.ಶೆಣೈ, ಮೈಗ್ರಾಪ ಸದಸ್ಯರು**

ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್, ಡಿಸೈನ್‌ನಿಂದ ವಿನ್ಯಾಸ, ಬಿಲ್ಟ್ ಎನ್ವಿರಾನ್‌ಮೆಂಟ್‌ನಲ್ಲಿ ಬಿಎಸ್‌ಸಿ ಕೋರ್ಸ್ ಆರಂಭ

ಮೈಸೂರು, ಮೇ22(ಜಿಎ)–ಎಲ್.ಕೆ. ಮೆಮೋರಿಯಲ್ ಚಾರಿಟೆಬಲ್ ಟ್ರಸ್ಟ್‌ನಿಂದ ಸ್ಥಾಪಿತವಾಗಿರುವ ಮೈಸೂರು ಸ್ಕೂಲ್ ಆಫ್ ಆರ್ಕಿಟೆಕ್ಚರ್ ಮತ್ತು ಡಿಸೈನ್ ವತಿಯಿಂದ ಮೈಸೂರು ವಿಶ್ವವಿದ್ಯಾಲಯದಿಂದ ಗುರುತಿಸಲ್ಪಟ್ಟ ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಅನುಗುಣವಾಗಿ ಒಳಾಂಗಣ ವಿನ್ಯಾಸ ಮತ್ತು ಬಿಲ್ಟ್ ಎನ್ವಿರಾನ್‌ಮೆಂಟ್‌ನಲ್ಲಿ ಮೂರು ವರ್ಷಗಳ ಬಿ.ಎಸ್‌ಸಿ ಕೋರ್ಸ್ ಅನ್ನು ನೀಡಲಾಗುತ್ತಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ಟ್ರಸ್ಟಿ ಜೆ.ಎನ್.ಪ್ರಶಾಂತ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಮೊದಲ ವರ್ಷದ ನಂತರ ಪ್ರಮಾಣಪತ್ರವನ್ನು, 2ನೇ ವರ್ಷದ ನಂತರ ಡಿಪ್ಲೊಮಾವನ್ನು ಮತ್ತು 3ನೇ ವರ್ಷ ಪೂರ್ಣಗೊಂಡ ನಂತರ ಪೂರ್ಣ ಪದವಿಯನ್ನು ಪಡೆಯಬಹುದಾಗಿದೆ. ಹೆಚ್ಚುವರಿಯಾಗಿ, ಶೈಕ್ಷಣಿಕ ಶ್ರೇಷ್ಠತೆಯನ್ನು ಪ್ರದರ್ಶಿಸುವ ಮತ್ತು ತಮ್ಮ ಪರಿಣತಿಯನ್ನು ಆಳಗೊಳಿಸಲು ಬಯಸುವ ವಿದ್ಯಾರ್ಥಿಗಳು ನಾಲ್ಕನೇ ವರ್ಷದ ಹಾನರ್ಸ್ ಕೋರ್ಸ್ ಅನ್ನೂ ಆಯ್ಕೆ ಮಾಡಿಕೊಳ್ಳಲು ಅವಕಾಶವಿದೆ ಎಂದರು.

ಮೇ 24ರಂದು ಬೆಳಗ್ಗೆ 9ರಿಂದ ಸಂಜೆ 5ರವರೆಗೆ 'ಓಪನ್ ಡೇ 2025' ಅನ್ನು ಆಯೋಜಿಸಲಾಗಿದೆ. ಈ ಕಾರ್ಯಕ್ರಮದ ಮೂಲಕ ಎಂಎಸ್‌ಎನಲ್ಲಿ ಲಭ್ಯವಿರುವ ಶೈಕ್ಷಣಿಕ ಪರಿಸರವನ್ನು ಸಾರ್ವಜನಿಕರು, ಸಂಭಾವ್ಯ ವಿದ್ಯಾರ್ಥಿಗಳು ಮತ್ತು ಪೋಷಕರು ತಿಳಿದುಕೊಳ್ಳಬಹುದಾಗಿದೆ. ಎಂಎಸ್‌ಎ ವಿದ್ಯಾರ್ಥಿಗಳಿಂದ ನವೀನ ವಾಸ್ತುಶಿಲ್ಪ ವಿನ್ಯಾಸಗಳು, ಯೋಜನೆಗಳ ಪ್ರದರ್ಶನವೂ ಇದ್ದು, ಸಂದರ್ಶಕರಿಗೆ ಬಿ.ಆರ್ಕ್ ಕಾರ್ಯಕ್ರಮ, ಕ್ಯಾಂಪಸ್ ಜೀವನ ಮತ್ತು ಅರ್ಜಿ ಸಲ್ಲಿಸುವ ಪ್ರಕ್ರಿಯೆಯ ಬಗ್ಗೆ ತಿಳಿದುಕೊಳ್ಳಲು ಅವಕಾಶಗಳನ್ನು ಒಳಗೊಂಡಿರುತ್ತದೆ. ಮಾಹಿತಿಗಾಗಿ 9113870169/ 0821–2970895 ಸಂಪರ್ಕಿಸಿ ಎಂದರು. ಗೋಷ್ಠಿಯಲ್ಲಿ ಸಂಸ್ಥೆಯ ಟ್ರಸ್ಟಿ ಡಾ.ಲಕ್ಷ್ಮಿ ದೇವಿ, ಗೋಪಾಲಕೃಷ್ಣ ಇದ್ದರು.

ಬೇಡ ಜಂಗಮ, ವೀರಶೈವ ಜಂಗಮರ ಬಗ್ಗೆ ಸರ್ಕಾರ ಸ್ಪಷ್ಟನೆ ನೀಡಬೇಕು

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಭಾಸ್ಕರ್ ಆಗ್ರಹ

ಮೈಸೂರು, ಮೇ 22(ಬಿಎಲ್‌ಯು)– ಪರಿಶಿಷ್ಟ ಜಾತಿ ಗಣತಿ ನಡೆಯುತ್ತಿರುವ ಈ ಸಂದರ್ಭದಲ್ಲಿ ಬೇಡ ಜಂಗಮ ಹಾಗೂ ವೀರಶೈವ ಜಂಗಮ ಜಾತಿ ಬಗ್ಗೆ ಸ್ಪಷ್ಟನೆ ನೀಡಬೇಕು. ಜೊತೆಗೆ ಕುಲಶಾಸ್ತ್ರೀಯ ಅಧ್ಯಯನ ನಡೆಸಿ ಸ್ಪಷ್ಟ ವರ್ಗೀಕರಣ ಮಾಡಬೇಕೆಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಪರಿಶಿಷ್ಟ ಜಾತಿ ಗಣತಿ ವೇಳೆ ಬೇಡ ಜಂಗಮ ಮತ್ತು ವೀರಶೈವ ಜಂಗಮ ಜಾತಿಯವರು ತಾವು ಪರಿಶಿಷ್ಟ ಜಾತಿಗೆ ಸೇರಿದ ಜನರೆಂದು ಬರೆಸುತ್ತಿದ್ದಾರೆ. ಈ ಬಗ್ಗೆ ಎದುರಾಗಿರುವ ಗೊಂದಲ ನಿವಾರಣೆ ಮಾಡುವಂತೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಜ್ಯ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ ಎಂದು ಹೇಳಿದ್ದಾರೆ. ಅಲೆಮಾರಿ ಕಲಾವಿದರ ಗುಂಪು (ಬೇಡ ಜಂಗಮ) ಹಾಗೂ ಧಾರ್ಮಿಕ ಶಿಕ್ಷಕರ ಒಂದು ಪಂಗಡ (ವೀರಶೈವ ಜಂಗಮ) ಇಬ್ಬರೂ ತಾವು ಬೇಡ ಜಂಗಮರೆಂದು ಗುರುತಿಸಿಕೊಂಡಿದ್ದು, ತಾವು ಪರಿಶಿಷ್ಟ ಜಾತಿಗೆ ಸೇರಿದ್ದೇವೆ ಎಂದು ಹೇಳುತ್ತಿದ್ದಾರೆ. ಇದು ಸಮಸ್ಯೆ ಉದ್ಭವವಾಗಲು ಮೂಲ ಕಾರಣವಾಗಿದೆ ಎಂದು ಭಾಸ್ಕರ್ ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಇವರು ಮಾಂಸಾಹಾರಿಗಳೇ ಅಥವಾ ಸಸ್ಯಾಹಾರಿಗಳೇ ಎಂಬುದು ಸೇರಿದಂತೆ ಕುಲಶಾಸ್ತ್ರೀಯ ಅಧ್ಯಯನ ನಡೆಸಿ, ಯಾವ ಸಮುದಾಯಕ್ಕೆ ಸೇರಿದ್ದಾರೆಂದು ಸ್ಪಷ್ಟನೆ ನೀಡಬೇಕೆಂದು ಒತ್ತಾಯಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.05.2025 ಶುಕ್ರವಾರ, ಮಳೆ ನಕ್ಷತ್ರ: ಕೃತ್ತಿಕ 11.05.2025 ರಿಂದ 24.05.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಉಭಾ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶಾಲಾಕ್ಯ ತಂತ್ರ ಸ್ನಾತಕೋತ್ತರ ವಿಭಾಗದಿಂದ ಕಣ್ಣಿನ ದೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ವಿಶೇಷ ಬೇಸಿಗೆ ಆರೋಗ್ಯ ಶಿಬಿರ, ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಮೂತ್ರಪಿಂಡ (ಕಿಡ್ನಿ) ಕಾಯಿಲೆಗೆ ಚಿಕಿತ್ಸಾ ಶಿಬಿರ, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಸಂಧಿವಾತ ವ್ಯಾದಿಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಬಳಿ, ಕೆಬಿಎಲ್ ಲೇಔಟ್, ಬೆಳಗ್ಗೆ 10ಕ್ಕೆ.

■ **ಫಾರೂಖಿಯಾ ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆ :** ಡಿಜಿಟಲ್ ಡೆಂಟಲ್ ಕ್ಲಿನಿಕ್ ಉದ್ಘಾಟನೆ, ಉಪಸ್ಥಿತರು: ಆರ್‌ಎಂಇಟಿ ಗೌರವ ಕಾರ್ಯದರ್ಶಿ ತಾಜ್ ಮೊಹಮದ್ ಖಾನ್, ಹುಣಸೂರು ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಉಮರ್ ಖಯ್ಯಾಂ ರಸ್ತೆ, ಬನ್ನಿಮಂಟಪ, ಮೈಸೂರು, ಬೆಳಗ್ಗೆ 10ಕ್ಕೆ.

■ **ಜಿಲ್ಲಾ ಆಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ:** ಡೇ ಕೇರ್ ಕೀಮೋಥೆರಪಿ ಕೇಂದ್ರ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಮುಖ್ಯಮಂತ್ರಿ ಸಿದ್ದರಾಮಯ್ಯ, ಮುಖ್ಯ ಅತಿಥಿಗಳು : ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ, ಪಶು ಸಂಗೋಪನೆ ಮತ್ತು ರೇಷ್ಮೆ ಇಲಾಖೆ ಸಚಿವ ಕೆ.ವೆಂಕಟೇಶ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್, ಅಧ್ಯಕ್ಷತೆ : ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ. ಹರೀಶ್ ಗೌಡ, ಉಪಸ್ಥಿತರು : ಶಾಸಕ ಅನಿಲ್ ಕುಮಾರ್.ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ ರಮೇಶ್ ಬಂಡಿ ಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪ ಅಮರನಾಥ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ. ಮಾನಸ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ರವಿಶಂಕರ್ ಡಿ, ಟಿ.ಎಸ್. ಶ್ರೀವತ್ಸ, ದರ್ಶನ್ ಧ್ರುವನಾರಾಯಣ್, ಜಿ.ಡಿ.ಹರೀಶ್ ಗೌಡ, ವಿಧಾನಪರಿಷತ್ ಸದಸ್ಯರಾದ ಹೆಚ್. ವಿಶ್ವನಾಥ್, ಡಾ. ಡಿ. ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ. ಮಾದೇಗೌಡ, ಡಾ. ಯತೀಂದ್ರ ಎಸ್. ಮತ್ತು ವಿವೇಕಾನಂದ ಎಸ್., ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ಸ್ಥಳ: ಜಿಲ್ಲಾಸ್ಪತ್ರೆ, ಮೇಟಗಳ್ಳಿ, ಸಂಜೆ 5ಕ್ಕೆ.

■ **ಗಾನಭಾರತೀ :** ಬಿ.ಎನ್.ರಾಮಾನುಜ ಅಯ್ಯಂಗಾರ್ ಸಂಸ್ಮರಣಾ ಸಂಗೀತ ಕಛೇರಿ, ವಿದುಷಿ ಭಾರ್ಗವಿ ವೆಂಕಟರಾಮನ್ ಅವರಿಂದ ಗಾಯನ, ವಿದ್ವಾನ್ ಅದಮ್ಯ ರಮಾನಂದ್–ಮೃದಂಗ, ವಿದ್ವಾನ್ ವೈಭವ್ ರಮಣಿ–ಪಿಟೀಲು, ವಿದ್ವಾನ್ ಹರೀಶ್‌ಚಂದ್ರ–ಖಂಜಿರ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6 ರಿಂದ.

■ **ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ :** ಆಪರೇಷನ್ ಸಿಂದೂರ್ ಒಂದು ಅವಲೋಕನ ಕುರಿತು ಗ್ರೂಪ್ ಕ್ಯಾಪ್ಟನ್ (ನಿವೃತ್ತ) ಡಾ. ವಿನಯ್ ವಿಟ್ಠಲ್ ಅವರಿಂದ ತಾಂತ್ರಿಕ ಉಪನ್ಯಾಸ, ಅಧ್ಯಕ್ಷತೆ : ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಅಧ್ಯಕ್ಷ ಡಾ. ಆರ್. ದೀಪು, ಸ್ಥಳ: ಎಸ್.ಪಿ.ಭಟ್ ಹಾಲ್, ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಸಂಜೆ 6ಕ್ಕೆ.

ದೊಡ್ಡಮಾರಗೌಡನಹಳ್ಳಿಯಲ್ಲಿಂದು, ಮೈಸೂರು ತಾ.

■ **ಶ್ರೀ ಅರುಣೋದಯ ಸೇವಾ ಟ್ರಸ್ಟ್, ಶ್ರೀ ಶನೇಶ್ವರಸ್ವಾಮಿ ದೇವಸ್ಥಾನ :** ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದ ಉದ್ಘಾಟನೆ, ವಿಗ್ರಹ ಹಾಗೂ ರಾಜಗೋಪುರದ ಕಳಸ ಪ್ರತಿಷ್ಠಾಪನಾ ಮಹೋತ್ಸವ, ಬೆಳಗ್ಗೆ 6ಕ್ಕೆ ದೊಡ್ಡ ಮಾರಗೌನಹಳ್ಳಿಯ ರಾಜಬೀದಿಯಲ್ಲಿ ವೀರ ಮಕ್ಕಳ ಕುಣಿತ, ನಂದಿಕಂಬ ಛತ್ರಿ ಚಾಮರಗಳ ಸಮೇತ ಹೆಣ್ಣು ಮಕ್ಕಳಿಂದ ದೇವರು ತರುವ ಕಾರ್ಯಕ್ರಮ, 8ಕ್ಕೆ ಶ್ರೀ ಶನೇಶ್ವರಸ್ವಾಮಿ ವಿಗ್ರಹ ಪ್ರತಿಷ್ಠಾಪನೆ, ಶ್ರೀ ಪ್ರಸನ್ನಾನಂದಪುರಿ ಮಹಾಸ್ವಾಮಿಗಳವರಿಂದ ಕಳಸ ಪ್ರತಿಷ್ಠಾಪನೆ, ಪ್ರತಿಷ್ಠಾ ಹೋಮ, ನವಗ್ರಹ ಹೋಮ, ಕಲಾವೃದ್ಧಿ ಹೋಮ, 11ಕ್ಕೆ ಮಹಾ ಪೂರ್ಣಾಹುತಿ, ಸ್ವಾಮೀಜಿಯವರಿಂದ ಹಿತವಚನ, 12ಕ್ಕೆ ತೀರ್ಥಪ್ರಸಾದ, ಆಶೀರ್ವಾದ ಗ್ರಹಣ, ಅನ್ನಸಂತರ್ಪಣೆ,ಸ್ಥಳ: ಶ್ರೀಕ್ಷೇತ್ರ, ಶನೇಶ್ವರಸ್ವಾಮಿ ದೇವಸ್ಥಾನ.

ಬಿಳಿಗಿರಿರಂಗನಬೆಟ್ಟದಲ್ಲಿಂದು

■ **ಸುತ್ತೂರು ಶ್ರೀಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ :** ಜೀವನೋತ್ಸಾಹ ಶಿಬಿರ, ಸಾನ್ನಿಧ್ಯ : ಸುತ್ತೂರು ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿ, ಉದ್ಘಾಟನೆ : ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ಡಿ.ಎಸ್. ರಮೇಶ್, ಅಧ್ಯಕ್ಷತೆ : ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ಮುಖ್ಯ ಅತಿಥಿಗಳು : ಕರ್ನಾಟಕ ಲೋಕಸೇವಾ ಆಯೋಗದ ಸದಸ್ಯ ಡಾ. ಬಿ.ಪ್ರಭುದೇವ ಹಾಗೂ ಚಾಮರಾಜನಗರ ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ಬಿ.ಟಿ. ಕವಿತಾ, ಸ್ಥಳ: ಬಿಳಿಗಿರಿರಂಗನಬೆಟ್ಟ, ಬೆಳಗ್ಗೆ 10 ರಿಂದ.

ಹಾರೋಹಳ್ಳಿಯಲ್ಲಿಂದು, ಮೈಸೂರು ತಾ.

■ **ಬಾಲರಾಮ ಶಿಲೋದ್ಭವ ಕ್ಷೇತ್ರ :** ದಕ್ಷಿಣ ಅಯೋಧ್ಯಾ, ಅಯೋಧ್ಯೆ ಶ್ರೀ ಬಾಲರಾಮನ ಮೂರ್ತಿಗೆ ಶಿಲೆ ದೊರೆತ ಸ್ಥಳವಾದ ಮೈಸೂರು ತಾಲೂಕಿನ ಹಾರೋಹಳ್ಳಿ ಗ್ರಾಮದಲ್ಲಿ ಮಂದಿರ ನಿರ್ಮಾಣಕ್ಕಾಗಿ ಧ್ವಜಾರೋಹಣ ಹಾಗೂ ಶ್ರೀ ಬಾಲರಾಮನ ಮೂರ್ತಿ ಕೆತ್ತನೆಯ ಚಾಲನೆ ಕಾರ್ಯಕ್ರಮ, ಸಾನ್ನಿಧ್ಯ : ಉಡುಪಿ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಮುಖ್ಯ ಅತಿಥಿಗಳು : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ.ದೇವೇಗೌಡ, ಶಿಲ್ಪಿ ಅರುಣ್ ಯೋಗಿರಾಜ್, ಆರ್‌ಎಸ್‌ಎಸ್ ಮುಖಂಡ ಮಾ.ವೆಂಕಟರಾಮ್‌ಜೀ, ಪ್ರಾಚೀನ ಇತಿಹಾಸ ಪುರಾತತ್ವ ಅಧ್ಯಯನ ಸಂಶೋಧನಾ ವಿಭಾಗದ ಮುಖ್ಯಸ್ಥ ಪ್ರೊ. ಶೆಲ್ವಪಿಳ್ಳೈ ಅಯ್ಯಂಗಾರ್, ಸ್ಥಳ: ಹಾರೋಹಳ್ಳಿ, ಬೆಳಗ್ಗೆ 10ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಾಧನ – ಶೋಧನ ಗ್ರಾಮೀಣ ಪರಿಸರದ ಉಪಕರಣಗಳು, ಲೇಖನ: ಡಾ. ಎಂ.ಎನ್. ಚಿಕ್ಕಮಾದು, ಪ್ರಸ್ತುತಿ : ಡಾ. ಮೈಸೂರು ಉಮೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ– ಕೆ. ಬಿ. ಸುನೀತಾ ಆಚಾರ್ಯ ಹಾಗೂ ಬಿ. ಶ್ರೀರಾಮ್ ಭಟ್, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಯೋಗ ಕುರಿತ ವಿಶೇಷ ಸರಣಿ ಮಹಾಯೋಗ, 9.00 ನಮ್ಮ ಆರೋಗ್ಯ–ಕ್ರಾನಿಕ್ ಕಿಡ್ನಿ ಡಿಸೀಸ್–ಸಿ.ಕೆ.ಡಿ. ಕುರಿತು ಡಾ. ಶಶಿಕಿರಣ್ ಕೆ.ಬಿ. ಅವರೊಂದಿಗೆ ಮಾತುಕತೆ ಮತ್ತು ಸೋರಿಯಾಟಿಕ್ ಆರ್ ಥ್ರೈಟಿಸ್–ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಡಾ. ಸಂಗೀತಾ ಕೆ.ಎನ್. ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ.ಎಸ್. ಗೋಪಾಲಕೃಷ್ಣನ್, ಎಂ.ಎಸ್.ಜಿ. ಸುರೇಶ್ ಮತ್ತು ಡಾ. ಎಂ., ನರ್ಮದಾ–ವೈಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಸಂಗೀತ ಸಂಭ್ರಮ ನಾದಲಯ ಸಂಗಮ, ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ, 12.45 ಕಾದಂಬರಿ ವಿಹಾರ – ಎಂ. ಆರ್. ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ : ಉಮೇಶ್. ಎಸ್.ಎಸ್., 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ. ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ–ಜಾನ್ ಬಿ. ಹಿಗ್ಗಿನ್ಸ್–ಹಾಡುಗಾರಿಕೆ, 4.00 ಮಹಿಳಾರಂಗ–ಜನಪ್ರಿಯ ವಿಜ್ಞಾನ ಬರಹಗಾರ್ತಿ ಶ್ರೀಮತಿ ಹರಿಪ್ರಸಾದ್ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಮೀನಾ ಮೈಸೂರು, 4.30 ವೃತ್ತಿ ಮಾರ್ಗದರ್ಶನ–ಮ್ಯಾನೇಜ್‌ಮೆಂಟ್ ಸ್ಟಡೀಸ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮಂಡ್ಯ ಜಿಲ್ಲೆ ಚಿನಕುರಳಿಯ ಎಸ್. ಟಿ.ಜಿ.ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ನಿಶಾಂತ್ ಎ ನಾಯ್ದು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 6.50 ಕೃಷಿರಂಗ– ಹವಾಮಾನ ಮಿತ್ರ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ, ಬೆಂಗಳೂರು, ಸಂಶೋಧನಾ ಸಾರ–ಕೃಷಿ ಕ್ಷೇತ್ರದ ಹೊಸ ಅವಿಷ್ಕಾರ, ಪ್ರಸ್ತುತಿ– ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ–ಯಾರು ಕಾಣದ ಪ್ರವಾಸಿ ತಾಣ, 8.00 ಸಂಧ್ಯಾರಾಗ– ಮಡಿಕೆ ವೃತ್ತಿಯ ಬೂಕನ ಕೆರೆ ಸಣ್ಣಶೆಟ್ಟಿ ಮತ್ತು ಅವರ ಮಡದಿ ಪುಟ್ಟರಾಜಮ್ಮ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಜಾಂಪಣ್ಣ ಆಶೀಹಾಳ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ–ಮಧುರೈ ಟಿ. ಎನ್. ಶೇಷಗೋಪಾಲನ್ –ಹಾಡುಗಾರಿಕೆ, 10.00 ಜನಪದ ಸಂಗೀತ, 10.25 ಸವಿನೆನಪು – ಹಳೆಯ ಕನ್ನಡ ಚಿತ್ರಗೀತೆಗಳು

ಪಾರ್ಟ್ ಟೈಂ ಕೆಲಸಕ್ಕೆ ವೈದ್ಯೆ; ಷೇರು ಹೂಡಿಕೆಯಲ್ಲಿ ಶಿಕ್ಷಕನಿಗೆ ಲಕ್ಷ ಲಕ್ಷ ವಂಚನೆ!

ಮೈಸೂರು, ಮೇ 22– ಪಾರ್ಟ್ ಟೈಂ ಕೆಲಸದ ನೆಪದಲ್ಲಿ ವೈದ್ಯೆಗೆ ಹಾಗೂ ಷೇರು ಮಾರುಕಟ್ಟೆ ನೆಪದಲ್ಲಿ ಶಿಕ್ಷಕ ರೊಬ್ಬರಿಗೆ ಚಿಲ್ಲರೆ ಲಾಭ ನೀಡಿ ಲಕ್ಷಾಂತರ ರೂ. ಲಪಟಾಯಿಸಿರುವ ಸಂಬಂಧ ಮೈಸೂರಿನ ಸೆನ್ ಪೊಲೀಸ್ ಠಾಣೆ ಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿವೆ.

ಸೈಬರ್ ವಂಚಕರ ಬಲೆಗೆ ಸಿಲುಕಿ ಕೃಷ್ಣಮೂರ್ತಿಪುರಂನ ವೈದ್ಯೆ 14.05 ಲಕ್ಷ ರೂ. ಹಾಗೂ ಕೆ.ಆರ್.ಮೊಹಲ್ಲಾದ ಶಿಕ್ಷಕ 27.26 ಲಕ್ಷ ರೂ. ಕಳೆದುಕೊಂಡಿದ್ದಾರೆ.

ಪ್ರೀಪೇಯ್ಡ್ ಟಾಸ್ಕ್: ವಾಟ್ಸಾಪ್‌ಗೆ ಪಾರ್ಟ್ ಟೈಂ ಕೆಲಸದ ಬಗ್ಗೆ ಸಂದೇಶ ಬಂದಿತ್ತು ನಾನು ಆ ಬಗ್ಗೆ ವಿಚಾರಿಸಿದಾಗ ಹೋಟೆಲ್ ರಿವ್ಯೂ ಟಾಸ್ಕ್ ಬಗ್ಗೆ ತಿಳಿಸಿದರು. ಅದರಂತೆ ಟಾಸ್ಕ್ ಪೂರೈಸಿದ್ದಕ್ಕೆ ನನ್ನ ಬ್ಯಾಂಕ್ ಖಾತೆಗೆ 210 ರೂ. ಹಣ ವರ್ಗಾಯಿಸಿದರು. ಬಳಿಕ ಅವರು ಕಳುಹಿಸಿದ ಲಿಂಕ್ ಕ್ಲಿಕ್ ಮಾಡಿದಾಕ್ಷಣ ಟೆಲಿಗ್ರಾಂನಲ್ಲಿ ಮೆಸೇಜ್ ಮಾಡಿ ಟಾಸ್ಕ್ ಬಗ್ಗೆ ಮತ್ತಷ್ಟು ವಿವರ ನೀಡಿದರು. ಅವರು ಹೇಳಿದಂತೆ ಟಾಸ್ಕ್ ಮಾಡಿದ್ದಕ್ಕೆ 450 ರೂ. ನೀಡಿದರು. ಇದರಿಂದ ಕೆಲಸದ ಬಗ್ಗೆ ನಂಬಿಕೆ ಹೆಚ್ಚಿತು. ಅದೇ ವೇಳೆ ಪ್ರೀಪೇಯ್ಡ್ ಟಾಸ್ಕ್ ಬಗ್ಗೆ ಹೇಳಿದರು. ಆರಂಭದಲ್ಲಿ ಸಾವಿರ ರೂ. ಹಣ ಕಟ್ಟಿ ಟಾಸ್ಕ್ ಮಾಡಿದ್ದಕ್ಕೆ 1300 ರೂ. ನೀಡಿದರು. ನಂತರ ನಾಲ್ಕು ಜನರ ತಂಡ ಮಾಡಿ ಟಾಸ್ಕ್ ನೀಡಿದರು. ಹೀಗೆ ಹಂತ ಹಂತವಾಗಿ 14.05 ಲಕ್ಷ ರೂ. ಪಾವತಿ ಮಾಡಿದೆ. ಆದರೆ ಮೋಸ ಹೋಗಿರುವು ದನ್ನು ತಿಳಿದು ಆ ಹಣ ವಾಪಸ್ ಪಡೆಯಲು ಮುಂದಾದಾಗ ಸೆಕ್ಯೂರಿಟಿ ವೆರಿಫಿಕೇಷನ್ ಎಂದಷ್ಟೇ ಬರುತ್ತಿದೆ ಎಂದು ವಂಚನೆ ಗೊಳಗಾಗಿರುವ ವೈದ್ಯೆ ದೂರಿನಲ್ಲಿ ತಿಳಿಸಿದ್ದಾರೆ.

ಷೇರು ನೆಪದಲ್ಲಿ ವಂಚನೆ: ಫೇಸ್ ಬುಕ್‌ನಲ್ಲಿ ಷೇರು ಮಾರುಕಟ್ಟೆ ಹೂಡಿಕೆ ಬಗ್ಗೆ ಜಾಹೀರಾತು ಕಾಣಿಸಿತು. ಆ ಲಿಂಕ್ ಮೇಲೆ ಕ್ಲಿಕ್ ಮಾಡಿದಾಗ ನನ್ನ ನಂಬರ್ ಅನ್ನು ಒಂದು ವಾಟ್ಸಾಪ್ ಗುಂಪಿಗೆ ಸೇರ್ಪಡೆ ಮಾಡಿ ವೈಯಕ್ತಿಕ ಮಾಹಿತಿ ಪಡೆದರು. ಬಳಿಕ ಅದೇ ಗ್ರೂಪ್‌ನಲ್ಲಿ ಬಂದಿದ್ದ ಮತ್ತೊಂದು ಲಿಂಕ್ ಮೂಲಕ 50 ನಂತರ 60 ಸಾವಿರ ಹೂಡಿಕೆ ಮಾಡಿದ್ದಕ್ಕೆ, 6,200 ರೂ. ಲಾಭ ನೀಡಿದರು. ಇದರಿಂದ ನಂಬಿಕೆ ಬಂದು ಹಂತ ಹಂತವಾಗಿ 27.26 ಲಕ್ಷ ಹೂಡಿಕೆ ಮಾಡಿದೆ. ಆದರೆ ಲಾಭಾಂಶ ವಿತ್‌ಡ್ರಾ ಮಾಡಲು ಪ್ರಯತ್ನಿಸಿದಾಗ ಶೇ.15ರಷ್ಟು ತೆರಿಗೆ ಪಾವತಿಸುವಂತೆ ತಿಳಿಸಿದರು. ನಂತರ ಸಂಪರ್ಕಿಸಲು ಸಾಧ್ಯವಾಗುತ್ತಿಲ್ಲ ಎಂದು ಶಿಕ್ಷಕ ದೂರು ನೀಡಿದ್ದಾರೆ.

ಪ್ರಾಧ್ಯಾಪಕ ದಂಪತಿ ಮನೆಯಲ್ಲಿ 15.65 ಲಕ್ಷದ ಚಿನ್ನಾಭರಣ ಕಳವು

ವೃದ್ಧ ದಂಪತಿ ಮನೆಯಲ್ಲಿದ್ದರೂ ಬಾಲ್ಕನಿಯಿಂದ ಒಳನುಗ್ಗಿ ಖದೀಮರ ಕರಾಮತ್ತು

ಕ್ರೈಂ ಬಾಕ್ಸ್

ಮೈಸೂರು, ಮೇ 22– ವೃದ್ಧ ದಂಪತಿ ಮನೆಯಲ್ಲಿರುವಾಗಲೇ ಖದೀಮರು ಬಾಲ್ಕನಿಯಿಂದ ಒಳನುಗ್ಗಿ ಲಕ್ಷಾಂತರ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಮೈಸೂರಿನ ವಿಜಯನಗರದಲ್ಲಿ ನಡೆದಿದೆ. ವಿಜಯನಗರ ನಾಲ್ಕನೇ ಹಂತದ ನಿವಾಸಿ, ಇಲವಾಲ ಬಳಿಯ ತೋಟಗಾರಿಕಾ ಮಹಾವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ.ಮಂಜುನಾಥ್ ಅವರ ಮನೆಯಲ್ಲಿದ್ದ ಸುಮಾರು 15.65 ಲಕ್ಷ ರೂ. ಮೌಲ್ಯದ 195 ಗ್ರಾಂ ಚಿನ್ನಾಭರಣ ಕಳುವಾಗಿದೆ.

ಮಂಜುನಾಥ್ ಅವರ ಪತ್ನಿ ಡಾ.ಸುಮಾ ಅವರೂ ಮಂಡ್ಯ ಜಿಲ್ಲೆ ವಿಸಿ ಫಾರಂನಲ್ಲಿ ಪ್ರಾಧ್ಯಾಪಕರಾಗಿದ್ದು, ಮೇ 20ರಂದು ಬೆಳಗ್ಗೆ 8.15ಕ್ಕೆ ಮನೆಯಿಂದ ಕಾಲೇಜಿಗೆ ತೆರಳಿದ್ದಾರೆ. ಅದೇ ವೇಳೆ ಮಂಜುನಾಥ್ ಅವರೂ ಕೆಲಸಕ್ಕೆ ಹೋಗಿದ್ದಾರೆ. ಮಂಜುನಾಥ್ ಅವರ ತಂದೆ–ತಾಯಿ ಮನೆಯಲ್ಲಿದ್ದರು. ಬೆಳಗ್ಗೆ 9.20ಕ್ಕೆ ಸುಮಾ ಅವರಿಗೆ ಕರೆ ಮಾಡಿದ ಮಂಜುನಾಥ್, ಮನೆಯಲ್ಲಿ ಕಳ್ಳತನವಾಗಿರುವುದಾಗಿ ಅಮ್ಮ ಹೇಳಿದರು. ಹೋಗಿ ನೋಡಿಕೊಂಡು ಬರುವಂತೆ ತಿಳಿಸಿದ್ದಾರೆ. ಕೂಡಲೇ ಸುಮಾ ಅವರು ಮನೆಗೆ ಬಂದಾಗ ಗಾಬರಿಗೊಂಡಿದ್ದ ಅತ್ತೆ 2ನೇ ಮಹಡಿಯಲ್ಲಿರುವ ಕೊಠಡಿಯ ಕಬೋರ್ಡ್ ಬಾಗಿಲು ತೆಗೆದಿದ್ದು, ಚಿನ್ನದ ಆಭರಣಗಳ ಬಾಕ್ಸ್‌ಗಳು ಕೆಳಗೆ ಬಿದ್ದಿವೆ. ಯಾರೋ ಬಂದು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ ಎಂದು ಹೇಳಿದ್ದಾರೆ. ಪರಿಶೀಲಿಸಿದಾಗ 2ನೇ ಮಹಡಿಯ ಮತ್ತೊಂದು ಕೊಠಡಿಯ ಬಾಲ್ಕನಿ ಬಾಗಿಲಿನಿಂದ ಕಳ್ಳರು ಒಳಗೆ ನುಗ್ಗಿ ಕಳ್ಳತನ ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಸುಮಾ ಅವರು ನೀಡಿದ ದೂರಿನನ್ವಯ ವಿಜಯನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಖದೀಮರ ಪತ್ತೆಗೆ ಕ್ರಮ ವಹಿಸಿದ್ದಾರೆ.

ಸಿಂಧೂರ ಗನ್‌ಪೌಡರ್ ಆದಾಗ ಏನಾಗುತ್ತದೆ ಎಂಬುದನ್ನು ಶತ್ರುಗಳು ಅರಿತಿದ್ದಾರೆ



ಬಿಕಾನೇರ್, ಮೇ 22– 'ಸಿಂಧೂರ' ಗನ್‌ಪೌಡರ್ ಆದಾಗ ಏನಾಗುತ್ತದೆ ಎಂಬುದನ್ನು ಇದೀಗ ನಮ್ಮ ದೇಶದ ಶತ್ರುಗಳು ತಿಳಿದುಕೊಂಡಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದು, ಪಾಕಿಸ್ತಾನವು ಮಂಡಿಯೂರಬೇಕಾದಷ್ಟು ಶೌರ್ಯವನ್ನು ತೋರಿಸಿದ್ದಕ್ಕಾಗಿ ಭಾರತದ ಸಶಸ್ತ್ರ ಪಡೆಗಳನ್ನು ಗುರುವಾರ ಶ್ಲಾಘಿಸಿದ್ದಾರೆ.

ಪಹಲ್ಗಾಮ್‌ನಲ್ಲಿ ನಡೆದ ಉಗ್ರ ದಾಳಿಯ ನಂತರ ಪ್ರಾರಂಭಿಸಲಾದ 'ಆಪರೇಷನ್ ಸಿಂಧೂರ' ನಂತರ ರಾಜಸ್ಥಾನದಲ್ಲಿ ತಮ್ಮ ಮೊದಲ ಸಾರ್ವಜನಿಕ ಭಾಷಣದಲ್ಲಿ, ಪ್ರಧಾನಿ ಪಾಕಿಸ್ತಾನವನ್ನು ಟೀಕಿಸಿದರು ಮತ್ತು ಏಪ್ರಿಲ್ 22 ರಂದು ನಡೆದ ದಾಳಿಗೆ ಪ್ರತಿಕ್ರಿಯೆಯಾಗಿ, 'ನಾವು 22 ನಿಮಿಷಗಳಲ್ಲಿ ಒಂಬತ್ತು ದೊಡ್ಡ ಭಯೋತ್ಪಾದಕ ನೆಲೆಗಳನ್ನು ನಾಶಪಡಿಸಿದ್ದೇವೆ' ಎಂದು ಹೇಳಿದರು.

ಸಿಂಧೂರವು 'ಬರೂದ್' (ಗನ್ ಪೌಡರ್) ಆಗಿ ಬದಲಾದಾಗ ಏನಾಗುತ್ತದೆ ಎಂಬುದನ್ನು ಜಗತ್ತು ಮತ್ತು ದೇಶದ ಶತ್ರುಗಳು ನೋಡಿದ್ದಾರೆ. ಭಾರತ ಪರಮಾಣು ಬೆದರಿಕೆಗಳಿಗೆ ಹೆದರುವುದಿಲ್ಲ ಮತ್ತು ದೇಶದ ಮೇಲೆ ಭಯೋತ್ಪಾದಕ ದಾಳಿ ನಡೆದರೆ ಅದು ಸೂಕ್ತ ಉತ್ತರವನ್ನು ನೀಡುತ್ತದೆ. 'ಸಮಯ ಮತ್ತು ಯಾವ ವಿಧಾನ ಎಂಬುದನ್ನು ನಮ್ಮ ಸಶಸ್ತ್ರ ಪಡೆಗಳು ನಿರ್ಧರಿಸುತ್ತವೆ' ಎಂದು ಅವರು ಬಿಕಾನೇರ್‌ನ ಪಲಾನಾದಲ್ಲಿ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಹೇಳಿದರು.

ನಮ್ಮ ಸರ್ಕಾರ ಮೂರು ಸಶಸ್ತ್ರ ಪಡೆಗಳಿಗೂ ಮುಕ್ತ ಸ್ವಾತಂತ್ರ್ಯ ನೀಡಿತು. ಅವರು ಒಟ್ಟಾಗಿ ಅಂತಹ ಬಲೆಯನ್ನು ಹೆಣೆದರು. ಈ ಮೂಲಕ ಪಾಕಿಸ್ತಾನವು ಮಂಡಿಯೂರುವಂತೆ ಮಾಡಲಾಯಿತು ಎಂದು ಅವರು ಹೇಳಿದರು.

ಬಿಕಾನೇರ್‌ನ ನಾಲ್ ವಾಯುನೆಲೆಯನ್ನು ಗುರಿಯಾಗಿಸಲು ಪಾಕಿಸ್ತಾನ ಪ್ರಯತ್ನಿಸಿತ್ತು. ಆದರೆ, ಅದಕ್ಕೆ ಯಾವುದೇ ಹಾನಿ ಮಾಡಲು ಸಾಧ್ಯವಾಗಲಿಲ್ಲ. ಆದರೆ, ಪಾಕಿಸ್ತಾನದ ರಹಿಮ್ಯಾರ್ ಖಾನ್ ವಾಯುನೆಲೆ ಮತ್ತೆ ಯಾವಾಗ ತೆರೆಯುತ್ತದೆ ಎಂಬುದು ಯಾರಿಗೂ ತಿಳಿದಿಲ್ಲ. ಅದು ಐಸಿಯುನಲ್ಲಿದೆ. ನಮ್ಮ ದಾಳಿಯಿಂದಾಗಿ ಅದು ನಾಶವಾಗಿದೆ' ಎಂದರು.

ಭಾರತದ ವಿರುದ್ಧ ನೇರ ಹೋರಾಟದಲ್ಲಿ ಪಾಕಿಸ್ತಾನ ಎಂದಿಗೂ ಗೆಲ್ಲಲು ಸಾಧ್ಯವಿಲ್ಲ. ನೇರ ಯುದ್ಧ ಆದಾಗಲೆಲ್ಲ ಪಾಕಿಸ್ತಾನ ಮತ್ತೆ ಮತ್ತೆ ಸೋಲನ್ನು ಎದುರಿಸಬೇಕಾಗುತ್ತದೆ. ಅದಕ್ಕಾಗಿಯೇ ಪಾಕಿಸ್ತಾನ ಭಯೋತ್ಪಾದನೆಯನ್ನು ಭಾರತದ ವಿರುದ್ಧ ಹೋರಾಡಲು ಅಸ್ತ್ರವನ್ನಾಗಿ ಮಾಡಿಕೊಂಡಿದೆ ಎಂದು ಅವರು ಹೇಳಿದರು.

ಏಪ್ರಿಲ್ 22ರಂದು ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ದಾಳಿಯಲ್ಲಿ 26 ಜನರು ಸಾವಿಗೀಡಾಗಿದ್ದಕ್ಕೆ ಪ್ರತಿಯಾಗಿ ಭಾರತ ಮೇ 7ರಂದು ಮುಂಜಾನೆ ಆಪರೇಷನ್ ಸಿಂಧೂರ ಅಡಿಯಲ್ಲಿ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕ ನೆಲೆಗಳ ಮೇಲೆ ದಾಳಿ ನಡೆಸಿತು.

ಭಾರತದ ಕಾರ್ಯಾಚರಣೆಯ ನಂತರ, ಪಾಕಿಸ್ತಾನ ಮೇ 8, 9 ಮತ್ತು 10 ರಂದು ಭಾರತೀಯ ಸೇನಾ ನೆಲೆಗಳ ಮೇಲೆ ದಾಳಿ ಮಾಡಲು ಪ್ರಯತ್ನಿಸಿತು. ಭಾರತೀಯ ಪಡೆಗಳು ಹಲವಾರು ಪಾಕಿಸ್ತಾನಿ ಸೇನಾ ನೆಲೆಗಳ ಮೇಲೆ ಉಗ್ರ ಪ್ರತಿದಾಳಿ ನಡೆಸಿದವು.

ಗಡಿಯಾಚೆಗಿನ ನಾಲ್ಕು ದಿನಗಳ ತೀವ್ರ ಡ್ರೋನ್ ಮತ್ತು ಕ್ಷಿಪಣಿ ದಾಳಿಯ ನಂತರ ಮಿಲಿಟರಿ ಮುಖಾಮುಖಿಯನ್ನು ಕೊನೆಗೊಳಿಸಲು ಭಾರತ ಮತ್ತು ಪಾಕಿಸ್ತಾನ ಮೇ 10 ರಂದು ಕದನ ವಿರಾಮ ಒಪ್ಪಂದ ಮಾಡಿಕೊಂಡವು.

ಗೃಹ ಸಚಿವ ಪರಮೇಶ್ವರ್ ಸಂಸ್ಥೆಗಳ ಮೇಲಿನ ಇಡಿ ದಾಳಿ ಹಿಂದೆ ಕಾಂಗ್ರೆಸ್ ನಾಯಕರ ಕೈವಾಡ

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಸ್ಫೋಟಕ ಹೇಳಿಕೆ

ಗದಗ, ಮೇ 22– ಗೃಹ ಸಚಿವ ಡಾ. ಜಿ ಪರಮೇಶ್ವರ್ ಒಡೆತನದ ತುಮಕೂರಿನ ಸಿದ್ದಾರ್ಥ ಕಾಲೇಜಿನ ಮೇಲೆ ಇಡಿ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ನಿನ್ನೆಯಿಂದ ದಾಳಿ ಮಾಡಿ ತನಿಖೆ ನಡೆಸಿರುವ ಅಧಿಕಾರಿಗಳು ಇಂದೂ ಕೂಡ ಪರಿಶೀಲನೆ ಮುಂದುವರೆಸಿದ್ದರು. ಈ ಬೆನ್ನಲ್ಲೇ ಗೃಹ ಸಚಿವ ಪರಮೇಶ್ವರ ಶಿಕ್ಷಣ ಸಂಸ್ಥೆ ಮೇಲೆ ಇಡಿ ದಾಳಿ ವಿಚಾರ ಮಾತನಾಡಿರುವ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಕಾಂಗ್ರೆಸ್ ನಾಯಕರ ವಿರುದ್ಧ ಸ್ಫೋಟಕ ಹೇಳಿಕೆ ಕೊಟ್ಟಿದ್ದಾರೆ.

ಗದಗನಲ್ಲಿ ಮಾತನಾಡಿದ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಇಡಿ ದಾಳಿ ಹಿಂದೆ ಕಾಂಗ್ರೆಸ್ ನಾಯಕರ ಕೈವಾಡ ಇದೆ. ಕಾಂಗ್ರೆಸ್‌ನ ಒಂದು ಗುಂಪು ಪರಮೇಶ್ವರ್ ವಿರುದ್ಧ ಇಡಿಗೆ ದೂರು ನೀಡಿದೆ. ಹೀಗಾಗಿ ಇಡಿ ದಾಳಿ ಮಾಡಿದೆ. 2013 ರಲ್ಲಿ ಪರಮೇಶ್ವರ್ ಅವರನ್ನು ಇದೇ ಸಿದ್ದರಾಮಯ್ಯ ಸೋಲಿಸಿದ್ದರು. ಚಿನ್ನ ಕಳ್ಳಸಾಗಾಣಿಕೆ ಪ್ರಕರಣ ಸೇರಿ ಎಲ್ಲಾ ಪ್ರಕರಣಗಳ ಬಗ್ಗೆ ತನಿಖೆ ಮಾಡುವಂತೆ ಇಡಿಗೆ ಪತ್ರ ಬರೆದದ್ದು ಯಾರು ಎಂದು ಪ್ರಶ್ನಿಸಿದ ಅವರು, ಕಾಂಗ್ರೆಸ್‌ನ ಒಂದು ಗುಂಪು ಪರಮೇಶ್ವರ್ ಅವರ ಮೇಲೆ ಕ್ರಮ ಆಗಬೇಕು ಎಂದು ಎಲ್ಲಾ ಮಾಹಿತಿಗಳನ್ನೂ ಇಡಿಗೆ ಕಳುಹಿಸಿದ್ದಾರೆ ಎಂದರು.

ಆದರೆ ಈಗ ಡ್ರಾಮಾ ಮಾಡುತ್ತಿದ್ದೀರಿ ಎಂದು ಕಾಂಗ್ರೆಸ್ ನಾಯಕರ ವಿರುದ್ಧ ವಾಗ್ದಾಳಿ ನಡೆಸಿದ ಅವರು, ನಮಗೆ ಪರಮೇಶ್ವರ್ ಅವರ ಮೇಲೆ ಗೌರವ ಇದೆ. ಅವರು ಸಭ್ಯ ರಾಜಕಾರಣಿ. ಏನಾಗಿದೆ ಅನ್ನೋದು ಇಡಿ ಅಧಿಕಾರಿಗಳು ಹುಡುಕುತ್ತಿದ್ದಾರೆ. ಕಾಂಗ್ರೆಸ್‌ನ ಒಂದು ಗುಂಪಿನವರೇ ಎಲ್ಲ ಮಾಹಿತಿ ಕಳಿಸಿದ್ದು ಎಂದು ಆರೋಪಿಸಿದ್ದಾರೆ.



ಪರಮೇಶ್ವರ್ ಬಗ್ಗೆ ಇಡಿಗೆ ಮಾಹಿತಿ ಯಾರು ಕಳಿಸಿದ್ದಾರೆ ಎಂಬುದು ಸಿಎಂ ಸಿದ್ದರಾಮಯ್ಯ ಅವರಿಗೂ ಗೊತ್ತಿದೆ. ಇಂಟಲಿಜೆನ್ಸ್ ಸಿಎಂ ಬಳಿ ಇದೆ ಅವರನ್ನೇ ಕೇಳಿ ಹೇಳ್ತಾರೆ. ಈಗ ಡ್ರಾಮಾ ಮಾಡ್ತೀರಾ ಸಿದ್ದರಾಮಯ್ಯನವರೇ? ಎಂದು ಜೋಷಿ ಕಿಡಿ ಕಾರಿದ್ದಾರೆ. ಮಾಹಿತಿ ಸಿಕ್ಕಾಗ ಇಡಿ, ಕಾನೂನು ಪ್ರಕಾರ ಕ್ರಮ ಕೈಗೊಳುತ್ತದೆ. ಇದರ ಹಿಂದೆ ಯಾವುದೇ ಕಾರಣಕ್ಕೂ ಪರ ಮೇಶ್ವರ್ ಅವರಿಗೆ ತೊಂದರೆ ಕೊಡಬೇಕು ಎಂಬುದು ಕೇಂದ್ರ ಸರ್ಕಾರದ ಉದ್ದೇಶ ಅಲ್ಲ. ಕಾನೂನು ಪ್ರಕಾರ ನಾನಾಗಲೀ, ಪರಮೇಶ್ವರ್, ಸಿದ್ದರಾಮಯ್ಯ ಅಥವಾ ನಮ್ಮ ಪಕ್ಷದ ಯಾರೇ ತಪ್ಪು ಮಾಡಿದರೂ ಕಾನೂನು ರೀತಿ ಕ್ರಮ ಆಗುತ್ತದೆ ಎಂದು ಹೇಳಿದರು.



"ಪರಮೇಶ್ವರ್ ಶಿಕ್ಷಣ ಸಂಸ್ಥೆಗೆ ನಟಿ ರನ್ಯಾರಾವ್ ಹಣ ಕೊಟ್ಟರೆ ತಪ್ಪಾಗುತ್ತೆ. ಆದರೆ, ರನ್ಯಾರಾವ್‌ಗೆ ಶಿಕ್ಷಣ ಸಂಸ್ಥೆ ಸಾಲ ಕೊಟ್ಟಿರಬಹುದು. ಪರಮೇಶ್ವರ್ ಅವರಿಗೆ ರನ್ಯಾರಾವ್ ಪರಿಚಯ ಇರಬಹುದು. ಅವರ ತಂದೆ ರಾಮಚಂದ್ರರಾವ್ ಐಪಿಎಸ್ ಅಧಿಕಾರಿ. ರನ್ಯಾರಾವ್ ಮದುವೆಗೆ ಎಲ್ಲರೂ ಹೋಗಿದ್ದಾರೆ. ರಾಮಚಂದ್ರರಾವ್ ಮಗನ ಮದುವೆಗೂ ಎಲ್ಲರೂ ಹೋಗಿದ್ದಾರೆ. ವಿಪಕ್ಷದವರು ಹೋಗಿದ್ದಾರೆ. ಅದರಲ್ಲಿ ಏನಿದೆ?

– ರಾಮಲಿಂಗಾ ರೆಡ್ಡಿ, ಸಚಿವ

ಇಂದು ಮೈಸೂರಿನ ಹಾರೋಹಳ್ಳಿಯಲ್ಲಿ ಶ್ರೀ ಬಾಲರಾಮನ ಮೂರ್ತಿ ಕೆತ್ತನೆಗೆ ಚಾಲನೆ

ಮೈಸೂರು, ಮೇ22–ಮೈಸೂರಿನ ಹಾರೋಹಳ್ಳಿಯಲ್ಲಿ ಬಾಲರಾಮ ಶಿಲೋದ್ಭವ ಕ್ಷೇತ್ರದ ಟ್ರಸ್ಟ್ ವತಿಯಿಂದ ಧ್ವಜಾರೋಹಣ ಮತ್ತು ಶ್ರೀ ಬಾಲರಾಮನ ಮೂರ್ತಿ ಕೆತ್ತನೆಗೆ ಮೇ23 ರಂದು ಬೆಳಗ್ಗೆ 10 ಗಂಟೆಗೆ ಚಾಲನೆ ನೀಡಲಾಗುವುದು. ಶ್ರೀ ಪೇಜಾವರ ಮಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರು ದೇವಸ್ಥಾನ ಪ್ರಾರಂಭಕ್ಕೆ ಧ್ವಜಾರೋಹಣ ಮಾಡಿ, ಶ್ರೀ ಬಾಲರಾಮನ ಮೂರ್ತಿ ಕೆತ್ತನೆಗೆ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಜಿ.ಟಿ.ದೇವೇಗೌಡ, ಶಿಲ್ಪಿ ಅರುಣ್ ಯೋಗಿರಾಜ್, ಆರ್‌ಎಸ್‌ಎಸ್ ಮುಖಂಡ ಮಾ.ವೆಂಕಟರಾಮ್‌ಜೀ, ಮೈಸೂರು ವಿವಿ ಪ್ರಾಚೀನ ಇತಿಹಾಸ ಪುರಾತತ್ವ ಅಧ್ಯಯನ ಸಂಶೋಧನಾ ವಿಭಾಗ ಮುಖ್ಯಸ್ಥ ಪ್ರೊ.ಶೆಲ್ವ ಪಿಳ್ಳೆ ಅಯ್ಯಂಗಾರ್ ಭಾಗವಹಿಸಲಿದ್ದಾರೆ.

ಮೇ25, ನಿರ್ಮಲ–ಚೇತನ ಸಲಹಾ ಮನೆ ಉದ್ಘಾಟನೆ

ಮೈಸೂರು, ಮೇ22(ಜಿಎ)– ಮೈಸೂರಿನ ನಿರ್ಮಲ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಮೇ 25ರಂದು ಬೆಳಿಗ್ಗೆ 10ಗಂಟೆಗೆ 'ನಿರ್ಮಲ –ಚೇತನ' ಸಲಹಾ ಮನೆಯ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ ಎಂದು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಬಿ.ಬಸವರಾಜು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬದಲಾದ ಕಾಲದಲ್ಲಿ ಮಕ್ಕಳ ಕಲಿಕೆ ಇಳಿಮುಖವಾಗುವುದರೊಂದಿಗೆ ಉತ್ತಮವಾದ ಜ್ಞಾನ–ಕೌಶಲ–ಮನೋಭಾವದ ಬೆಳವಣಿಗೆ ಶಾಲಾ ಶಿಕ್ಷಣದಿಂದ ನಡೆಯುತ್ತಿಲ್ಲ. ಜೀವನ ಕೌಶಲಗಳನ್ನೂ ಕಲಿತು, ಆತ್ಮವಿಶ್ವಾಸದ ಧೀಶಕ್ತಿಗಳಾಗಿ, ಪರಿಪೂರ್ಣ ವ್ಯಕ್ತಿತ್ವ ಪ್ರಜ್ವಲಿಸಿ ತಮ್ಮ ಕಾಲ ಮೇಲೆ ತಾವೇ ನಿಲ್ಲುವ ಶಕ್ತಿಗಳಿಸುವ ಶಿಕ್ಷಣ ಮಕ್ಕಳಿಗೆ ಬೇಕಾಗಿದೆ. ಹಾಗಾಗಿ ರಾಜ್ಯದ ಮೊದಲ ಮಕ್ಕಳ ಸಲಹೆ ಮತ್ತು ತರಬೇತಿ ಕೇಂದ್ರವನ್ನು ಮೈಸೂರಿನಲ್ಲಿ ತರಲು ಮುಂದಾಗುತ್ತಿದ್ದೇವೆ ಎಂದರು.

ಮೈಸೂರಿನ ಹೆಸರಾಂತ ವ್ಯಕ್ತಿವಿಕಸನ ತರಬೇತುದಾರರೂ 40 ವರ್ಷಗಳಿಂದ ಮಕ್ಕಳಿಗೆ ಸಲಹೆ–ತರಬೇತಿ ನೀಡಿ ರಾಜ್ಯ–ದೇಶದಲ್ಲಿ ಲಕ್ಷಾಂತರ ಮಕ್ಕಳ 'ಅಧ್ಯಯನ–ಪರೀಕ್ಷಾ' ಕೌಶಲ ಹೆಚ್ಚಿಸಿರುವ ರವಿ ಪುರಸ್ಕಾರ್ ರಾಷ್ಟ್ರೀಯ ಪ್ರಶಸ್ತಿ ವಿಜೇತರಾದ ಆರ್.ಎ.ಚೇತನ್ ರಾಮ್ ಅವರ ಮಾರ್ಗದರ್ಶನದಲ್ಲಿ 'ನಿರ್ಮಲ–ಚೇತನ' ಎಂಬ ಮಕ್ಕಳ–ವಿದ್ಯಾರ್ಥಿಗಳ ಅಧ್ಯಯನ–ಪರೀಕ್ಷೆ–ಶಿಕ್ಷಣ–ಬುದ್ಧಿಶಕ್ತಿ–ಮೌಲ್ಯ–ವ್ಯಕ್ತಿತ್ವ–ಕಲಿಕೆ– ನಡವಳಿಕೆ' ಕುರಿತಾಗಿ ಸಲಹೆ ನೀಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವ್ಯಕ್ತಿತ್ವ ವಿಕಸನ ತರಬೇತುದಾರ ಆರ್.ಎ.ಚೇತನ್‌ರಾಮ್, ಆಸ್ಪತ್ರೆಯ ಕ್ವಾಲಿಟಿ ಮುಖ್ಯಸ್ಥ ಡಾ.ಮನುಪ್ರಕಾಶ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ
46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ನಕ್ಕರೆ ಅದೇ ಸ್ವರ್ಗ

ನಮ್ಮಲ್ಲಿ 200 ಕ್ಯಾಲರಿ ಬರ್ನ್ ಆಗಬೇಕಾದರೆ, 45 ನಿಮಿಷ ನಡೆಯಬೇಕು. 18 ನಿಮಿಷ ಓಡಬೇಕು. 16 ನಿಮಿಷ ಈಜಬೇಕು. 23 ನಿಮಿಷ ಆಟ ಆಡಬೇಕು. ಆದರೆ, ಹೆಂಡತಿಯೊಂದಿಗೆ ವಾದಿಸಿದರೆ, ಜಗಳವಾಡಿದರೆ 5 ನಿಮಿಷಗಳು ಸಾಕು!

ಮೈಸೂರು ಮಿತ್ರ

ಶುಕ್ರವಾರ, 23 ಮೇ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಕನಸುಗಳ ಬುತ್ತಿ ಅಕ್ಷಯ ಪಾತ್ರೆಯಾಗಲಿ...
ನೆಮ್ಮದಿ ನಿದ್ರೆ ನಿಮ್ಮದಾಗಲಿ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬೆಳ್ಳಗಿರೋದೆಲ್ಲ ಹಾಲಲ್ಲ, ಹೊಳೆಯುವುದೆಲ್ಲ ಚಿನ್ನ ಅಲ್ಲ.

ನಿಮ್ಮ ಪತ್ರಗಳು

ಬಾನು ಮುಡಿಗೇರಿದ 'ಬೂಕರ್' ಪ್ರಶಸ್ತಿ

ಮಾನ್ಯರೆ,



ಹೆಣ್ಣು ಪ್ರಯತ್ನಪಟ್ಟು ಮುನ್ನಡೆದರೆ ಏನೂ ಬೇಕಾದರೂ ಸಾಧಿಸಬಹುದೆಂಬುದಕ್ಕೆ ಅತ್ಯಂತ ಪ್ರತಿಷ್ಠಿತ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿಯಾದ 'ಬೂಕರ್' ಪ್ರಶಸ್ತಿಗೆ ಅಲ್ಪಸಂಖ್ಯಾತ ಸಮುದಾಯವಾದ ಮುಸ್ಲಿಂ ಸಮಾಜಕ್ಕೆ ಸೇರಿದ 71 ಹರೆಯದ ಹಿರಿಯ ಲೇಖಕಿ, ಕವಯತ್ರಿ, ಮಹಿಳಾಪರ ಹೋರಾಟಗಾರ್ತಿ, ವಕೀಲೆ ಶ್ರೀಮತಿ ಬಾನು ಮುಷ್ತಾಕ್‌ರವರೇ ಪ್ರತ್ಯಕ್ಷ ಸಾಕ್ಷಿಯಾಗಿದ್ದಾರೆ. ಅವರ ಸಣ್ಣ ಕಥೆಗಳ ಸಂಕಲನ 'ಹಾರ್ಟ್ ಲ್ಯಾಂಪ್'ಗೆ 2025ನೇ ಸಾಲಿನ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ಸಂದಿದೆ. ಅವರ 'ಹಸೀನಾ ಮತ್ತು ಇತರ ಕಥೆಗಳು' ಸಂಕಲನದ ಇಂಗ್ಲಿಷ್ ಅನುವಾದ 'ಹಾರ್ಟ್ ಲ್ಯಾಂಪ್'ಗೆ ಈ ಪ್ರಶಸ್ತಿ ದೊರಕಿದ್ದು, ಕನ್ನಡಿಗರು ಸಂಭ್ರಮಪಡಬಹುದಾದ ವಿಚಾರವಾಗಿದೆ. ಏಕೆಂದರೆ, ಇದೇ ಮೊದಲ ಬಾರಿಗೆ ಈ ಪ್ರಶಸ್ತಿ ಕನ್ನಡದ ಲೇಖಕಿಯೊಬ್ಬರಿಗೆ ಲಭಿಸಿದ್ದು, 50 ಸಾವಿರ ಪೌಂಡ್ (ಅಂದಾಜು 57.28 ಲಕ್ಷ ರೂಪಾಯಿಗಳನ್ನು) ಒಳಗೊಂಡಿದೆ.

ಹಾಸನ ಮೂಲದವರಾದ ಶ್ರೀಮತಿ ಬಾನು ಮುಷ್ತಾಕ್, ಓರ್ವ ಪ್ರಗತಿಪರ ಚಿಂತಕಿಯಾಗಿದ್ದು, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತಮ್ಮದೇ ಆದ ವಿಶಿಷ್ಟ ಛಾಪು ಮೂಡಿಸಿದ್ದಾರೆ. ಶ್ರೀಮತಿ ಬಾನು ಮುಷ್ತಾಕ್, ಐದು ಕಥಾ ಸಂಕಲನ ಹಾಗೂ ಒಂದು ಪ್ರಬಂಧ ಸಂಕಲನವನ್ನು ಪ್ರಕಟಿಸಿದ್ದಾರೆ. ಅವರ 'ಬೆಂಕಿ ಮಳೆ' ಎಂಬ ಕೃತಿ, 'ಹಸೀನಾ' ಎಂಬ ಹೆಸರಿನಲ್ಲಿ ಹಾಗೂ ಖ್ಯಾತ ನಿರ್ದೇಶಕ ಗಿರೀಶ್ ಕಾಸರವಳ್ಳಿ ಅವರ ನಿರ್ದೇಶನದಲ್ಲಿ ಚಲನಚಿತ್ರವಾಗಿ ಮೂಡಿಬಂದಿದ್ದು 03 ರಾಷ್ಟ್ರಪ್ರಶಸ್ತಿ ಗಳಿಸಿದೆ. ಬಾನು ಮುಷ್ತಾಕ್ ಅವರ ಅನೇಕ ಕಥೆಗಳು ಮಹಿಳಾ ಪ್ರಧಾನವಾಗಿದ್ದು, ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ಅದರಲ್ಲೂ ವಿಶೇಷವಾಗಿ ಅಲ್ಪಸಂಖ್ಯಾತ ಮುಸ್ಲಿಂ ಜನಾಂಗಕ್ಕೆ ಸೇರಿದ ಹೆಣ್ಣು ಮಕ್ಕಳು ಅನುಭವಿಸುತ್ತಿರುವ ಯಾತನೆಗಳನ್ನು ತೆರೆದಿಡುತ್ತದೆ. ಅವರ ಹಲವಾರು ಕಥೆಗಳು ವಿವಿಧ ಭಾರತೀಯ ಭಾಷೆಗಳಿಗೆ ಸಹ ಅನುವಾದಗೊಂಡಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಸೇರಿದಂತೆ ಹಲವಾರು ಪ್ರತಿಷ್ಠಿತ ಪ್ರಶಸ್ತಿ ಮತ್ತು ಪುರಸ್ಕಾರಗಳಿಗೆ ಭಾಜನರಾಗಿರುವ ಬಾನುರವರ ಮುಡಿಗೆ 'ಬೂಕರ್' ಪ್ರಶಸ್ತಿ ಮತ್ತೊಂದು ಸೇರ್ಪಡೆಯಾಗಿದೆ. ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಈ ಕೃತಿಯನ್ನು ಆಂಗ್ಲ ಭಾಷೆಗೆ ಅನುವಾದಿಸಿರುವ ದೀಪಾ ಭಸ್ತಿಯವರಿಗೂ ಸಹ ಅಭಿನಂದನೆಗಳು. ಮೂಲ ಲೇಖಕಿ ಹಾಗೂ ಅನುವಾದಕಿ ಇಬ್ಬರೂ ಸಹ ಮಹಿಳೆಯರೇ ಆಗಿರುವುದು ಸಹ ಒಂದು ವಿಶೇಷವೆನ್ನಬಹುದು.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಹೆಮ್ಮೆಯ ಲೇಖಕಿ ಬಾನುಗೆ ಬೂಕರ್ ಗರಿ

ಮಾನ್ಯರೆ,

ಕನ್ನಡ ನಾಡಿನ ಹೆಮ್ಮೆಯ ಪುತ್ರಿ, ಹಲ್ಮಿಡಿ ಶಾಸನ ದೊರೆತ ಹೊಯ್ಸಳ ನಾಡಿನ ಹೆಣ್ಣು ಮಗಳು ಬಾನು ಮುಷ್ತಾಕ್ ಅವರ 'ಹಸೀನಾ ಮತ್ತು ಇತರ ಕತೆಗಳು' ಕಥಾಸಂಕಲನದ ಇಂಗ್ಲಿಷ್ ಅನುವಾದಿತ ಕೃತಿ 'ಹಾರ್ಟ್ ಲ್ಯಾಂಪ್'ಗೆ ಪ್ರತಿಷ್ಠಿತ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿ ಇದೇ ಮೊದಲ ಬಾರಿಗೆ ದೊರಕಿರುವುದು 7 ಕೋಟಿ ಕನ್ನಡಿಗರು ಶ್ಲಾಘಿಸುವಂತದ್ದು. ಇತರ ಭಾಷೆಗಳಿಂದ ಇಂಗ್ಲಿಷ್‌ಗೆ ಅನುವಾದಿಸಲಾಗುವ ಅತ್ಯುತ್ತಮ ಕಾದಂಬರಿ ಅಥವಾ ಸಣ್ಣ ಕಥೆಗಳ ಸಂಗ್ರಹಕ್ಕೆ ನೀಡಲಾಗುವ ಈ ಪ್ರಶಸ್ತಿಯನ್ನು ಬಾನು ಮುಷ್ತಾಕ್ ಹಾಗೂ ಅನುವಾದಕಿ ದೀಪಾ ಭಸ್ತಿ ಅವರಿಬ್ಬರೂ ಪ್ರಶಸ್ತಿಯನ್ನು ಸ್ವೀಕರಿಸಿರುವುದು ಸ್ವಾಗತಾರ್ಹ. ಬಾನು ಅವರು ಮಾತನಾಡಿ ಬೂಕರ್ ಪ್ರಶಸ್ತಿ ದೊರೆತಿರುವುದು 'ವೈವಿಧ್ಯತೆಗೆ ದೊರೆತ ಜಯ' ಯಾವುದೇ ಕಥೆಯು ಚಿಕ್ಕದಲ್ಲ. ಮಾನವ ಅನುಭವದ ಕಥೆಯಲ್ಲಿ ಪ್ರತಿಯೊಂದು ಎಳೆಯೂ ಮುಖ್ಯವಾಗಿರುತ್ತದೆ ಎಂಬ ನಂಬಿಕೆಯಿಂದ ಈ ಪುಸ್ತಕ ಹುಟ್ಟಿದೆ. ಅನುವಾದಕಿ ದೀಪಾ ಭಸ್ತಿ ಅವರು 'ನನ್ನ ಸುಂದರವಾದ ಭಾಷೆಗೆ ಎಂತಹ ಸೊಗಸಾದ ಗೆಲುವು' ಇದು ಎಂದು ಹರ್ಷ ವ್ಯಕ್ತಪಡಿಸಿರುವುದು ಮೆಚ್ಚುವಂತದ್ದು.

–ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ವರಹಾ ಮತ್ತು ವರಾಹ



ಮಾನ್ಯರೆ,

ಸಾಂಸ್ಕೃತಿಕ ನಗರ ಮೈಸೂರಿಗೆ ಕಳಸ ಪ್ರಾಯವಾಗಿರುವ ಅಂಬಾವಿಲಾಸ ಅರಮನೆಯನ್ನು ವೀಕ್ಷಿಸಲು ವಿಶ್ವದ ಎಲ್ಲೆಡೆಯಿಂದ ಪ್ರವಾಸಿಗರು ಬರುತ್ತಾರೆ. ಯುದ್ಧದ ಭಯದಿಂದ ಉತ್ತರದ ಕಡೆಗೆ ಹೋಗುತ್ತಿದ್ದ ಪ್ರವಾಸಿಗರು ದಕ್ಷಿಣದ ಕಡೆಗೆ ಹೆಚ್ಚು ಮುಖ ಮಾಡಿದ್ದಾರೆ. ಇದಕ್ಕೆ ಕರ್ನಾಟಕದ ಪ್ರವಾಸಿಗರು ಹೊರತಾಗಿಲ್ಲ. ಅರಮನೆಯನ್ನು ಪ್ರವೇಶಿಸಲು ದಕ್ಷಿಣ ದ್ವಾರದ ಕಡೆ ಮಾತ್ರ ಅವಕಾಶ ಇರುವುದು. ದಕ್ಷಿಣ ದ್ವಾರವನ್ನು ವರಾಹ ದ್ವಾರ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಈ ಮೂಲಕ ಒಳಗೆ ಹೋಗುತ್ತಿದ್ದಂತೆ ಬಲಭಾಗಕ್ಕೆ ಶ್ರೀ ಶ್ವೇತ ವರಾಹ ಸ್ವಾಮಿಯ ದೇವಸ್ಥಾನವಿದೆ. ದ್ವಾರದ ಮುಂದೆ ಮುಖ್ಯರಸ್ತೆಗೆ ಹೊಂದಿಕೊಂಡಂತೆ ಒಂದು ಸೂಚನಾಫಲಕವನ್ನು ಅಳವಡಿಸಿದ್ದಾರೆ, ಬಹುಶಃ ಅಧಿಕಾರಿಗಳ ಕಣ್ತಪ್ಪಿನಿಂದ ಅದರಲ್ಲಿ ದಕ್ಷಿಣ ದ್ವಾರ ವರಹಾ ದ್ವಾರ ಎಂದು ಬರೆಯಲಾಗಿದೆ, ಅದು ವರಾಹ ದ್ವಾರ ಎಂಬುದಾಗಿ ಬರೆಯಬೇಕಾಗಿತ್ತು. ಸಣ್ಣ ತಪ್ಪು ಎನಿಸಿದರು ಅರ್ಥ ಅನರ್ಥವಾಗಿಬಿಡುತ್ತದೆ.

ಉಚ್ಚರಿಸಲು ಒಂದೇ ರೀತಿ ಇದ್ದರೂ, ಇವುಗಳ ಅರ್ಥ **ವರಾಹ: ಹಂದಿ, ವರಹಾ; ನಾಣ್ಯ** ಎಂಬುದಾಗಿ ಅರ್ಥವಿದೆ. ಪ್ರವಾಸಿಗರು ಎಲ್ಲವನ್ನೂ ಕೂಲಂಕಷವಾಗಿ ನೋಡುವುದರಿಂದ ಅಪಾರ್ಥ ಆಗುವುದು ಬೇಡ, ಅರಮನೆಯು ವಿಶ್ವವಿಖ್ಯಾತ ಪ್ರೇಕ್ಷಣೀಯ ಸ್ಥಳವಾಗಿರುವುದರಿಂದ ಸಂಬಂಧಿಸಿದವರು ಸರಿಪಡಿಸಬೇಕಾಗಿ ವಿನಂತಿಸಲಾಗಿದೆ.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ಶ್ರೀ ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಒಳಿತು ಅರಿತರೆ ಬದುಕು ಬಂಗಾರ!

ಈ ಬಾಳು ತುಂಬಿರುವ ತನಕ ತುಂತುಂಬಿ ಕುಡಿಯಬೇಕೆನ್ನುತ್ತದೆ ಕವಿವಾಣಿ. ಬದುಕು ಮೂರು ದಿನದ ಸಂತೆಯಂತೆ. ಇರುವಷ್ಟು ಕಾಲ ನಗು ನಗುತ್ತ ಬದುಕುವುದನ್ನು ಕಲಿಯಬೇಕು. ಇಲ್ಲಸಲ್ಲದ ವಿಚಾರಗಳ ಬಗ್ಗೆ ತಲೆಕೆಡಿಸಿಕೊಂಡು ಕಾಲ ಕಳೆಯುವುದು ವ್ಯರ್ಥ.ಈಗಿದ್ದವರು ಇನ್ನೊಂದು ಗಳಿಗೆ ಇರಲು ಸಾಧ್ಯವಿಲ್ಲದೆ ಇರುವಾಗ ಯಾಕೆ ಬೇಕು ಈ ದ್ವೇಷ, ಅಸೂಯೆ, ಮೋಸ, ವಂಚನೆಗಳ ಜಂಜಾಟ... ಇಂತಹ ವಿಷಕಾರಿಯಾದ ಅಹಿತಕರ ಸಂಗತಿಗಳ ಬಿಟ್ಟು ಒಳ್ಳೆಯ ಕಾರ್ಯಗಳನ್ನು ಸಮಾಜದಲ್ಲಿರುವ ಜನತೆ ಮಾಡಬೇಕು, ಸಾರ್ಥಕ ಬದುಕನ್ನು ರೂಪಿಸಿಕೊಳ್ಳಬೇಕು.

ಅದಕ್ಕಾಗಿಯೇ ತಿಳಿದವರು ಹೇಳಿರುವುದು ಈ ಬದುಕು ಸುಂದರವಾದುದು, ಸುಮಧುರವಾದುದು ಹಾಗೆಯೇ ಕ್ಷಣಿಕವಾದದ್ದು ಕೂಡ. ನೀರ ಮೇಲಿನ ಗುಳ್ಳೆ ಹಾಗೆ ಮನುಷ್ಯನ ಬದುಕು ಎಂಬ ಮಾತು ಜೀವನದ ನಶ್ವರತೆಯನ್ನು ಸಾರುತ್ತದೆ. ಈಗಿದ್ದವರು ಮುಂದಿನ ಗಳಿಗೆ ಇನ್ನಿಲ್ಲವಾಗಬಹುದು, ಸಾವಿನೊಂದಿಗೆ ಬದುಕು ಕಾಣದ ಹಾಗೆ ಸಾಗುತ್ತಾ ಬಂದಿರುತ್ತದೆ. ಹುಟ್ಟು ಉಚಿತ, ಸಾವು ಖಚಿತ ಎಂಬ ಮಾತು ಕೂಡ ಇದನ್ನೇ ತಿಳಿಸುತ್ತದೆ. ಸಾವು ಯಾವುದೇ ಕ್ಷಣದಲ್ಲಿ, ಯಾವುದೇ ವಯಸ್ಸಿನಲ್ಲಿ ಸಂಭವಿಸಿದರೂ ಕೂಡ ಅದು ಕೊಡುವ ದುಃಖ ಅನನ್ಯವಾದದು. ಹಾಗಾಗಿ ಇರುವಷ್ಟು ಕಾಲ ಬದುಕನ್ನು ನೆಮ್ಮದಿಯಿಂದ, ಶಾಂತಿಯಿಂದ ಬಾಳುವುದನ್ನು ರೂಢಿಸಿಕೊಂಡರೆ ನಿಜಕ್ಕೂ ಆ ಬದುಕಿಗೆ ಸುಂದರವಾದ ಅರ್ಥ ಬರುತ್ತದೆ.

ತೋರ್ಪಡಿಕೆಯ ಬದುಕು ಬೇಡ : ಮತ್ತೊಬ್ಬರಿಗಾಗಿ ನಾವು ಬದುಕುವುದನ್ನು ಬಿಟ್ಟು ನಮಗಾಗಿ ನಾವು ಬದುಕಬೇಕು. ನಮ್ಮ ಬದುಕು ಮತ್ತೊಬ್ಬರನ್ನು ಮೆಚ್ಚಿಸಲು ಅವರಿಂದ ಹೊಗಳಿಸಿಕೊಳ್ಳಲು ಬೇಕಾಗಿರುವುದಿಲ್ಲ. ಇದನ್ನು ಹೇಳುವಾಗ ಸನ್ನಿವೇಶವೊಂದು ನೆನಪಿಗೆ ಬರುತ್ತದೆ.

ಸನ್ನಿವೇಶ : ಹೊಸ ಗಾಡಿ ತೆಗೆದುಕೊಂಡೆ ಅಂದ್ರಲ್ಲ! ಸ್ಟೇಟಸ್ ಅಲ್ಲಿ ಹಾಕೋದಲ್ವ? ಸ್ಟೇಟಸ್ ಅಲ್ಲಿ ಗಾಡಿ ಕಾಣಿಸುತ್ತದೆ, ಆದರೆ ಗಾಡಿ ತೆಗೆದುಕೊಳ್ಳಲು ಮಾಡಿರುವ ಸಾಲ ಕಾಣಿಸುವುದಿಲ್ಲಪ್ಪ,

ಹಾಗಾಗಿ ಹಾಕಲಿಲ್ಲ...! ನಿಮಗೆ ಬುದ್ಧಿ ಹೇಳೊಕೆ ಆಗುತ್ತಾ? ಏನೇ ಮಾಡಿದರೂ ನಾವು ಪ್ರಚಾರ ಪಡೆದುಕೊಳ್ಳಬೇಕು, ನೀವಿನ್ನೂ ಅಪ್ಡೇಟ್ ಆಗಿಲ್ಲ ಬಿಡಿ...!

ಆತ್ಮೀಯರೊಬ್ಬರ ಈ ಮಾತುಗಳನ್ನು ಕೇಳಿ ನಗಬೇಕೊ, ಅಳಬೇಕೊ ಒಂದು ತಿಳಿಯದಾದೆ. ಪ್ರಸ್ತುತ ದಿನಗಳಲ್ಲಿ ಪ್ರಚಾರ ಎಂಬ ಮಾಯಾಜಿಂಕೆಯನ್ನು ಒಂದಲ್ಲ ಒಂದು ಬಗೆಯಲ್ಲಿ ಹಿಡಿಯ ಹೊರಟಿರುವವರೇ ಎಲ್ಲರೂ. ಏನೇ ಮಾಡಿದರೂ ಅದು ಒಂದಷ್ಟು ಜನಕ್ಕೆ ಪ್ರಚಾರವಾಗಬೇಕು. ನಮ್ಮನ್ನು ನೋಡಿ ಎಲ್ಲರೂ ಮಾತನಾಡಿಕೊಳ್ಳಬೇಕು, ಗುರುತಿಸಬೇಕು ಎಂಬ ತೋರ್ಪಡಿಕೆಯಲ್ಲಿಯೇ ಬದುಕನ್ನು ನಡೆಸುತ್ತಾ ಬಂದಿದ್ದಾರೆ. ನಿಜ, ನಾವು ಮಾಡುವ ಕೆಲಸಗಳನ್ನು ನೋಡಿ ಅದಕ್ಕೆ ಪ್ರೋತ್ಸಾಹವನ್ನು ನೀಡಿದರೆ ಮತ್ತಷ್ಟು ಒಳ್ಳೆಯ ಕೆಲಸಗಳನ್ನು ಮಾಡಲು ಅನುವು ಮಾಡಿಕೊಟ್ಟಂತಾಗುತ್ತದೆ. ಆದರೆ ಒಳ್ಳೆಯ ಕೆಲಸ ಮಾಡುವುದೇ ಮತ್ತೊಬ್ಬರು ಗುರುತಿಸಲಿ ಎಂದಾದರೆ ಆ ಕೆಲಸಕ್ಕೆ ಯಾವುದೇ ಪ್ರತಿಫಲ ದೊರಕಲಾರದು. ಜೀವನ ತೋರ್ಪಡಿಕೆಗಲ್ಲ, ಮತ್ತೊಬ್ಬರಿಗಾಗಿ ನಾವು ಬದುಕಬೇಕಾಗಿಲ್ಲ, ಈ ಸತ್ಯ ನಮ್ಮೆಲ್ಲರಿಗೂ ಅರಿವಾಗಬೇಕು.

ಇನ್ನೂ ಕೆಲವರಿಗೆ ನಮ್ಮಲ್ಲಿಲ್ಲದ ಬದುಕನ್ನು ಇರುವಂತೆ ಬಿಂಬಿಸಿಕೊಳ್ಳಬೇಕು ಎಂಬ ಪ್ರಚಾರದ ಜಂಜಾಟದಲ್ಲಿ ತೋರ್ಪಡಿಕೆಗಾಗಿಯೇ ತಮ್ಮ ಬದುಕನ್ನು ಮೀಸಲಿಡುವ ಕೆಲಸ ಮಾಡುತ್ತಾರೆ. ಮುಂದೆ ಅದು ತಪ್ಪು ಎಂದು ತಿಳಿಯುವಷ್ಟರಲ್ಲಿ ಸಮಯ ಮೀರಿರುತ್ತದೆ. ಮತ್ತೊಬ್ಬರ ಓಲೈಕೆಗೆ ನಮ್ಮ ಜೀವನವನ್ನು ಮೀಸಲಿಟ್ಟು ಸಮಯ ಹಾಳುಮಾಡಿಕೊಳ್ಳುವ ಬದಲು ಸುಂದರವಾದ ಕ್ಷಣಗಳನ್ನು ಅರ್ಥಪೂರ್ಣವಾಗಿ ಸವಿಯುವ ಕೆಲಸ ಮಾಡೋಣ.

ಹಿತ್ತಾಳೆಯ ಕಿವಿ ನಮ್ಮದಾಗದಿರಲಿ : ಸುಂದರವಾಗಿ ಜೀವಿಸುವುದನ್ನು ಬಿಟ್ಟು ಮತ್ತೊಬ್ಬರ ಮಾತುಗಳಿಗೆ ಕಿವಿಗೊಡುವ ಕೆಲಸವನ್ನು ಮಾಡಿದಾಗ ಬದುಕು ಬೇಸರವಾಗುತ್ತದೆ. ಕನ್ನಡ ವ್ಯಾಕರಣದ ಪ್ರಕಾರ ಹಿತ್ತಾಳೆಯ ಕಿವಿ ಎಂಬುದು ನುಡಿಗಟ್ಟಿನ ಪದವಾಗಿದೆ. ಹಾಗಾಗಿ ಹಿತ್ತಾಳೆಯ ಕಿವಿ ಎಂದರೆ ಕಿವಿ ಕಿತ್ತಾಳೆಯದ್ದು ಎಂದು ಅರ್ಥವಲ್ಲ. ಚಾಡಿ ಮಾತನ್ನು ಕೇಳುವವರನ್ನು ಪರೋಕ್ಷವಾಗಿ ಹಿತ್ತಾಳೆ ಕಿವಿ ಹೊಂದಿರುವವರು ಎಂದು ಕರೆಯಲಾಗಿದೆ.

ಪ್ರಸ್ತುತ ದಿನಗಳಲ್ಲಿ ಈ ಹಿತ್ತಾಳೆಯ ಕಿವಿಯ ಜನರು ಎಲ್ಲೆಡೆ, ಎಲ್ಲಾ ಕ್ಷೇತ್ರದಲ್ಲೂ ಕಂಡು ಬರುತ್ತಾರೆ. ತಮ್ಮ ಬೇಳೆಯನ್ನು ಬೇಯಿಸಿಕೊಳ್ಳುವ ಉದ್ದೇಶದಿಂದ ಇಲ್ಲಸಲ್ಲದ ಮಾತುಗಳನ್ನು, ಅಪವಾದಗಳನ್ನು ಮತ್ತೊಬ್ಬರ ಮೇಲೆ ಹಾಕಿ ಅದೇ ತಮ್ಮ ಧನ್ಯವಾದ



> **ನೀರ ಮೇಲಿನ ಗುಳ್ಳೆ ಹಾಗೆ ಮನುಷ್ಯನ ಬದುಕು ಎಂಬ ಮಾತು ಜೀವನದ ನಶ್ವರತೆಯನ್ನು ಸಾರುತ್ತದೆ. ಈಗಿದ್ದವರು ಮುಂದಿನ ಗಳಿಗೆ ಇನ್ನಿಲ್ಲವಾಗಬಹುದು, ಸಾವಿನೊಂದಿಗೆ ಬದುಕು ಕಾಣದ ಹಾಗೆ ಸಾಗುತ್ತಾ ಬಂದಿರುತ್ತದೆ.**

ಉದ್ದೇಶ ಎಂದು ಸಾಬೀತುಪಡಿಸಿಕೊಳ್ಳುವ ಮಹಾನ್ ವ್ಯಕ್ತಿಗಳು ಅಲ್ಪಸ್ವಲ್ಪ ಹೆಚ್ಚಾಗಿ ಕಂಡುಬರುತ್ತಾರೆ.

ನನ್ನ ಅಭಿಪ್ರಾಯದ ಪ್ರಕಾರ ಕೆಲವು ಜನರಿಗೆ ಇದೇ ಗುಣಗಳು ಮೂಲಭೂತವಾಗಿ ಜನ್ಮದತ್ತವಾಗಿ ಅಂಟಿಕೊಂಡೇ ಬಂದಿರುತ್ತದೆ. ಹುಟ್ಟು ಗುಣ ಸುಟ್ಟರೂ ಹೋಗದು ಎಂಬ ಗಾದೆಯ ಮಾತನ್ನು ಸತ್ಯ ಮಾಡುವಂತೆ ಕಂಡುಬರುವ ಜನರು ಇರುತ್ತಾರೆ. ಚಾಡಿ ಮಾತನ್ನು ಹೇಳುವ ಜನರ ಬಗ್ಗೆ ಆಗಲಿ ಅವರ ಗುಣಗಳ ಬಗ್ಗೆ ಆಗಲಿ ನನಗೆ ಯಾವುದೇ ಚಕಾರವಿಲ್ಲ.ಏಕೆಂದರೆ ಅದು ಅವರ ವ್ಯಕ್ತಿತ್ವವನ್ನು ತೋರಿಸುವಂತದ್ದೆ ಆಗಿರುತ್ತದೆ. ಆದರೆ ಅಂತಹವರ ಮಾತುಗಳನ್ನು ಕೇಳುವ ಮೂಲಕ ತಮ್ಮ ಸ್ವತಂತ್ರ ಆಲೋಚನ ಶಕ್ತಿಯನ್ನು ಕಳೆದುಕೊಂಡು ಅವರ ತಾಳಕ್ಕೆ ಕುಣಿಯುವ ಜನರ ಬಗ್ಗೆ ನನಗೆ ಮರುಕವಿದೆ.

ಭವಿಷ್ಯದ ದೃಷ್ಟಿಯಿಂದಲೋ, ಅಭದ್ರತೆಯ ನೆಲೆಯಿಂದಲೋ ಅಥವಾ ಜನ್ಮದತ್ತವಾಗಿ ಮತ್ತೊಬ್ಬರನ್ನೇ ನೋಡಿ ಅವರ ಬಗ್ಗೆ ಮತ್ಸರಪಡುವಂತಹ ಬುದ್ಧಿಯನ್ನು ಉಳ್ಳಂತಹ ಜನರಿಗೆ ಚಾಡಿ ಮಾತು ಹೇಳುವುದು ಸರ್ವೆ ಸಾಮಾನ್ಯವಾಗಿರುತ್ತದೆ. ಆದರೆ ಇಂತಹ ಮಾತುಗಳನ್ನು ಕೇಳುವವರು ಸ್ವಲ್ಪ ಆಲೋಚಿಸಬೇಕು. ಹೇಳಿದ್ದನ್ನೆಲ್ಲ ಕೇಳುತ್ತಾ ಹೋದರೆ ನಮ್ಮನ್ನೇ ಬುಗುರಿನ್ನಾಗಿ ಮಾಡಿಕೊಂಡು ತಮಗೆ ಹೇಗೆ ಬೇಕೋ ಹಾಗೆ ಚಾಟಿ ಬೀಸುತ್ತಾ ಆಡಿಸುವ ಕೌಶಲ ಚಾಡಿ ಹೇಳುವವರಿಗೆ ಕರಗತವಾಗಿರುತ್ತದೆ.

ಬದುಕು ನಾವಂದುಕೊಂಡ ಹಾಗೆ ಎಂದೂ ಸಾಗದು. ಅಥವಾ ನಾವು ನಿರೀಕ್ಷಿಸಿದಂತೆ ಬದುಕಲು ಕೂಡ ಒಮ್ಮೊಮ್ಮೆ ಸಾಧ್ಯವಾಗುವುದಿಲ್ಲ. ಎಲ್ಲರೂ ನಮ್ಮನ್ನು ಪ್ರೀತಿಸಬೇಕು, ಎಲ್ಲರೂ ನಮಗೆ ಗೌರವವನ್ನು ಕೊಡಬೇಕು ಎಂದು ನಿರೀಕ್ಷೆ ಪಡುವುದು ಕೂಡ ಸರಿಯಲ್ಲ. ಪ್ರಾಮಾಣಿಕತೆಯಿಂದ ಕೆಲಸ ಮಾಡುವಾಗ ಆ ಪ್ರಾಮಾಣಿಕತೆ ಮತ್ತೊಬ್ಬರಿಗೆ ಕಿರಿಕಿರಿಯನ್ನುಂಟು ಮಾಡಬಹುದು. ಅಥವಾ ಇನ್ಯಾರಿಗೋ ಅದರಿಂದ ಮಾನಸಿಕ ಹಿಂಸೆ ಆಗಬಹುದು. ಹಾಗಾಗಿ ಇಲ್ಲಸಲ್ಲದ ವಿಚಾರಗಳನ್ನು, ಗಾಳಿ ಸುದ್ದಿಗಳನ್ನು ಹಬ್ಬಿಸುವ ಮೂಲಕ ತಮ್ಮ ಆಕ್ರೋಶವನ್ನು ಹೊರ ಹಾಕುತ್ತಿರುತ್ತಾರೆ. ಎಲ್ಲಿಯವರೆಗೆ ನಾವು ಈ ಗಾಳಿ ಸುದ್ದಿಗಳಿಗೆ, ಅಪವಾದಗಳಿಗೆ ನಮ್ಮ ಕಿವಿಗಳನ್ನು ಕೊಡುವೆವೋ ಅಲ್ಲಿಯವರೆಗೂ ನಮ್ಮ ಕಿವಿಗಳು ಹಿತ್ತಾಳೆ ಕಿವಿಯೇ ಆಗಿರುತ್ತದೆ.

ಸತ್ಯ ಕಹಿಯಾದದು ಸುಳ್ಳು ಸಿಹಿಯಾದದು, ಕಹಿ ದೇಹಕ್ಕೆ ಒಳ್ಳೆಯದನ್ನುಂಟು ಮಾಡಿದರೆ, ಸಿಹಿ ದೇಹಕ್ಕೆ ರೋಗವನ್ನು ತಂದೊಡ್ಡುತ್ತದೆ. ದುರಂತ ಎಂದರೆ ನಮ್ಮ ಜನರಿಗೆ ಸಿಹಿ ಇಷ್ಟವಾದಷ್ಟು ಕಹಿ ರುಚಿಸಲಾರದು. ಹಾಗಾಗಿಯೇ ಕೆಲವು ಉನ್ನತ ವರ್ಗದಲ್ಲಿ ಇದ್ದವರು ಕೂಡ ಈ ಹಿತ್ತಾಳೆಯ ಕಿವಿಯನ್ನು ಹೊಂದಿದವರಾಗಿರುತ್ತಾರೆ. ಗಾಳಿ ಸುದ್ದಿ ಹಬ್ಬಿಸುವವರ ಮಾತುಗಳನ್ನು ಕೇಳುತ್ತಾ ತಮ್ಮ ಸ್ವಂತತನವನ್ನು ಕಳೆದುಕೊಂಡು ವಿಚಾರ ಮಾಡದೆ ಅವರು ಹೇಳಿದ್ದನ್ನೇ ನಿಜವೆಂದು ಭ್ರಮಿಸಿ. ಆ ದಾರಿಯಲ್ಲಿಯೇ ಹೊರಡುತ್ತಾರೆ. ಸತ್ಯ ತಿಳಿಯುವ ವೇಳೆಗೆ ದಾರಿ ಬಹು ದೂರಕ್ರಮಿಸಿ ಆಗಿರುತ್ತದೆ. ಆದ್ದರಿಂದಲೇ ಮೊದಲೇ ಹೇಳಿದ್ದು ನಮ್ಮ ಕಿವಿ ಹಿತ್ತಾಳೆಯ ಕಿವಿ ಆಗಬಾರದು,ಆಗುವಂತೆ ಬಿಡಲೇಬಾರದು, ಈ ತತ್ವ ರೂಢಿಸಿಕೊಂಡರೆ ಬದುಕು ಸುಂದರವಾಗಿರುತ್ತದೆ.

ಹೊಟ್ಟೆಕಿಚ್ಚನ್ನು ನಂದಿಸೋಣ : ಧಗಧಗಿಸಿ ಹುರಿಯುತ್ತಿರುವ ಅಗ್ನಿಯ ಜ್ವಾಲೆಯನ್ನು ಕೆಲವೇ ಕ್ಷಣಗಳಲ್ಲಿ ಬೇಕಾದರೂ ನಂದಿಸಬಹುದು ಆದರೆ ಮನುಷ್ಯನ ಅಂತರಂಗದಲ್ಲಿ ಹುದುಗಿರುವ ಹೊಟ್ಟೆಯ ಕಿಚ್ಚನ್ನು ಎಂದಿಗೂ ಯಾರಿಂದಲೂ ನಂದಿಸಲಾಗದು. ಹೊಟ್ಟೆಕಿಚ್ಚು ಎಂಬುದು ಸಾಮಾನ್ಯವಾಗಿ ಪ್ರತಿಯೊಬ್ಬರಲ್ಲೂ ಬೇರೆ ಬೇರೆ ರೂಪದಲ್ಲಿ ಹುದುಗಿರುತ್ತದೆ. ನಮಗೆ ದೊರಕದ್ದು ಮತ್ತೊಬ್ಬರಿಗೆ ಅತಿ ಸುಲಭವಾಗಿ ದೊರೆತಿದ್ದಲ್ಲಿ ಸಹಜವಾಗಿಯೇ ಈ ಹೊಟ್ಟೆಕಿಚ್ಚು ಜನ್ಮ ತಳೆಯುತ್ತದೆ.

ಹಣ, ಕೀರ್ತಿ, ಪದವಿ, ಅಧಿಕಾರ, ಗುರುತಿಸಿಕೊಳ್ಳುವಿಕೆ ಮನುಷ್ಯರು ಹಂಬಲಿಸಿ ಪರಿತಪಿಸುವಂತವುಗಳು. ಇದಕ್ಕಾಗಿ ಯಾವುದೇ ಹಂತಕ್ಕೆ ಬೇಕಾದರೂ ಇಳಿಯಲು ತಯಾರಾಗಿರುತ್ತೇವೆ. ಸಹಜವಾಗಿ ಬಂದದ್ದು ದೀರ್ಘಕಾಲ ಉಳಿಯುತ್ತದೆ. ಅಲ್ಪಕಾಲದಲ್ಲಿ ಬಂದದ್ದು ಅಷ್ಟೇ ವೇಗವಾಗಿ ಕಣ್ಮರೆಯಾಗುತ್ತದೆ ಬದುಕಿನ ಈ ಸತ್ಯವನ್ನು ತಿಳಿದುಕೊಂಡಾಗ ಮಾತ್ರ ಬಹುಶಃ ಈ ಹೊಟ್ಟೆಕಿಚ್ಚನ್ನು ಸ್ವಾಭಾವಿಕವಾಗಿ ಶಮನ ಮಾಡಬಹುದೇನೋ !

ಮನುಷ್ಯನ ಮೊದಲ ಶತ್ರು ಈ ಹೋಲಿಕೆ. ತನ್ನನ್ನು ಇತರರೊಂದಿಗೆ ಯಾವಾಗಲೂ ಹೋಲಿಕೆ ಮಾಡಿಕೊಂಡು ಪರಿತಪಿಸಿ ಸಂಕಟಪಟ್ಟು ದುಃಖ ಪಡುವ ಜೀವಿ ಎಂದರೆ ನೂರಕ್ಕೆ ನೂರರಷ್ಟು ಅದು ಮಾನವನೇ ಆಗಿರುತ್ತಾನೆ. ಉದಾಹರಣೆಯ ರೂಪದಲ್ಲಿ ಹೇಳುವುದಾದರೆ ಒಂದು ಸಂಸ್ಥೆಯಲ್ಲಿ ದೀರ್ಘಕಾಲದ ಅವಧಿಯಲ್ಲಿ ಸೇವೆ ಸಲ್ಲಿಸಿದ್ದವರಿಗೆ ಸಿಗುವ ವೇತನ, ಉಡುಗೊರೆ, ಬಡ್ತಿ ಹೊಸದಾಗಿ ಸೇರ್ಪಡೆಯಾದವರಿಗೆ ಅವರ ಸಾಮರ್ಥ್ಯ ಅಥವಾ ಅದೃಷ್ಟ / ಶಿಫಾರಸ್ಸು / ಇನ್ನಿತರ ಕಾರಣದಿಂದ ದೊರೆತ್ತಿದ್ದಲ್ಲಿ ಮೊದಲಿನಿಂದ ಕೆಲಸ ಮಾಡುತ್ತಿದ್ದವರಿಗೆ ಸಹಜವಾಗಿಯೇ ಹೊಸಬರ ಮೇಲೆ ಹೊಟ್ಟೆಕಿಚ್ಚಿನ ಭೂತ ಆಕ್ರಮಣ ಮಾಡುತ್ತದೆ.

ನನಗೆ ಇಲ್ಲಿ ಅರ್ಥವಾಗದ ಒಂದು ವಿಷಯವೆಂದರೆ ಅಧಿಕಾರ ನಮಗೆ ಸಿಗಲಿಲ್ಲವೆಂದು ಸಂಕಟಪಡುವ ಮನುಷ್ಯರು ಉಳಿದವರಿಗೆ ಬಂದಿರುವ ರೋಗ ಅವರಿಗೆ ಬಂದಿರುವ ಕಷ್ಟ ನನಗೂ ಬರಲಿ ಎಂದು ಯಾಕೆ ಹೋಲಿಕೆ ಮಾಡಿಕೊಳ್ಳಲಾರರು?! ಇದು ಮನುಷ್ಯನ ಸೋಗಲಾಡಿತನಕ್ಕೆ ಕೈಗನ್ನಡಿ. ಕೈಗೆಟುಕದ ದ್ರಾಕ್ಷಿ ಹುಳಿ ಎಂಬ ನರಿಯಂತೆ ನಮಗೆ ಸಿಗಲಾರದ್ದು ಮತ್ತೊಬ್ಬರಿಗೆ ಸಿಕ್ಕಿರುವುದನ್ನು ನೋಡಿ ಸಹಜವಾಗಿ ಸಂಕಟ ಅನುಭವಿಸುತ್ತೇವೆ. ಮೊದಲು ಈ ಗುಣವನ್ನು ಹೋಗಲಾಡಿಸಿಕೊಳ್ಳಬೇಕು. ಈ ಪ್ರಪಂಚದಲ್ಲಿ ಪ್ರತಿಯೊಂದು ವಸ್ತುವಿಗೂ ಅದರದೇ ಆದ ಮೌಲ್ಯವಿದೆ, ಹಾಗೆಯೇ ಪ್ರತಿಯೊಬ್ಬ ವ್ಯಕ್ತಿಗೂ ಅವನದ್ದೇ ಆದ ಸಾಮರ್ಥ್ಯವಿದೆ. ಅದನ್ನು ಸದ್ಬಳಕೆ ಮಾಡಿಕೊಳ್ಳಬೇಕೇ ಹೊರತು ಮತ್ತೊಬ್ಬರ ಮೇಲೆ ಅಸೂಯೆ ಪಡುತ್ತಾ ನಮ್ಮ ಸಮಯವನ್ನು ಹಾಳು ಮಾಡಿಕೊಳ್ಳಬಾರದು.

ಪ್ರತಿಯೊಬ್ಬರು ಹುಟ್ಟಿ ಬಂದ ಪರಿಸರ, ಪರಿಸ್ಥಿತಿ ವಿಭಿನ್ನವಾಗಿರುತ್ತದೆ. ಉದಾಹರಣೆಗೆ ನಾನು ಕಡು ಬಡತನದಲ್ಲಿ ಹುಟ್ಟಿ ಬಂದೆ, ತಿನ್ನುವುದಕ್ಕೂ ಕೂಡ ಹಣವಿರಲಿಲ್ಲ. ಆದರೆ ನನ್ನ ಮಕ್ಕಳಿಗೆ ಆ ರೀತಿಯ ಪರಿಸ್ಥಿತಿ ಇಲ್ಲ. ನೆಮ್ಮದಿಯಾಗಿ ಕುಳಿತುಕೊಂಡು ನಿಶ್ಚಿಂತೆಯಾಗಿ ಜೀವನ ನಡೆಸಬಹುದು ಎಂದು ಭಾವಿಸೋಣ. ಆಗ ಮಗನಿಗೆ ನೋಡು ನಾನು ಕಷ್ಟಪಟ್ಟದ್ದಕ್ಕೆ ನೀನು ಸುಖವಾಗಿ ಇರುವುದಕ್ಕೆ ಸಾಧ್ಯವಾದುದು ಎಂದರೆ ಮಗ ಖಂಡಿತವಾಗಿಯೂ ಅದನ್ನು ಗ್ರಹಿಸಲಾರನು.ಏಕೆಂದರೆ ಬಡತನದ ಅರಿವು ಅವನಿಗಿರುವುದಿಲ್ಲ, ನೀವು ಪಟ್ಟ ಶ್ರಮ ಅವನು ಕಂಡಿರುವುದಿಲ್ಲ. ಹೀಗೆ ಹೇಳಿದ ಮಾತ್ರಕ್ಕೆ ನೀವು ಪಟ್ಟ ಕಷ್ಟವೇನಿಲ್ಲ ಎಂದರ್ಥವಲ್ಲ, ಅದನ್ನು ತಿಳಿಯುವ ಅಗತ್ಯವಾಗಲೀ, ವ್ಯವಧಾನವಾಗಲೀ ಯಾರು ಮಾಡಲಾರರು.

ಹೀಗೆಯೇ ಒಬ್ಬ ವ್ಯಕ್ತಿಗೆ ಎಲ್ಲವೂ ಸುಲಭವಾಗಿ ಸಿಗುತ್ತಿದೆ ಎಂದರೆ ಅದರ ಹಿಂದೆ ಹಲವು ವರ್ಷಗಳ ಪರಿಶ್ರಮ ಅಡಗಿರುತ್ತದೆ. ಆದರೆ ಅದನ್ನು ಗ್ರಹಿಸದ ಜನರು ತಮ್ಮ ಬಾಯಿಗೆ ಬಂದಂತೆ ಮಾತನಾಡುತ್ತಾ ತಮಗೆ ಸಿಗಲಾರದ್ದು ಅವನಿಗೆ ಸಿಕ್ಕಿದೆ ಎಂಬುದು ಅವರ ಹೊಟ್ಟೆಕಿಚ್ಚಿಗೆ ಕಾರಣವಾಗಿರುತ್ತದೆ. ಹಾಗಾಗಿ ಈ ಹೊಟ್ಟೆಕಿಚ್ಚಿನ ಗುಣವನ್ನು ಕಡಿಮೆ ಮಾಡಿಕೊಂಡರೆ ಅಥವಾ ಅಂತವರಿಂದ ದೂರವಾಗಿ ಉಳಿದರೆ ಬದುಕು ನಿಜಕ್ಕೂ ಅರ್ಥಪೂರ್ಣವಾಗಿರುತ್ತದೆ.

ಸಾವು ಯಾವಾಗ ಬೇಕಾದರೂ, ಹೇಗೆ ಬೇಕಾದರೂ, ಯಾವ ವಯಸ್ಸಿನಲ್ಲಿ ಬೇಕಾದರೂ ಸಂಭವಿಸಬಹುದು. ಸತ್ತಾಗ ಪರಿತಪಿಸುವ ಬದಲು, ಇದ್ದಾಗಲೇ ಸಾಧ್ಯವಾದಷ್ಟು ಒಳಿತನ್ನು ಮಾಡುತ್ತ, ದೇವರು ನೀಡಿರುವ ಈ ಸುಂದರವಾದ ಜೀವನವನ್ನು ಮತ್ತಷ್ಟು ಸುಂದರವಾಗಿಸಿಕೊಳ್ಳೋಣ. ಅಂದವಾಗಿ ಬದುಕಲು ಸಾಕಷ್ಟು ಅವಕಾಶಗಳು ಇದ್ದೇ ಇರುತ್ತವೆ, ಆನಂದ ಮನಸಲ್ಲಿ ಇದ್ದರೆ ಜಗತ್ತು ಅಂದವಾಗಿ ಕಾಣುತ್ತದೆ. ಒಳಗೆ ಕೆಟ್ಟದ್ದು ತುಂಬಿಕೊಂಡು ಹೊರಗೆ ಕಾಣುವ ಸುಂದರತೆಯನ್ನು ದೂರುತ್ತಲೇ ಇದ್ದರೆ ಸೌಂದರ್ಯೋಪಾಸನೆ ಸಾಧ್ಯವಾಗಲಾರದು. ಎಲ್ಲವನ್ನು ಪ್ರೀತಿಸಿ ಎಲ್ಲರನ್ನೂ ಪ್ರೀತಿಸಿ ಏಕೆಂದರೆ ಈ ಬದುಕು ಒಂದು ಕ್ಷಣದ ಅವಕಾಶವಷ್ಟೇ.

ವಿವಿಧ ಕ್ಷೇತ್ರದ ಸಾಧಕರಿಗೆ ಕನ್ನಡ ಸೇವಾ ರತ್ನ ಪ್ರಶಸ್ತಿ ಪ್ರದಾನ

ಮೈಸೂರು, ಮೇ 22(ಎಂಕೆ)– ಮೈಸೂರು ಜಿಲ್ಲಾ ಕನ್ನಡ ಚಳುವಳಿಗಾರರ ಸಂಘದ ವತಿಯಿಂದ ಸುವರ್ಣ ಕರ್ನಾಟಕ ಸಂಭ್ರಮ–50ರ ಅಂಗವಾಗಿ ವಿವಿಧ ಕ್ಷೇತ್ರದ ಸಾಧಕರಿಗೆ 'ಕನ್ನಡ ಸೇವಾ ರತ್ನ ಪ್ರಶಸ್ತಿ' ನೀಡಿ ಗೌರವಿಸಲಾಯಿತು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಆರಾಧ್ಯ ಮಹಾಸಭಾದಲ್ಲಿ ಗುರುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅವರಿಗೆ ಹಿರಿಯ ಪತ್ರಕರ್ತ ದಿವಂಗತ ರಾಜಶೇಖರ ಕೋಟಿ ಅವರ ಸ್ಮರಣಾರ್ಥ ಕನ್ನಡ ಸೇವಾ ರತ್ನ ಪ್ರಶಸ್ತಿ ಹಾಗೂ ಮಾಜಿ ಸಚಿವ ದಿವಂಗತ ಹೆಚ್.ಎಸ್.ಮಹದೇವಪ್ರಸಾದ್ ಸ್ಮರಣಾರ್ಥ ಪ್ರಶಸ್ತಿಯನ್ನು ಸಾಹಿತಿ ಪ್ರೊ.ಸಿ.ನಾಗಣ್ಣ ಅವರಿಗೆ ವಿಶೇಷ ಪ್ರಶಸ್ತಿಯನ್ನು ಸುವರ್ಣ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಅವರಿಗೆ ಪ್ರದಾನ ಮಾಡಲಾಯಿತು.

ಹಾಗೆಯೇ ವಿವಿಧ ಕ್ಷೇತ್ರದಲ್ಲಿನ ಸಾಧಕರಾದ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು (ಆಡಳಿತ ಸೇವೆ), ಎಂಸಿಸಿಐ ಅಧ್ಯಕ್ಷ ಕೆ.ಬಿ. ಲಿಂಗರಾಜು(ಉದ್ಯಮ), ಕೆ. ರಘುರಾಂ ವಾಜಪೇಯಿ(ಸಮಾಜ ಸೇವೆ), ವಕೀಲ ಸಿ.ಅಪ್ಪಾಜಿಗೌಡ(ನ್ಯಾಯಾಂಗ), ಕೆ.ಆರ್. ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಹೆಚ್.ಪಿ. ಶೋಭಾ(ವೈದ್ಯಕೀಯ), ಜಿಲ್ಲಾ ಕರವೇ ಶಿವರಾಮೇಗೌಡ ಬಣ ಅಧ್ಯಕ್ಷ ಹೆಚ್.ಡಿ. ಪುರುಷೋತ್ತಮ್(ಕನ್ನಡ ಸೇವೆ), ಕರುನಾಡ ರಕ್ಷಣಾ ವೇದಿಕೆ ಅಧ್ಯಕ್ಷ ಕೆ.ವೇಣು ಗೋಪಾಲ್(ಕನ್ನಡ ಸೇವೆ), ಎಸ್.ಜಗದೀಶ್(ಕಾರ್ಮಿಕ), ಜಿಲ್ಲಾ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಜೆ. ಗೋವಿಂದರಾಜು(ಸರ್ಕಾರಿ ನೌಕರ), ಎಸ್.ನಟರಾಜು(ಶಿಕ್ಷಣ), ಡಾ.ಕೆ.ವಿ.ಕೆ. ಸುರೇಂದ್ರನ್(ವೈದ್ಯಕೀಯ) ಹಾಗೂ ತೇಜೇಸ್ ಲೋಕೇಶ್‌ಗೌಡ(ಕನ್ನಡ ಸೇವೆ) ಅವರಿಗೆ 'ಕನ್ನಡ ಸೇವಾ ರತ್ನ ಪ್ರಶಸ್ತಿ' ನೀಡಿ ಅಭಿನಂದಿಸಲಾಯಿತು.

ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಿದ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಭಾರತೀಯ ಪರಂಪರೆಯಿಂದಲೇ ಕರ್ನಾಟಕ ಪರಂಪರೆ ಬೆಳೆದು ಬಂದಿದೆ. ಕನ್ನಡ ಭಾಷೆ ನಮ್ಮೆಲ್ಲರ ಏಕತೆಯ ಪ್ರತಿಬಿಂಬವಾಗಿದ್ದು, ಪ್ರಕೃತಿ ಹಾಗೂ ಪರಂಪರೆಯನ್ನು ಒಳಗೊಂಡು ಸೃಷ್ಟಿಯಾದ ಕನ್ನಡ ಭಾಷೆ ನಮ್ಮೆಲ್ಲರ ಒಗ್ಗಟ್ಟಿನ ಭಾಷೆಯೂ ಆಗಿದೆ ಎಂದರು.

ಕರ್ನಾಟಕ ಏಕೀಕರಣ ಸಂದರ್ಭದಲ್ಲಿ ಕನ್ನಡ ಭಾಷೆ ಮಹತ್ವದ ಪಾತ್ರ ನಿರ್ವಹಿಸಿದ್ದರ ಬಗ್ಗೆ ನಾವೆಲ್ಲರೂ ಇತಿಹಾಸದಲ್ಲಿ ತಿಳಿದಿದ್ದೇವೆ. ಭಾರತದಲ್ಲಿ ನಮ್ಮನ್ನು ಬೇರ್ಪಡಿಸುವ ಕೆಲಸ ನಡೆಯುತ್ತಿದ್ದು, ಒಗ್ಗಟ್ಟು ನಮ್ಮದಾಗಿರಬೇಕು. ಪ್ರತಿಯೊಬ್ಬ ಕನ್ನಡಿಗರು ಭಾರತೀಯರು ಎಂಬ ತತ್ವ ಮನೆ ಮನಗಳಲ್ಲಿ ಸದಾ ತುಂಬಿರಬೇಕು. ಕನ್ನಡ ಭಾಷೆ ಸದಾ ಕಾಲ ವಿಜೃಂಭಿಸಬೇಕು ಎಂದು ಕನ್ನಡಾಭಿಮಾನ ತೋರಿಸಿದರು.

ಮುಖ್ಯ ಭಾಷಣ ಮಾಡಿದ ಸಾಹಿತಿ ಪ್ರೊ. ಸಿ.ನಾಗಣ್ಣ, ಎಲ್ಲಿಯವರೆಗೆ ಕನ್ನಡ ಚಳವಳಿ ಜೀವಂತವಾಗಿರುತ್ತದೋ ಅಲ್ಲಿಯವರೆಗೆ ನಮ್ಮ ಸಾಹಿತ್ಯ ಮತ್ತು ಸಂಸ್ಕೃತಿ ಜೀವಂತವಾಗಿರುತ್ತದೆ. ಬರಹಗಾರರು ಸಾಫ್ಟ್‌ವೇರ್, ಚಳವಳಿಗಾರರು ಹಾರ್ಡ್‌ವೇರ್ ಇದ್ದಂತೆ. ಇವರಲ್ಲಿ ಒಬ್ಬರನ್ನು ಬಿಟ್ಟು ಮತ್ತೊಬ್ಬರು ಇರಲು ಸಾಧ್ಯವೇ ಇಲ್ಲ. ಚಳವಳಿಗಾರರು ಜಾಗೃತರಾಗಿರುವುದರಿಂದ ಬರಹಗಾರರ ಬರಹ ನಿರಾತಂಕವಾಗಿ ಸಾಗುತ್ತದೆ. ನಾಡು– ನುಡಿಯ ಸಮೃದ್ಧಿಗೆ ಚಳವಳಿಗಾರರು ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಕಾರಣರಾಗುತ್ತಾರೆ ಎಂದರು.

ಆರೋಗ್ಯ ತಪಾಸಣೆ, ಗಾನಲಹರಿ: ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಸುಯೋಗ್ ಆಸ್ಪತ್ರೆ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು. ಹಾಗೆಯೇ ಪಿ.ಎಂ.ರಿಕ್ರಿಯೇಷನ್ ತಂಡದ ಗಾಯಕರು ಗಾನಲಹರಿ ನಡೆಸಿಕೊಟ್ಟರು. ಪ್ರಶಸ್ತಿ ಪ್ರದಾನದ ಬಳಿಕ ಪೌರಕಾರ್ಮಿಕ ಮಹಿಳೆಯರಿಗೆ ಸೀರೆಗಳನ್ನು ವಿತರಿಸಲಾಯಿತು.

ಸಮಾರಂಭ ಉದ್ಘಾಟಿಸಿದ ಗುಂಡ್ಲುಪೇಟೆ ಶಾಸಕ ಹೆಚ್.ಎಂ.ಗಣೇಶಪ್ರಸಾದ್, ದಿವಂಗತ ರಾಜಶೇಖರ ಕೋಟಿ ಹಾಗೂ ಹೆಚ್.ಎಸ್.ಮಹದೇವಪ್ರಸಾದ್ ಅವರ ಭಾವಚಿತ್ರಗಳಿಗೆ ಪುಷ್ಪಾಮಾಲಿಕೆ ಅರ್ಪಿಸಿದರು. ಹಿರಿಯ ಸಾಹಿತಿ ಡಾ.ಸಿಪಿಕೆ ಅಧ್ಯಕ್ಷತೆ ವಹಿಸಿದ್ದರು. ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಶಾಂತವೇರಿ ಗೋಪಾಲಗೌಡ ಆಸ್ಪತ್ರೆ ಮುಖ್ಯಸ್ಥ ಡಾ.ಶುಶ್ರುತ್‌ಗೌಡ, ಕನ್ನಡ ಚಳವಳಿಗಾರರ ಸಂಘದ ಅಧ್ಯಕ್ಷ ಬಿ.ಎ.ಶಿವಶಂಕರ್, ಹರದನಹಳ್ಳಿ ಬಸವರಾಜು, ದೂರ ಸುರೇಶ್, ನಂಜನಗೂಡು ಜಯಕುಮಾರ್, ಮೂಗೂರು ಶಿವಶಂಕರ್, ವೀರನಗೆರೆ ಕುಮಾರ್, ಮುರುಳಿಧರ್ ಇದ್ದರು.



ವಿವಿಧ ಕ್ಷೇತ್ರದ ಸಾಧಕರಿಗೆ 'ಕನ್ನಡ ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕನ್ನಡಪರ ಹೋರಾಟ ಅಗತ್ಯವಿದೆ...

ಬ್ಯಾಂಕುಗಳಲ್ಲಿ ಕನ್ನಡ ಮಾತನಾಡಲ್ಲ ಎಂಬ ವರ್ತನೆ ಈಗಲೂ ಇದೆ. ಇಂತಹ ಪರಿಸ್ಥಿತಿಯಲ್ಲಿ ಕನ್ನಡಪರ ಸಂಘಟನೆಗಳ ಹೋರಾಟ ಅಗತ್ಯವಿದೆ. ಈ ನಿಟ್ಟಿನಲ್ಲಿ ಕನ್ನಡ ಚಳವಳಿಗಾರರ ಸಂಘದ ಬಿ.ಎ.ಶಿವಶಂಕರ್ ನೇತೃತ್ವದಲ್ಲಿ ಕನ್ನಡ ನಾಡು– ನುಡಿ, ಜಲ–ಗಡಿ ವಿಚಾರದಲ್ಲಿ ಸಾಕಷ್ಟು ಹೋರಾಟಗಳು ನಡೆಯುತ್ತಿರುವುದು ಶ್ಲಾಘನೀಯ.

– ಹೆಚ್.ಎಂ.ಗಣೇಶಪ್ರಸಾದ್, ಶಾಸಕ

ಕುವೆಂಪು ಅವರ ಕೃತಿಗಳಿಗೆ ನೊಬೆಲ್ ಪ್ರಶಸ್ತಿ ದೊರೆಯುತ್ತಿತ್ತು...


ಖ್ಯಾತ ಲೇಖಕಿ ಬಾನು ಮುಷ್ತಾಕ್ ಅವರ ಕೃತಿ, ಇಂಗ್ಲಿಷ್‌ಗೆ ಅನುವಾದಗೊಂಡು ಬೂಕರ್ ಪ್ರಶಸ್ತಿ ಪಡೆದಿದೆ. ಅದೇ ಕುವೆಂಪು ಅವರ ಕೃತಿಗಳು ಇಂಗ್ಲಿಷ್ ಹಾಗೂ ಯುರೋಪಿಯನ್ ಭಾಷೆಗೆ ತರ್ಜುಮೆಯಾಗಿದ್ದರೆ ನೊಬೆಲ್ ಪ್ರಶಸ್ತಿ ದಕ್ಕದೆ ಇರುತ್ತಿರಲಿಲ್ಲ.

– ಪ್ರೊ.ಸಿ.ನಾಗಣ್ಣ, ಸಾಹಿತಿ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No.114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಾಲಿವುಡ್ ನಟಿ ತಮನ್ನಾ ಬಾಟಿಯಾ ಮೈಸೂರು ಸ್ಯಾಂಡಲ್ ಸೋಪ್ ರಾಯಭಾರಿ

ಎರಡು ವರ್ಷಕ್ಕೆ 6.20 ಕೋಟಿಗೆ ಒಪ್ಪಂದ



ಬೆಂಗಳೂರು, ಮೇ 22– ಕರ್ನಾಟಕ ಸರಕಾರದ ಒಡೆತನಕ್ಕೆ ಸೇರಿದ ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿ. (ಕೆಎಸ್‌ಡಿಎಲ್)ನ ರಾಯಭಾರಿಯಾಗಿ ಜನಪ್ರಿಯ ಬಾಲಿವುಡ್ ನಟಿ ತಮನ್ನಾ ಭಾಟಿಯಾ ಅವರನ್ನು ನೇಮಕ ಮಾಡಲಾಗಿದೆ. ಈ ಸಂಬಂಧ ರಾಜ್ಯ ಸರಕಾರ ಬುಧವಾರ ಆದೇಶ ಹೊರಡಿಸಿದೆ.

ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿ.ನ ಅಧಿಕೃತ ಬ್ರಾಂಡ್ ರಾಯಭಾರಿಯಾಗಿ ತಮನ್ನಾ ಭಾಟಿಯರನ್ನು 2 ವರ್ಷ ಮತ್ತು ಎರಡು ದಿನಗಳ ಅವಧಿಗೆ 6.20 ಕೋಟಿ ರೂ. ವೆಚ್ಚದಲ್ಲಿ ನೇಮಕ ಮಾಡಿಕೊಳ್ಳಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕರ್ನಾಟಕ ಸರ್ಕಾರ ಮೈಸೂರು ಸ್ಯಾಂಡಲ್ ಸೋಪ್ ಮಾರಾಟವನ್ನು ದೊಡ್ಡ ಮಟ್ಟಕ್ಕೆ ಹೆಚ್ಚಿಸಲು ಉದ್ದೇಶಿಸಿದ್ದು, ಇದಕ್ಕಾಗಿ ಇದೀಗ ರಾಷ್ಟ್ರ ಮಟ್ಟದಲ್ಲಿ ಮಿಂಚುತ್ತಿರುವ ತಮನ್ನಾ ಭಾಟಿಯಾ ಅವರನ್ನು ಕರೆ ತಂದಿದೆ. ತನ್ನ ಉತ್ಪನ್ನಗಳನ್ನು 23 ದೇಶಗಳಿಗೆ ರಫ್ತು ಮಾಡುತ್ತಿದ್ದ ಕೆಎಸ್‌ಡಿಎಲ್ ಇದನ್ನೀಗ 80 ದೇಶಗಳಿಗೆ ವಿಸ್ತರಿಸಿದ್ದು, ಮಾರ್ಚ್ 2026ರ ವೇಳೆಗೆ ಈ ದೇಶಗಳಲ್ಲಿ ಹೆಚ್ಚಿನ ಮಾರಾಟದ ಗುರಿ ಹಾಕಿಕೊಂಡಿದೆ. ತನ್ನ ವಿಶಿಷ್ಟ ಪರಿಮಳಕ್ಕೆ ಹೆಸರುವಾಸಿಯಾಗಿರುವ ಮೈಸೂರು ಸ್ಯಾಂಡಲ್ ಸೋಪ್ ಅನ್ನು 1918ರಲ್ಲಿ ಮೊದಲ ಬಾರಿಗೆ ಬಿಡುಗಡೆ ಮಾಡಲಾಗಿತ್ತು. ಈಗಾಗಲೇ ಶತಮಾನೋತ್ಸವ ದಾಟಿ ಬ್ರಾಂಡ್ ಮುನ್ನುಗ್ಗುತ್ತಿದೆ. ಸಂಸ್ಥೆಯ ಪ್ರೀಮಿಯಂ ಉತ್ಪನ್ನವಾಗಿರುವ 'ಮಿಲೇನಿಯಮ್' (150 ಗ್ರಾಂ) ಸೋಪ್‌ಗೆ 810 ರೂ. ದರವಿದ್ದು, ಇದು ದೇಶದ ಅತ್ಯಂತ ದುಬಾರಿ ಸೋಪ್‌ಗಳಲ್ಲಿ ಒಂದಾಗಿದೆ.

ಕೆಎಸ್‌ಡಿಎಲ್ ತನ್ನ ಉತ್ಪನ್ನಗಳಲ್ಲಿ ಶುದ್ಧ ಶ್ರೀಗಂಧದ ಎಣ್ಣೆಯ ಬಳಕೆಗೆ ಹೆಸರುವಾಸಿಯಾಗಿದ್ದು, ಸಾಬೂನು, ಸೌಂದರ್ಯವರ್ಧಕಗಳು ಮತ್ತು ಊದುಬತ್ತಿ ಸೇರಿದಂತೆ ವ್ಯಾಪಕ ಶ್ರೇಣಿಯ ವೈಯಕ್ತಿಕ ಆರೈಕೆ ಉತ್ಪನ್ನಗಳನ್ನು ತಯಾರಿಸುತ್ತಿದೆ. ಈಗಾಗಲೇ ಲಾಭದಲ್ಲಿರುವ ಕಂಪನಿಯು ಇದೀಗ ತನ್ನ ಆದಾಯವನ್ನು ಹೆಚ್ಚಿಸಲು ಆಕ್ರಮಣಕಾರಿ ಮಾರ್ಕೆಟಿಂಗ್ ತಂತ್ರಗಳ ಮೊರೆ ಹೋಗಿದೆ.

ಸಚಿವ ಎಂ.ಬಿ ಪಾಟೀಲ್ ಸಮರ್ಥನೆ: ತಮನ್ನಾರನ್ನ ರಾಯಭಾರಿಯಾಗಿ ಆಯ್ಕೆ ಮಾಡಿ ಆದೇಶ ಹೊರಡಿಸಿದ ಬೆನ್ನಲ್ಲೆ ಈ ಬಗ್ಗೆ ಸಾಮಾಜಿಕ ಜಾಲತಾಣದಲ್ಲಿ ಸಾಕಷ್ಟು ಮಂದಿ ಕರ್ನಾಟಕ ಸರ್ಕಾರ ಹಾಗೂ ಸಚಿವರನ್ನು ಕನ್ನಡ ನಟಿ ಬದಲಿಗೆ ಬೇರೆ ಭಾಷೆ ನಟಿ ಯಾಕೆ ಎಂದು ನೆಟ್ಟಿಗರು ಪ್ರಶ್ನೆ ಮಾಡಿದ್ದಾರೆ. ನೆಟ್ಟಿಗರೊಬ್ಬರು ಪ್ರಶ್ನೆಗೆ ಎಂಬಿ ಪಾಟೀಲ್ ಟ್ವೀಟ್ ಮೂಲಕ ಉತ್ತರ ನೀಡಿದ್ದಾರೆ.

ಕನ್ನಡ ಚಲನಚಿತ್ರೋದ್ಯಮದ ಬಗ್ಗೆ ಕೆಎಸ್‌ಡಿಎಲ್‌ಗೆ ಆಳವಾದ ಗೌರವ ಮತ್ತು ಗೌರವವಿದೆ. ಕೆಲವು ಕನ್ನಡ ಚಲನಚಿತ್ರಗಳು ಬಾಲಿವುಡ್ ಚಲನಚಿತ್ರಗಳಿಗೂ ಸ್ಪರ್ಧೆಯನ್ನು ನೀಡುತ್ತಿವೆ. ಮೈಸೂರು ಸ್ಯಾಂಡಲ್ ಕರ್ನಾಟಕದೊಳಗೆ ಉತ್ತಮ ಬ್ರಾಂಡ್ ಮರುಸ್ಥಾಪನೆಯನ್ನು ಹೊಂದಿದೆ. ಇದನ್ನು ಬಲಪಡಿಸಲಾಗುವುದು. ಆದಾಗ್ಯೂ, ಮೈಸೂರು ಸ್ಯಾಂಡಲ್‌ನ ಉದ್ದೇಶವು ಕರ್ನಾಟಕದಾಚೆಗಿನ ಮಾರುಕಟ್ಟೆಗಳಲ್ಲಿ ಆಕ್ರಮಣಕಾರಿಯಾಗಿ ಸ್ಪರ್ಧೆ ನೀಡುವುದಾಗಿದೆ. ಕರ್ನಾಟಕದ ಹೆಮ್ಮೆಯೂ ರಾಷ್ಟ್ರದ ರತ್ನವಾಗಿದೆ. ಆದ್ದರಿಂದ ಇದು ವಿವಿಧ ಮಾರ್ಕೆಟಿಂಗ್ ತಜ್ಞರೊಂದಿಗೆ ಸಮಾಲೋಚಿಸಿದ ನಂತರ ಪಿಎಸ್‌ಯು ಮಂಡಳಿಯ ಸ್ವತಂತ್ರ ಕಾರ್ಯತಂತ್ರದ ನಿರ್ಧಾರವಾಗಿದೆ ಎಂದು ಎಂಬಿ ಪಾಟೀಲ್ ತಮನ್ನಾ ಆಯ್ಕೆ ಯಾಕೆ ಎಂಬ ಪ್ರಶ್ನೆಗೆ ಉತ್ತರಿಸಿದ್ದಾರೆ. ರಾಯಭಾರಿಯಾಗಬೇಕು ಎಂದಾದರೆ, ನಟಿಯ ಲಭ್ಯತೆ, ಇತರೆ ಬ್ರ್ಯಾಂಡ್ ಜತೆಗಿನ ಒಪ್ಪಂದ, ಇನ್‌ಸ್ಟಾಗ್ರಾಂ, ಫೇಸ್‌ಬುಕ್, ಯುಟ್ಯೂಬ್, ಟ್ವಿಟ್ಟರ್ ಇತ್ಯಾದಿಗಳಲ್ಲಿ ಎಷ್ಟು ಸಕ್ರಿಯರಾಗಿದ್ದಾರೆ? ಅವರ ಅನುಯಾಯಿಗಳ ಸಂಖ್ಯೆ, ಎಂಗೇಜ್‌ಮೆಂಟ್ ಪ್ರಮಾಣ, ವಿಷಯಗಳು, ವ್ಯಕ್ತಿತ್ವ, ಸಂವಹನ ಶೈಲಿ ಇವು ಎಲ್ಲನ್ನು ಪರಿಗಣಿಸಲಾಗುತ್ತದೆ. ನಮ್ಮ ಉತ್ಪನ್ನದ ಮೌಲ್ಯಗಳು ಹಾಗೂ ಗುರಿ ಗ್ರಾಹಕರೊಂದಿಗೆ ಹೊಂದಿಕೊಳ್ಳುತ್ತದೆಯಾ ಬ್ರ್ಯಾಂಡ್‌ನ ಹೃದಯವಂತಿಕೆ ಅವರು ಪ್ರತಿ ಬಿಂಬಿಸಬೇಕಾಗುತ್ತದೆ. ಅವರ ಶ್ರೋತೃವರ್ಗ ನಮ್ಮ ಗುರಿ ಗ್ರಾಹಕರೊಂದಿಗೆ ತಾಳ–ಮೇಳವಿದೆಯಾ? ಅವರ ಪ್ರಭಾವ ಎಷ್ಟು ವ್ಯಾಪಕವಾಗಿದೆ? ಅವರು ನಮ್ಮ ಮಾರಾಟದ ಗುರಿಗೆ ಸಹಾಯ ಮಾಡಬಲ್ಲವರಾ? ಎಂಬ ಹಲವು ಅಂಶಗಳನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ ಎಂದು ಮಾರುಕಟ್ಟೆ ತಜ್ಞರು ಅಭಿಪ್ರಾಯಪಟ್ಟಿದ್ದಾರೆ.



ನಮ್ಮಲ್ಲಿ ರಾಜ್‌ಕುಮಾರ್, ಪುನೀತ್ ರಾಜ್‌ಕುಮಾರ್ ಅಂತಹವರು ನಂದಿನಿ ಬ್ರ್ಯಾಂಡ್‌ಗೆ ಒಂದು ರೂಪಾಯಿ ಪಡೆಯದೇ ಜಾಹೀರಾತು ಮಾಡಿಕೊಟ್ಟಿದ್ದಾರೆ. ಅಂತಾ ರಾಷ್ಟ್ರೀಯ ಮಟ್ಟದಲ್ಲೂ ಅದು ಖ್ಯಾತಿಯಾಗಿತ್ತು. ಇತ್ತೀಚೆಗೆ ಡಾಲಿ ಧನಂಜಯ್ ಅವರೂ ಒಂದು ರೂಪಾಯಿ ಪಡೆಯದೇ ಜಾಹೀರಾತು ಮಾಡಿದ್ದರು. ಮೈಸೂರು ಸ್ಯಾಂಡಲ್ ನಮ್ಮ ರಾಜ್ಯದ್ದು, ನಮ್ಮ ರಾಜ್ಯದ ಕಲಾವಿದೆಯರಿಗೆ ಒಂದು ಅವಕಾಶ ಕೊಡಲಿ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತದ್ದಾಗಲಿ, ಉಚಿತವಾಗಿ ಮಾಡುವವರು ನಮ್ಮಲ್ಲಿದ್ದಾರೆ. ಈ ಹಣದಿಂದ ರಾಜ್ಯಕ್ಕೆ, ರಾಜ್ಯದ ಜನರಿಗೆ ಸಹಾಯ ಮಾಡಬಹುದಲ್ಲವೇ

– ತಾರಾ, ಹಿರಿಯ ನಟಿ



ತಮನ್ನಾ ಅವರಿಗೆ ಅಷ್ಟು ದೊಡ್ಡ ಮೊತ್ತ ಕೊಟ್ಟು ರಾಯಭಾರತ್ವ ಮಾಡುವ ಅಗತ್ಯ ಏನಿದೆಯೇ? ಕನ್ನಡಿಗರ ತೆರಿಗೆ ಹಣವನ್ನು ಈ ರೀತಿಯಾಗಿ ವ್ಯಯ ಮಾಡುವುದು ಸರಿಯಲ್ಲ. ನಮ್ಮಲ್ಲಿಯೂ ಅನೇಕ ಪ್ರತಿಭಾವಂತ ನಟ– ನಟಿಯರಿದ್ದಾರೆ. ಕೆಎಸ್‌ಡಿಎಲ್ ಸಂಸ್ಥೆಯ ರಾಯಭಾರತ್ವಕ್ಕಾಗಿ ಕನ್ನಡದ ಕಲಾವಿದರಿಗೇ ಅವಕಾಶ ಕಲ್ಪಿಸಬೇಕು. ಆ ಮೂಲಕ ಕನ್ನಡ ಕಲಾವಿದರನ್ನು ಪ್ರೋತ್ಸಾಹಿಸಬೇಕು. ಕನ್ನಡ ನಟಿಯರನ್ನು ಪರಿಗಣಿಸದೇ ಬಾಲಿವುಡ್ ನಟಿಯನ್ನು ಪರಿಗಣಿಸಿರುವುದು ನಿಜಕ್ಕೂ ಕನ್ನಡಿಗರ ಭಾವನೆಗಳಿಗೆ ಧಕ್ಕೆ ತರುವಂಥ ವಿಚಾರವಾಗಿದೆ.

– ನಾರಾಯಣ ಗೌಡ, ಕರವೇ ಅಧ್ಯಕ್ಷ

94 ಹೊರ ಗುತ್ತಿಗೆ ನೌಕರರ ವಜಾ; 66 ಖಾಯಂ ನೌಕರರಿಗೆ ಕಾರ್ಯದೊತ್ತಡ

ಮುಡಾ ಕೆಲಸ ಕಾರ್ಯ ಕುಂಠಿತ; ಸಾರ್ವಜನಿಕರ ಪರದಾಟ

ಸರ್ಕಾರದ ಆದೇಶ ಧಿಕ್ಕರಿಸಿ ಅಧಿಕಾರಿಗಳೇ ಕೈಯಿಂದ ಹಣ ನೀಡಿ ವಜಾ ಆದ ನೌಕರರ ಸೇವೆಗೆ ಮೊರೆ!

ಮೈಸೂರು, ಮೇ 22(ಆರ್‌ಕೆ)–ಹೊರ ಗುತ್ತಿಗೆ ನೌಕರರ ವಜಾಗೊಳಿಸಿದ ನಂತರ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದಲ್ಲಿ ದೈನಂದಿನ ಕೆಲಸ–ಕಾರ್ಯಗಳು ಕುಂಠಿತವಾಗಿವೆ.

ಈಗ 66 ಮಂದಿ ಖಾಯಂ ಸಿಬ್ಬಂದಿ ತಮ್ಮ ಕಚೇರಿ ಕೆಲಸಕ್ಕೆ ಪೂರಕ ಸಿಬ್ಬಂದಿ ಇಲ್ಲದೇ ಸಾರ್ವಜನಿಕರಿಂದ ವಿವಿಧ ಸೇವೆ ಕೋರಿ ಬರುತ್ತಿರುವ ಅರ್ಜಿಗಳ ವಿಲೇವಾರಿ ಮಾಡಲು ಪರದಾಡುವಂತಾಗಿದೆ. 'ಡಿ' ಗ್ರೂಪ್ ನೌಕರರು, ಕಚೇರಿ ಪರಿಚಾರಕರು, ವಾಹನ ಚಾಲಕರು, ಡೇಟಾ ಎಂಟ್ರಿ ಆಪರೇಟರ್‌ಗಳು, ಎಲೆಕ್ಟ್ರಿಷಿಯನ್‌ಗಳು, ಗಾರ್ಡ್‌ನರ್‌ಗಳು ಹೊರ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದರು.

ಕಡತ ವಿಲೇ ಮಾಡಿ ಸಿಸ್ಟಂನಲ್ಲಿ ನೋಟ್ ನಮೂದಿಸಿ ಕಚೇರಿ ವ್ಯವಸ್ಥಾಪಕರು ಮತ್ತು ಉನ್ನತ ಅಧಿಕಾರಿಗಳ ಅನುಮೋದನೆಗೆ ಮಂಡಿಸಿ ಸಾರ್ವಜನಿಕರ ಅರ್ಜಿ ವಿಲೇವಾರಿಯಲ್ಲಿ ಹೊರ ಗುತ್ತಿಗೆ ನೌಕರರ ಅಧಿಕ ಸಂಖ್ಯೆಯಲ್ಲಿ ತೊಡಗಿಸಿಕೊಂಡಿದ್ದರು. ಈಗ ಏಕಾಏಕಿ 94 ಮಂದಿಯ ಸೇವೆಯಿಂದ ವಜಾ ಮಾಡಿರುವುದರಿಂದ ದಿನನಿತ್ಯದ ಕೆಲಸ ಕಾರ್ಯಗಳಿಗೆ ತೊಂದರೆಯಾಗಿದೆ.



ಕಚೇರಿ ತೆರೆದು ಸ್ವಚ್ಛಗೊಳಿಸುವ, ಕಡತಗಳನ್ನು ಸಂಬಂಧಪಟ್ಟ ಶಾಖೆಗಳಿಗೆ ತಲುಪಿಸಿ ಸ್ವೀಕೃತಿ ತರುವ 'ಡಿ' ಗ್ರೂಪ್ ನೌಕರರಿಲ್ಲದ ಕಾರಣ ಕೆಲ ವಲಯ ಕಚೇರಿ, ಶಾಖೆಗಳಲ್ಲಿ ಅಧಿಕಾರಿಗಳೇನಾದರೂ ಹೊರಗೆ ಪರಿಶೀಲನೆ ಅಥವಾ ಇನ್ನಿತರ ಕೆಲಸಗಳಿಗೆ ಹೋಗಿದ್ದರೆ ಅಂತಹ ಕಚೇರಿಗಳ ಬಾಗಿಲನ್ನು ಅಧಿಕಾರಿ ಬರುವವರೆಗೆ ಮಧ್ಯಾಹ್ನವಾದರೂ ತೆರೆಯುತ್ತಿಲ್ಲ.

ಸೇವೆ ಬಯಸಿ ಅರ್ಜಿ ಸಲ್ಲಿಸಿರುವ ಸಾರ್ವಜನಿಕರು ಮುಚ್ಚಿದ ಬಾಗಿಲ ಬಳಿ ಕಾದು ನಿಂತುಕೊಳ್ಳುವ ಸ್ಥಿತಿ ಬಂದಿದೆ. ಹೊರ ಗುತ್ತಿಗೆ ನೌಕರರಿಲ್ಲದ ಕಾರಣ ಇಡೀ ಮುಡಾ ಕಚೇರಿ ಬಿಕೋ ಎನ್ನುತ್ತಿದೆ. ಹೊರ ಗುತ್ತಿಗೆ ನೌಕರರಲ್ಲಿ ಕೆಲವರು ಮುಡಾ ಅಕ್ರಮದಲ್ಲಿ ಭಾಗಿಯಾಗಿದ್ದನ್ನು ಸ್ಮರಿಸಬಹುದು.

ಅಧ್ಯಕ್ಷರ ಕಚೇರಿ, ಕಮಿಷ್ನರ್, ಕಾರ್ಯದರ್ಶಿ, ಸೂಪರಿಂಟೆಂಡಿಂಗ್ ಇಂಜಿನಿಯರ್, ಟಿಪಿಎಂ, ವಿಶೇಷ ಭೂಸ್ವಾಧೀನಾಧಿಕಾರಿ, ಮುಖ್ಯ ಲೆಕ್ಕಾಧಿಕಾರಿ ಕಚೇರಿಗಳು, ಇಬ್ಬರು ಎಕ್ಸಿಕ್ಯೂಟಿವ್ ಇಂಜಿನಿಯರ್, 10 ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು, ಮೂವರು ಎಡಿಪಿಗಳು, ಓರ್ವ ಲೆಕ್ಕಾಧಿಕಾರಿ, ಇಬ್ಬರು ವಿಶೇಷ ತಹಶೀಲ್ದಾರರುಗಳ ಕಚೇರಿಗಳಲ್ಲಿ ಅಧಿಕಾರಿಗಳ ಹೊರತುಪಡಿಸಿದರೆ ಒಬ್ಬರು ಅಥವಾ ಇಬ್ಬರು ಸಿಬ್ಬಂದಿ ಮಾತ್ರ ಉಳಿದಿದ್ದು, ಕೆಲಸದ ಒತ್ತಡದಿಂದಾಗಿ ಅವರೂ ಸಹ ಆಗಿಂದಾಗ್ಗೆ ರಜಾ ಹಾಕುತ್ತಿದ್ದಾರೆ.

ಉಳಿದಂತೆ ಎಸ್ಟಾಬ್ಲಿಷ್‌ಮೆಂಟ್, ಹರಾಜು, ಶಾಖೆ, ಅಭಿಲೇಖಾಲಯ (ರೆಕಾರ್ಡ್ ರೂಂ), ನಿವೇಶನ, ಸಿಎ ನಿವೇಶನ, ಸ್ಪಂದನಾ, ಡ್ರಾಯಿಂಗ್ ಶಾಖೆಗಳಲ್ಲಂತೂ ಸಿಬ್ಬಂದಿಗಳಿಲ್ಲದೇ ಬಿಕೋ ಎನ್ನುತ್ತಿವೆ. ಕೆಲವು ಶಾಖಾ ಕಚೇರಿಗಳಲ್ಲಿ ಅಧಿಕಾರಿಗಳೇ ತಮ್ಮ ಜೇಬಿನಿಂದ ಹಣ ನೀಡಿ, ಈ ಹಿಂದೆ ಸೇವೆ ಸಲ್ಲಿಸುತ್ತಿದ್ದ ಹೊರ ಗುತ್ತಿಗೆ ನೌಕರರಿಂದ ಟೈಪಿಂಗ್, ದಾಖಲೆ ವಿಲೇವಾರಿಯಂತಹ ಕೆಲಸವನ್ನು ಮಾಡಿಸಿಕೊಳ್ಳುತ್ತಿರುವುದೂ ಕಂಡು ಬರುತ್ತಿದೆ. ಆದರೆ ಇದು ಕಾನೂನುಬಾಹಿರ. ಸರ್ಕಾರದ ಆದೇಶ ಧಿಕ್ಕರಿಸಿ ಹೀಗೆ ನಡೆಯುತ್ತಿದ್ದರೂ ಮೇಲಾಧಿಕಾರಿಗಳು ಮೌನ ವಹಿಸಿರುವುದು ಅಚ್ಚರಿಗೆ ಕಾರಣವಾಗಿದೆ.

ನಿವೇಶನಗಳಿಗೆ ಸಂಬಂಧಿಸಿದಂತೆ ಗುತ್ತಿಗೆ ಕರಾರು ಪತ್ರ (Lease cum Sale Deed), ಕ್ರಯಪತ್ರ (Title Deed), ನಿವೇಶನಗಳನ್ನು ಗುರ್ತಿಸಿ ಕೊಡುವುದು, ದಾಖಲೆಗಳ ನೈಜತೆ ಪರಿಶೀಲಿಸಿ ಖಾತರಿಪಡಿಸುವುದು, ಮಾಹಿತಿ ಹಕ್ಕು ಅಧಿನಿಯಮದಡಿ ಅರ್ಜಿ ಸಲ್ಲಿಸಿದವರಿಗೆ ಮಾಹಿತಿ ನೀಡುವುದು, ಸಾರ್ವಜನಿಕರಿಂದ ಬರುವ ದೂರು ಪರಿಶೀಲಿಸಿ ಇತ್ಯರ್ಥಗೊಳಿಸುವುದು, ಏಕ ಸದಸ್ಯ ಆಯೋಗ ನಡೆಸುತ್ತಿರುವ ತನಿಖೆಗೆ ಅಗತ್ಯ ದೃಢೀಕೃತ ದಾಖಲೆ ಪೂರೈಸುವುದೂ ಸೇರಿದಂತೆ ಇನ್ನಿತರ ನಿತ್ಯದ ಕೆಲಸ ಕಾರ್ಯಗಳನ್ನು ಈಗ ಅಧಿಕಾರಿಗಳೇ ನಿರ್ವಹಿಸಬೇಕಾದ ಅನಿವಾರ್ಯತೆ ಎದುರಾಗಿದೆ.

ಆರ್ಥಿಕ ಇಲಾಖೆಯಿಂದ ಅನುಮತಿ ಪಡೆದು ಹೊರ ಗುತ್ತಿಗೆ ಆಧಾರದಲ್ಲಿ ನೌಕರರನ್ನು ನೇಮಿಸಿಕೊಳ್ಳಬೇಕೆಂದು ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳು ಕಟ್ಟಾಜ್ಞೆ ಮಾಡಿದ್ದರಿಂದ 94 ಮಂದಿ ಹೊರ ಗುತ್ತಿಗೆದಾರರನ್ನು ಮೇ ಮೊದಲ ವಾರ ವಜಾಗೊಳಿಸಿದ್ದನ್ನು ಇಲ್ಲಿ ಸ್ಮರಿಸಬಹುದಾಗಿದೆ.

ಮದರ್‌ಹುಡ್ ಆಸ್ಪತ್ರೆಯಲ್ಲಿ 'ಮಹಾರಾಣಿ ಸೂಟ್'; ರಾಜವಂಶಸ್ಥೆ ತ್ರಿಷಿಕಾ ಕುಮಾರಿ ಉದ್ಘಾಟನೆ

ಮೈಸೂರು, ಮೇ 22(ಎಂಟಿವೈ)– ಮೈಸೂರಿನ ಯಾದವಗಿರಿಯಲ್ಲಿರುವ ಮದರ್‌ಹುಡ್ ಆಸ್ಪತ್ರೆಯಲ್ಲಿ ವಿಶೇಷವಾಗಿ ವಿನ್ಯಾಸಗೊಳಿಸಲಾಗಿರುವ 'ಮಹಾರಾಣಿ ಸೂಟ್' ವಾರ್ಡ್ ಅನ್ನು ರಾಜವಂಶಸ್ಥರಾದ ತ್ರಿಷಿಕಾ ಕುಮಾರಿ ಒಡೆಯರ್ ಇಂದು ಉದ್ಘಾಟಿಸಿದರು.

ಅತ್ಯಾಧುನಿಕ ಸೌಲಭ್ಯ ವಿಶೇಷವಾಗಿ ಒಳಗೊಂಡ ಮದರ್‌ಹುಡ್ ಆಸ್ಪತ್ರೆಯಲ್ಲಿ ಹೆರಿಗೆಗಾಗಿ ಬರುವ ಗರ್ಭಿಣಿಯರಿಗೆ ವಿಶೇಷ ಸೌಕರ್ಯದೊಂದಿಗೆ ನಿಗಾವಹಿಸಲಾಗುತ್ತಿದೆ. ಈಗ ಅತ್ಯಾಧುನಿಕ ಸೌಕರ್ಯವುಳ್ಳ 'ಮಹಾರಾಣಿ ಸೂಟ್' ವಾರ್ಡ್ ವ್ಯವಸ್ಥೆ ಮಾಡಲಾಗಿದ್ದು, ವಿವಿಧ ಪ್ಯಾಕೇಜ್‌ನಡಿ ಹೆರಿಗೆಗಾಗಿ ಆಸ್ಪತ್ರೆಗೆ ದಾಖಲಾದ ಗರ್ಭಿಣಿಯರಿಗೆ ಆರೋಗ್ಯ ಸೌಲಭ್ಯದೊಂದಿಗೆ ಸುರಕ್ಷಿತ ಹೆರಿಗೆ ಕ್ಷಣ ಹಾಗೂ ನವಜಾತ ಶಿಶುವಿನೊಂದಿಗೆ ಸಂಭ್ರಮಿಸಲು ಈ ಹೊಸ ವಾರ್ಡ್ ಪೂರಕ ಸನ್ನಿವೇಶ ಒಳಗೊಂಡಿದೆ.

ನೂತನ ವಾರ್ಡ್ ಉದ್ಘಾಟಿಸಿದ ತ್ರಿಷಿಕಾ ಕುಮಾರಿ ಒಡೆಯರ್ ಮಾತನಾಡಿ, ನನ್ನ ಎರಡನೇ ಮಗ ಮದರ್‌ಹುಡ್ ಆಸ್ಪತ್ರೆಯಲ್ಲಿಯೇ ಜನಿಸಿರುವುದರಿಂದ ಈ ಸ್ಥಳ ನನಗೆ ವಿಶೇಷ ಎನಿಸಿದೆ. ಈ ಆಸ್ಪತ್ರೆಯ ಲೇಬರ್ ರೂಂ, ವಾರ್ಡ್ ಉತ್ತಮವಾಗಿದ್ದು, ಇಲ್ಲಿನ ವೈದ್ಯರು, ಇತರೆ ಆರೋಗ್ಯ ಸಿಬ್ಬಂದಿ ರೋಗಿಗಳ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುತ್ತಾರೆ. ವೈದ್ಯರ ಶುಶ್ರೂಷೆ ಉತ್ತಮವಾಗಿದ್ದು, ಅದರ ಅನುಭವ ಮದರ್‌ಹುಡ್ ಆಸ್ಪತ್ರೆಯಲ್ಲಿ ನನಗೆ ಆಗಿದೆ. ಈ ಆಸ್ಪತ್ರೆಯ ಸೌಲಭ್ಯ ಬುಡಕಟ್ಟು ಸಮುದಾಯಗಳಿಗೂ ತಲುಪುವಂತಾಗಬೇಕು ಎಂದು ಸಲಹೆ ನೀಡಿದರು.



ಮೈಸೂರಿನ ಯಾದವಗಿರಿಯಲ್ಲಿರುವ ಮದರ್‌ಹುಡ್ ಆಸ್ಪತ್ರೆಯಲ್ಲಿ ವಿಶೇಷವಾಗಿ ವಿನ್ಯಾಸಗೊಳಿಸಲಾದ 'ಮಹಾರಾಣಿ ಸೂಟ್' ವಾರ್ಡ್ ಅನ್ನು ರಾಜವಂಶಸ್ಥರಾದ ತ್ರಿಷಿಕಾ ಕುಮಾರಿ ಒಡೆಯರ್ ಉದ್ಘಾಟಿಸಿದರು.

ಆಸ್ಪತ್ರೆಯ ಸಿಇಓ ವಿಜಯರತ್ನ ವೆಂಕಟರಾಮನ್ ಮಾತನಾಡಿ, ದೇಶದಾದ್ಯಂತ 25 ಮದರ್‌ಹುಡ್ ಆಸ್ಪತ್ರೆಗಳಿವೆ. ಆದರೆ, ಮೈಸೂರಿನ ಆಸ್ಪತ್ರೆ ವಿಶೇಷತೆಯಿಂದ ಕೂಡಿದೆ. ನೂತನ ತಂತ್ರಜ್ಞಾನ ಬಳಸಿಕೊಂಡು ಚಿಕಿತ್ಸಾ ಸೌಲಭ್ಯ ಒದಗಿಸಲಾಗುತ್ತಿದೆ. ಮಹಾರಾಣಿ ಸೂಟ್ ವಾರ್ಡ್‌ನಲ್ಲಿ ತಾಯಿ–ಮಗುವಿನ ಫೋಟೋಗೆ ಫ್ರೇಮ್ ರೂಪಿಸಿ ಸಂತಸದ ಕ್ಷಣ ಖಾತರಿಪಡಿಸಲಾಗುವುದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮದರ್‌ಹುಡ್ ಆಸ್ಪತ್ರೆಯ ಸೌಲಭ್ಯ ನಿರ್ದೇಶಕ ಸಂದೀಪ್ ಪಟೇಲ್ ಬಿ.ಜೆ., ತಜ್ಞವೈದ್ಯರಾದ ಡಾ.ಮಧುರ ಪಾಠಕ್, ಡಾ. ಶ್ವೇತಾ ನಾಯಕ್, ಡಾ. ಸೋನಿಯಾ ಮಂದಪ್ಪ, ಡಾ.ಅನಿತಾ ಆದರ್ಶ್, ಡಾ.ನೂರ್ ಫಾತಿಮಾ ಅಕ್ರಮ್, ಡಾ.ಶೃತಿ ಬಿ.ಎಸ್., ಡಾ. ಇಸ್ಮೈಲ್ ಖಾನ್, ಡಾ.ಚೇತನ್ ಬಿ., ಡಾ. ಸುಹೇಮ್ ಅಫ್ಸರ್, ಡಾ. ರಘುವೀರ್ ಸುಹಾಸ್, ಡಾ. ಅವೀನ್ ಇನ್ನಿತರರು ಉಪಸ್ಥಿತರಿದ್ದರು. ಇದೇ ವೇಳೆ ಮದರ್‌ಹುಡ್ ಒನ್ ಕೇರ್ ಆ್ಯಪ್‌ಗೆ ಚಾಲನೆ ನೀಡಲಾಯಿತು.

ಕೊಲೆಯಾಗುವ ಮುನ್ನ ಮೈಸೂರಲ್ಲಿ ಒಂಟಿಯಾಗಿ ಓಡಾಡಿರುವ ಲತಾ!

ಕೊಲೆಯಾದ ಯುವತಿಯ ವಿಚಾರದಲ್ಲಿ ತಲೆಕೆಡಿಸಿಕೊಂಡಿರುವ ಪೊಲೀಸರು


ಮೈಸೂರು, ಮೇ 22(ಆರ್‌ಕೆ)– ಮೈಸೂರಿನ ಬನ್ನೂರು ರಸ್ತೆಯ ಖಾಸಗಿ ಬಡಾವಣೆಯೊಂದರಲ್ಲಿ ಕೊಲೆಯಾದ ಸ್ಥಿತಿಯಲ್ಲಿ ಪತ್ತೆಯಾದ ಲತಾ ಸಾವು ತನಿಖಾಧಿಕಾರಿಗಳಿಗೇ ಸವಾಲಾಗಿ ಪರಿಣಮಿಸಿದೆ. ಕುತ್ತಿಗೆಯಲ್ಲಿ ವೇಲ್‌ನಿಂದ ಬಿಗಿದ ಸ್ಥಿತಿಯಲ್ಲಿದ್ದ ಲತಾಳ ಮೃತದೇಹದ ಎರಡು ಕಾಲಿನಲ್ಲೂ ಚಪ್ಪಲಿ ಧರಿಸಿದಂತೆಯೇ ಇದ್ದು ದೇಹದಲ್ಲಿ ಯಾವುದೇ ಗಾಯದ ಗುರುತುಗಳಿಲ್ಲದಿದ್ದರಿಂದ ದುಷ್ಕರ್ಮಿಗಳು ಬೇರೆಡೆ ಆಕೆಯನ್ನು ವೇಲ್‌ನಿಂದ ಕುತ್ತಿಗೆ ಬಿಗಿದು ಕೊಲೆ ಮಾಡಿ ಮೃತದೇಹ ತಂದು ಹಾಕಿರಬಹುದೆಂದು ಮಹಜರು ನಡೆಸಿದ ಪೊಲೀಸರು ಶಂಕಿಸಿದ್ದರು.

ತನಿಖೆ ಕೈಗೊಂಡು ಬುಧವಾರ ಮೈಸೂರು ನಗರದ ರಸ್ತೆ, ಸರ್ಕಲ್‌ಗಳ ಸಿಸಿ ಕ್ಯಾಮರಾ ಫುಟೇಜ್‌ಗಳನ್ನು ವೀಕ್ಷಿಸಿದಾಗ ಚೂಡಿದಾರ, ವೇಲ್ ಧರಿಸಿದ್ದ ಲತಾ, ಕೆ.ಆರ್.ಆಸ್ಪತ್ರೆ, ಇರ್ವಿನ್ ರಸ್ತೆ, ಬಿ.ಎನ್. ರಸ್ತೆ ಸೇರಿದಂತೆ ಮೈಸೂರು ನಗರದಾದ್ಯಂತ ಮಂಗಳವಾರ ರಾತ್ರಿಯಿಡೀ ಒಬ್ಬಳೇ ನಡೆದುಕೊಂಡು ಓಡಾಡಿ, ನಂತರ ಆಕೆಯ ಮೃತದೇಹ ದೊರೆತ ಬನ್ನೂರು ರಸ್ತೆಯತ್ತ ಹೋಗಿರುವುದು ಕಂಡುಬಂದಿದೆ.

ಅಂದು ರಾತ್ರಿ ಲತಾಳೊಂದಿಗೆ ಯಾರೂ ಇರಲಿಲ್ಲ, ದೇಹದ ಮೇಲೆ ಯಾವುದೇ ತರಚಿದ ಗಾಯವಾಗಲೀ, ರಕ್ತದ ಗಾಯವಾಗಲೀ ಇರಲಿಲ್ಲ. ಹಾಗಾದರೆ ಆಕೆಯನ್ನು ಕೊಲೆ ಮಾಡಿದವರ್‍ಯಾರು? ಈ ಪ್ರಶ್ನೆ ತನಿಖಾಧಿಕಾರಿಗಳನ್ನು ಕಾಡುತ್ತಿರುವುದಲ್ಲದೇ, ಲತಾ ಸಾವಿನ ಸುತ್ತ ಅನುಮಾನದ ಹುತ್ತವೇ ಬೆಳೆಯುತ್ತಿದೆ. ಬೇರೆ ಬೇರೆ ಆಯಾಮಗಳಲ್ಲಿ ತಮಗೆ ದೊರೆತ ಸುಳಿವಿನ ಜಾಡು ಹಿಡಿದು ತನಿಖೆ ನಡೆಸುತ್ತಿರುವ ಪೊಲೀಸರಿಗೆ ಆಕೆ ಸಾವಿಗೆ ಕಾರಣ ಏನು ಎಂಬುದರ ಬಗ್ಗೆ ನಿಖರ ಮಾಹಿತಿ ದೊರೆತಿಲ್ಲ.

ಸಹನಟಿ ಮೇಲೆ ಅತ್ಯಾಚಾರ ಆರೋಪ: ಕಿರುತೆರೆ ನಟ ಮಡೆನೂರು ಮನು ಬಂಧನ

ಬೆಂಗಳೂರು, ಮೇ 22– ಸಹನಟಿಯೊಬ್ಬರ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಕಿರುತೆರೆ ನಟ ಮಡೆನೂರು ಮನು ಅವರನ್ನು ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಗುರುವಾರ ಸಂಜೆ ಬಂಧಿಸಿದ್ದಾರೆ. 33 ವರ್ಷದ ಸಹನಟಿ ನೀಡಿದ ದೂರಿನ ಮೇರೆಗೆ ನಟನ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 351(2), 352, 69, 89, 64(2)ರ ಅಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.



ಮನು

'ಕುಲದಲ್ಲಿ ಕೀಳ್ಯಾವುದೋ' ಚಿತ್ರದಲ್ಲಿ ಮಡೆನೂರು ಮನು ನಾಯಕನಾಗಿ ನಟಿಸಿದ್ದಾರೆ. ಈ ಚಿತ್ರವು ಶುಕ್ರವಾರ ಬಿಡುಗಡೆ ಆಗುತ್ತಿದೆ. ಕಿರುತೆರೆಯಲ್ಲಿ ಪ್ರಸಾರ ಆಗುತ್ತಿರುವ ಕಾಮಿಡಿ ಕಿಲಾಡಿ ಕಾರ್ಯಕ್ರಮದಲ್ಲೂ ಮನು ಅಭಿನಯಿಸಿದ್ದರು.

ದೂರಿನಲ್ಲಿ ಏನಿದೆ?: ಬೆಂಗಳೂರಿನ ಬಡಾವಣೆಯೊಂದರಲ್ಲಿ ಕಳೆದ ಐದು ವರ್ಷಗಳಿಂದ ವಾಸವಿದ್ದೇನೆ. ಮಡೆನೂರು ಮನು ಅವರೇ ಬಾಡಿಗೆ ಮನೆ ಮಾಡಿಕೊಟ್ಟಿದ್ದರು. ಕಿರುತೆರೆ ವಾಹಿನಿಯೊಂದರಲ್ಲಿ 2018ರಲ್ಲಿ ಪ್ರಸಾರವಾಗಿದ್ದ ಕಾಮಿಡಿ ಕಿಲಾಡಿಗಳು ಕಾರ್ಯಕ್ರಮದಲ್ಲಿ ಮನು ಅವರ ಪರಿಚಯವಾಗಿತ್ತು ಇಬ್ಬರೂ ಸ್ನೇಹಿತರಾಗಿದ್ದೆವು. ಮನು ಅವರಿಗೆ ಮದುವೆ ಆಗಿ ಹೆಣ್ಣು ಮಗು ಇದೆ. 2022ರ ನವೆಂಬರ್ 29ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ನಡೆದಿದ್ದ ಕಾರ್ಯಕ್ರಮಕ್ಕೆ ಕರೆದೊಯ್ದು ಹಾಸ್ಯ ಕಾರ್ಯಕ್ರಮ ನಡೆಸಿದ್ದರು. ಕಾರ್ಯಕ್ರಮ ಮುಕ್ತಾಯವಾದ ಮೇಲೆ ಹೋಟೆಲ್‌ನ ರೂಂನಲ್ಲಿದ್ದಾಗ ನನಗೆ ಸಂಭಾವನೆ ಕೊಡುವ ನೆಪದಲ್ಲಿ ಬಂದು ಅತ್ಯಾಚಾರ ಎಸಗಿದ್ದಾನೆ ಎಂದು ಸಂತ್ರಸ್ತೆ ನೀಡಿರುವ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ದಾಖಲಿಸಲಾಗಿದೆ.

ಅದೇ ವರ್ಷದ ಡಿಸೆಂಬರ್ 3ರಂದು ನನ್ನ ಮನೆಗೆ ಬಂದು ವಿರೋಧದ ನಡುವೆ ತಾಳಿ ಕಟ್ಟಿದ್ದಾನೆ. ನಂತರ, ಅದೇ ಮನೆಯಲ್ಲಿ ಮನು ಹಲವು ಬಾರಿ ಅತ್ಯಾಚಾರ ಮಾಡಿದ್ದಾನೆ. ನಾನು ಗರ್ಭಿಣಿಯಾಗಿದ್ದ ವಿಷಯ ತಿಳಿದು ಗರ್ಭಪಾತ ಮಾಡಿಸಿದ್ದ ಎಂದು ದೂರಿನಲ್ಲಿ ವಿವರಿಸಲಾಗಿದೆ.

ಮನು ಸಿನಿಮಾವೊಂದರಲ್ಲಿ ನಾಯಕನಾಗಿ ನಟಿಸಿದ್ದು, ಈ ಚಿತ್ರಕ್ಕೆ ಲಕ್ಷಾಂತರ ರೂಪಾಯಿ ನೀಡಿದ್ದೇನೆ. ಅತ್ಯಾಚಾರ ನಡೆಸಿ, ಮದುವೆಯಾದಂತೆ ನಾಟಕವಾಡಿ, ಮೋಸ ಮಾಡಿರುವ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಹ ನಟಿ ದೂರಿನಲ್ಲಿ ಒತ್ತಾಯಿಸಿದ್ದಾರೆ.


ರೇರಾ ಅಧ್ಯಕ್ಷರಿಗೆ ನರೆಡ್ಕೊದಿಂದ ಹುಟ್ಟುಹಬ್ಬದ ಶುಭಾಶಯ...



ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ (ರೇರಾ) ಅಧ್ಯಕ್ಷರೂ ಆದ ನಿವೃತ್ತ ಐಎಎಸ್ ಅಧಿಕಾರಿ ರಾಕೇಶ್ ಸಿಂಗ್ ಅವರಿಗೆ ನರೆಡ್ಕೊ ವತಿಯಿಂದ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ರಿಯಲ್ ಎಸ್ಟೇಟ್ ಸಮುದಾಯದ ಪರವಾಗಿ ಅವರಿಗೆ ನರೆಡ್ಕೊ ಕರ್ನಾಟಕ ಉಪಾಧ್ಯಕ್ಷ ಮನೋಜ್ ಲೋಧಾ, ಮೈಸೂರು ಘಟಕದ ಖಜಾಂಚಿ ಎ.ಪಿ. ನಾಗೇಶ್ ಶುಭ ಕೋರಿದರಲ್ಲದೆ, ರೇರಾ ನೋಂದಣಿ ಸರಳೀಕರಣಗೊಳಿಸುವುದು ಸೇರಿದಂತೆ ವಿವಿಧ ಅಂಶಗಳ ಬಗ್ಗೆ ಅವರೊಂದಿಗೆ ಚರ್ಚೆ ನಡೆಸಿದರು.

ನಾಗರಹೊಳೆ ರಾಷ್ಟ್ರೀಯ ಅಭಯಾರಣ್ಯದಲ್ಲಿ ಸಫಾರಿಗೆ ಹೋದವರಿಗೆ

ಅಪಾರ ವನ್ಯಜೀವಿಗಳ ಸ್ವಚ್ಛಂದ ವಿಹಾರ ದರ್ಶನ



ಮರದಲ್ಲಿ ವಿಶ್ರಾಂತಿ ಪಡೆಯುತ್ತಿರುವ ಚಿರತೆ.





ಕಾಕನಕೋಟೆ ಕೇಂದ್ರದಿಂದ ಸಫಾರಿಗೆ ತೆರಳಿದ್ದ ಪ್ರವಾಸಿಗರು ಕಬಿನಿ ಹಿನ್ನೀರಿನ ಬಳಿ ಆನೆ ಹಾಗೂ ಜಿಂಕೆ ಹಿಂಡು ಕಂಡು ರೋಮಾಂಚನಗೊಂಡರು. ಮತ್ತೊಂದು ಚಿತ್ರದಲ್ಲಿ ಗರಿ ಬಿಚ್ಚಿ ನರ್ತಿಸಿದ ನವಿಲನ್ನು ಕಾಣಬಹುದು. ಚಿತ್ರಗಳು: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್

ಮೈಸೂರು, ಮೇ 22(ಎಂಟಿವೈ)– ಮುಂಗಾರು ಪೂರ್ವ ಉತ್ತಮ ಮಳೆಯಿಂದಾಗಿ ಹಚ್ಚಹಸಿರಿನಿಂದ ಕಂಗೊಳಿಸುತ್ತಿರುವ ನಾಗರಹೊಳೆ ಹುಲಿ ಸಂರಕ್ಷಿತ ಅರಣ್ಯ ಪ್ರದೇಶದಲ್ಲಿ ಹುಲಿ, ಆನೆ ಇನ್ನಿತರ ವನ್ಯಜೀವಿಗಳು ಸ್ವಚ್ಛಂದವಾಗಿ ವಿಹರಿಸುತ್ತಿದ್ದು, ಸಫಾರಿಗೆ ತೆರಳುವ ಪ್ರವಾಸಿಗರಿಗೆ ಮುದ ನೀಡುತ್ತಿವೆ.

ಮೈಸೂರು ಹಾಗೂ ಕೊಡಗು ಜಿಲ್ಲಾ ವ್ಯಾಪ್ತಿಗೆ ಸೇರಿರುವ ನಾಗರಹೊಳೆ ಅಭಯಾರಣ್ಯವು ಕೇರಳ ಗಡಿ ಭಾಗಕ್ಕೆ ಹೊಂದಿಕೊಂಡಿದೆ. ಕೇರಳದಲ್ಲಿ ಅಲ್ಪ ಪ್ರಮಾಣದ ಮಳೆಯಾದರೂ ನಾಗರಹೊಳೆ ವಾತಾವರಣವೇ ಬದಲಾಗುತ್ತದೆ. ಅದರಲ್ಲೂ ಈ ಬಾರಿ ಎರಡೂ ರಾಜ್ಯಗಳಲ್ಲಿ ಮುಂಗಾರು ಪೂರ್ವ ಮಳೆ ಉತ್ತಮವಾಗಿರುವುದರಿಂದ, ಬಿರುಬೇಸಿಗೆಯಲ್ಲಿ ಬಳಲಿದ್ದ ಗಿಡ–ಮರಗಳು ನವ ಚೈತನ್ಯದಿಂದ ಕಂಗೊಳಿಸುತ್ತಿವೆ. ಇಲ್ಲಿನ ಎಲ್ಲಾ ಪ್ರಾಣಿಗಳೂ ತಂಪಾದ ವಾತಾವರಣದಲ್ಲಿ ನವೋಲ್ಲಾಸದಿಂದ ವಿಹರಿಸುತ್ತಿವೆ.

ಸಫಾರಿಗೆ ಭಾರಿ ಬೇಡಿಕೆ: ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹೆಚ್.ಡಿ.ಕೋಟೆ ತಾಲೂಕು ಅಂತರಸಂತೆ ವಲಯದ ಕಾಕನಕೋಟೆ ಸಫಾರಿ ಕೇಂದ್ರ ಹುಣಸೂರು ತಾಲೂಕಿನ ವೀರನಹೊಸಳ್ಳಿ ಸಫಾರಿ ಕೇಂದ್ರ ಹಾಗೂ ಕೊಡಗಿನ ಕುಟ್ಟ ಸಮೀಪದ ನಾಣಚ್ಚಿ ಸಫಾರಿ ಕೇಂದ್ರಗಳಿದ್ದು, ಪ್ರತಿದಿನ ಸಾವಿರಾರು ಪ್ರವಾಸಿಗರು ಸಫಾರಿ ನಡೆಸುತ್ತಿದ್ದಾರೆ. ಪ್ರತಿದಿನ ಬೆಳಗ್ಗೆ ಮತ್ತು ಮಧ್ಯಾಹ್ನ ಅರಣ್ಯದೊಳಗೆ ಸಫಾರಿಗೆ ಕರೆದೊಯ್ಯಲಾಗುತ್ತದೆ. ಮೂರು ಕೇಂದ್ರಗಳಲ್ಲೂ ಸಫಾರಿ ಪ್ರಿಯರ ಸಂಖ್ಯೆ ಹೆಚ್ಚುತ್ತಿದೆ. ಅದರಲ್ಲೂ ಕಾಕನಕೋಟೆ ಸಫಾರಿ ಕೇಂದ್ರದಿಂದ ಸಫಾರಿಗೆ ಬಾರಿ ಬೇಡಿಕೆಯಿದ್ದು, ಮೈಸೂರು, ಬೆಂಗಳೂರು ಮಾತ್ರವಲ್ಲದೆ ಹೊರ ರಾಜ್ಯಗಳ ವನ್ಯಜೀವಿ ಛಾಯಾಗ್ರಾಹಕರು ಆಗಮಿಸುತ್ತಿದ್ದಾರೆ. ಬೇಸಿಗೆ ರಜೆ ಮುಕ್ತಾಯ ಹಂತದಲ್ಲಿರುವುದರಿಂದ ಮಕ್ಕಳ ಸಂಖ್ಯೆಯೂ ಹೆಚ್ಚಾಗಿದೆ. ಆದರೆ ನಿಯಮಾನುಸಾರ ನಿಗದಿತ ಟ್ರಿಪ್‌ಗಳಲ್ಲಷ್ಟೇ ಸಫಾರಿಗೆ ಕರೆದೊಯ್ಯುವುದರಿಂದ ನೂರಾರು ಮಂದಿ ಅವಕಾಶ ವಂಚಿತರಾಗಿ ನಿರಾಸೆಯಿಂದ ವಾಪಸ್ಸಾಗುತ್ತಿದ್ದಾರೆ.

ವನ್ಯಜೀವಿಗಳ ದರ್ಶನ: ಬೇಸಿಗೆಯಲ್ಲಿ ಸಸ್ಯರಾಶಿ ಒಣಗಿದ್ದರಿಂದ ಸಸ್ಯಹಾರಿ ಪ್ರಾಣಿಗಳು ಹಸಿ ಸೊಪ್ಪು, ಹುಲ್ಲು ಬೆಳೆದಿರುವ ಪ್ರದೇಶ ಹಾಗೂ ನೀರಿರುವ ಕೆರೆ ಬಳಿ ತೆರಳುತ್ತಿದ್ದವು. ಆದರೀಗ ಎಲ್ಲೆಲ್ಲೂ ಹಸಿರು, ಹಳ್ಳ–ಕೊಳ್ಳದಲ್ಲಿ ನೀರಿರುವುದರಿಂದ ಸಸ್ಯಹಾರಿ ಪ್ರಾಣಿಗಳು ಎಲ್ಲೆಂದರಲ್ಲಿ ಸ್ವಚ್ಛಂದವಾಗಿ ಓಡಾಡಿಕೊಂಡಿವೆ. ಇದರಿಂದಾಗಿ ಇವುಗಳ ಬೇಟೆಯಾಡುವ ಮಾಂಸಾಹಾರ ಪ್ರಾಣಿಗಳೂ ಹಲವೆಡೆ ಕಾಣ ಸಿಗುತ್ತಿವೆ. ಸಫಾರಿ ವೇಳೆ ಪ್ರವಾಸಿಗರು ಹುಲಿ, ಚಿರತೆ, ಆನೆ, ಕರಡಿ, ಜಿಂಕೆ ಸೇರಿದಂತೆ ವಿವಿಧ ಪ್ರಾಣಿಗಳ ದರ್ಶನದಿಂದ ಪುಳಕಿತರಾಗುತ್ತಿದ್ದಾರೆ.

ಶೂನ್ಯ ಕಾಡ್ಗಿಚ್ಚು: ಈ ಬಾರಿ ಬೇಸಿಗೆಯಲ್ಲಿ ಸಿಬ್ಬಂದಿಗಳ ಪರಿಶ್ರಮದಿಂದಾಗಿ ನಾಗರಹೊಳೆ ಅಭಯಾರಣ್ಯದಲ್ಲಿ ಕಾಡ್ಗಿಚ್ಚು ಸಂಭವಿಸಿಲ್ಲ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ ಪಿ.ಎ.ಸೀಮಾ ನೇತೃತ್ವದಲ್ಲಿ ಎಲ್ಲಾ ಎಸಿಎಫ್, ಆರ್‌ಎಫ್‌ಓಗಳು ಸೇರಿದಂತೆ ಮುಂಚೂಣಿ ಸಿಬ್ಬಂದಿಗಳು ಗಸ್ತು ಹೆಚ್ಚಿಸುವುದರೊಂದಿಗೆ ಕಾಡಂಚಿನ ಗ್ರಾಮ ಮತ್ತು ಹಾಡಿ ನಿವಾಸಿಗಳ ವಿಶ್ವಾಸ ಗಳಿಸಿ ಹೆಚ್ಚಿನ ನಿಗಾ ವಹಿಸಿದ್ದರಿಂದ ಅರಣ್ಯ ಸಂಪತ್ತು ಬೆಂಕಿಗೆ ಆಹುತಿಯಾಗಿಲ್ಲ. ಈ ಬಗ್ಗೆ ಪರಿಸರ ಪ್ರೇಮಿಗಳಿಂದ ಪ್ರಶಂಸೆ ವ್ಯಕ್ತವಾಗುತ್ತಿದೆ.

ಮೈಸೂರು ಮಿತ್ರ ಶುಕ್ರವಾರ 23 ಮೇ 2025

ಮಂಡ್ಯದಲ್ಲಿ ಶಾಸಕ ರಮೇಶ ಬಂಡಿಸಿದ್ದೇಗೌಡ ಹುಟ್ಟುಹಬ್ಬ ಆಚರಣೆ

ಮುಂದಿನ ಸಂಪುಟ ವಿಸ್ತರಣೆಯಲ್ಲಿ ಸಚಿವ ಸ್ಥಾನ ಸಿಗಲೆಂದು ಬೆಂಬಲಿಗರ ಪ್ರಾರ್ಥನೆ



ಮಂಡ್ಯ, ಮೇ 22– ಚಾಮುಂಡೇಶ್ವರಿ ವಿದ್ಯುತ್ ನಿಗಮದ ಅಧ್ಯಕ್ಷ ಹಾಗೂ ಶಾಸಕ ಎ.ಬಿ.ರಮೇಶ ಬಂಡಿಸಿದ್ದೇಗೌಡರು ಪ್ರತಿನಿತ್ಯ ಜನರ ಕಷ್ಟ ಕಾರ್ಪಣ್ಯಗಳಿಗೆ ಸ್ಪಂದಿಸುವ ಮೂಲಕ ಬಡಜನರ ಸೇವೆ ಮಾಡುತ್ತ ಕ್ಷೇತ್ರದ ಅಭಿವೃದ್ಧಿಗೋಸ್ಕರ ಸಾವಿರಾರು ಕೋಟಿ ಅನುದಾನ ತಂದು ಕ್ಷೇತ್ರವನ್ನು ಮಾದರಿ ಕ್ಷೇತ್ರ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ತಗ್ಗಹಳ್ಳಿ ವೆಂಕಟೇಶ್ ತಿಳಿಸಿದರು.

ಶಾಸಕ ರಮೇಶ ಬಂಡಿಸಿದ್ದೇಗೌಡರ ಹುಟ್ಟುಹಬ್ಬದ ಅಂಗವಾಗಿ ಅವರ ಹಿತೈಷಿಗಳು ಹಾಗೂ ಬೆಂಬಲಿಗರು, ಕಾಂಗ್ರೆಸ್ ಕಾರ್ಯಕರ್ತರು ನಗರದ ವಿದ್ಯಾಗಣಪತಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಮಮತೆಯ ಮಡಿಲು ಅನ್ನದಾಸೋಹ ಕೇಂದ್ರದಲ್ಲಿ ರೋಗಿಗಳು ಮತ್ತು ಅವರ ಸಂಬಂಧಿಕರಿಗೆ ಉಪಾಹಾರ ವಿತರಣೆ ಮಾಡಿ, ಜಿಲ್ಲಾ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಹಂಪಲು ವಿತರಿಸುವ ಮೂಲಕ ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡುವ ಮೂಲಕ ಹುಟ್ಟುಹಬ್ಬ ಆಚರಿಸಿ ಮಾತನಾಡಿದರು.

ರಮೇಶ ಬಂಡಿಸಿದ್ದೇಗೌಡ ಶ್ರೀರಂಗಪಟ್ಟಣ ಕ್ಷೇತ್ರದಾದ್ಯಂತ ರಸ್ತೆಗಳು, ಚರಂಡಿ, ನೀರಾವರಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಾಲುವೆಗಳು, ಕಾಲುವೆಗಳ ದುರಸ್ತಿ, ಕೆರೆಕಟ್ಟೆಗಳ ಅಭಿವೃದ್ಧಿ, ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ತಮ್ಮದೇ ಆದ ಸೇವೆ ಮಾಡುವ ಮೂಲಕ ಅನುದಾನ ತಂದು ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿದರು.

ರಮೇಶ ಬಂಡಿಸಿದ್ದೇಗೌಡ ಅವರು ಶಾಸಕರಾಗಿ, ಚೆಸ್ಕಾಂ ಅಧ್ಯಕ್ಷರಾಗಿ ಕ್ಷೇತ್ರದಲ್ಲಿ ಅಭಿವೃದ್ಧಿಯ ಕಡೆ ದಾಪುಗಾಲು ಇಟ್ಟು ಕೆಲಸ ಕಾರ್ಯ ಮಾಡುತ್ತಿದ್ದು, ಚೆಸ್ಕಾಂ ಅಧ್ಯಕ್ಷರಾಗಿ ರೈತರಿಗೆ ಅನುಕೂಲ ಕಲ್ಪಿಸುವ ಕೆಲಸ ಮಾಡುತ್ತಿದ್ದು, ರೈತರಿಗೆ ಟಿಸಿ ಹಾಗೂ ವಿದ್ಯುತ್ ಸಂಪರ್ಕ ಕೊಡಿಸುವ ಮೂಲಕ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಅವರಿಗೆ ಹೆಚ್ಚಿನ ಅಧಿಕಾರ ಸಿಗುವ ಮೂಲಕ ಜನಸೇವೆ ಮಾಡುವ ಅವಕಾಶ ಸಿಗಲಿ ಎಂದು ಶುಭ ಹಾರೈಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಮೇಶ್ ಮಿತ್ರ ಮಾತನಾಡಿ, ಸರಳ ಸಜ್ಜನಿಕೆಗೆ ಹೆಸರುವಾಸಿಯಾಗಿರುವ ಶ್ರೀರಂಗಪಟ್ಟಣ ಕ್ಷೇತ್ರದ ಶಾಸಕ ರಮೇಶ್ ಬಂಡಿಸಿದ್ದೇಗೌಡ ಅವರಿಗೆ ಮುಂದಿನ ಸಚಿವ ಸಂಪುಟದ ಪುನರ್ ರಚನೆ ವೇಳೆ ಸಚಿವ ಸ್ಥಾನ ಸಿಗಲಿ ಎಂದು ಶುಭ ಕೋರಿದರು.

ಈ ವೇಳೆ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಮಂಜುನಾಥ್, ಗುತ್ತಿಗೆದಾರ ಸೂನಗಹಳ್ಳಿ ಸುರೇಶ್, ಕಾಂಗ್ರೆಸ್ ಮುಖಂಡರಾದ ಕಾಳಪ್ಪ, ರಾಜಣ್ಣ, ಕಾಳೇನಹಳ್ಳಿ ಮಂಜುನಾಥ್, ರವಿಕುಮಾರ್, ಯಶೋಧ, ಕಿಟ್ಟಿ, ಎಂ.ಕೆ.ಮಧು, ಬಸವರಾಜ್, ದ್ಯಾವಣ್ಣ ಇತರರು ಹಾಜರಿದ್ದರು.

ಶ್ರೀರಂಗಪಟ್ಟಣದಲ್ಲೂ ಶಾಸಕ ರಮೇಶ್ ಬಂಡಿಸಿದ್ದೇಗೌಡರ ಹುಟ್ಟುಹಬ್ಬ ಆಚರಣೆ



ಶ್ರೀರಂಗಪಟ್ಟಣದ ಶಾಸಕ ರಮೇಶ ಬಂಡಿಸಿದ್ದೇಗೌಡರ ಹುಟ್ಟುಹಬ್ಬದ ಅಂಗವಾಗಿ ಅಭಿಮಾನಿಗಳಿಂದ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು. ಪುರಸಭೆ ಪ್ರಭಾರ ಅಧ್ಯಕ್ಷ ಎಂ.ಎಲ್. ದಿನೇಶ್ ನೇತೃತ್ವದಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಯುವ ಕಾಂಗ್ರೆಸ್ ಅಧ್ಯಕ್ಷ ರಜಿನಿಕಾಂತ್ ಸೇರಿದಂತೆ ಆಸ್ಪತ್ರೆಯ ವೈದ್ಯರು, ಸಿಬ್ಬಂದಿಗಳು, ಇತರ ಅಭಿಮಾನಿ ಬಳಗದವರು ಉಪಸ್ಥಿತರಿದ್ದರು.

ಒಳ ಮೀಸಲಾತಿ ದತ್ತಾಂಶ ಸಂಗ್ರಹಣೆ

ಸ್ವಯಂ ಘೋಷಣೆ ಮಾಡಿಕೊಳ್ಳಲು ಮೇ 28ರವರೆಗೆ ಅವಕಾಶ

ಮಂಡ್ಯ, ಮೇ 22– ಪರಿಶಿಷ್ಟ ಜಾತಿ ಒಳಮೀಸಲಾತಿ ವರ್ಗೀಕರಣ ಕುರಿತು ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ್ ದಾಸ್, ಏಕಸದಸ್ಯ ವಿಚಾರಣಾ ಆಯೋಗದಿಂದ ಪರಿಶಿಷ್ಟ ಜಾತಿಗಳ ವಿವಿಧ ಅಂಶಗಳ ಬಗ್ಗೆ ದತ್ತಾಂಶಗಳನ್ನು ಸಂಗ್ರಹಿಸಿ ಸಮೀಕ್ಷೆಯನ್ನು ಜಿಲ್ಲಾಡಳಿತ ವತಿಯಿಂದ ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಈಗಾಗಲೇ ಪ್ರಾರಂಭಿಸಲಾಗಿದೆ.

ಮನೆ ಮನೆಯ ಭೇಟಿ ಸಂದರ್ಭದಲ್ಲಿ ಮಾಹಿತಿಯನ್ನು ನೀಡದವರು ನೇರವಾಗಿ ಆನ್‌ಲೈನ್ ಮೂಲಕ https://schedulecastesurvey.karnataka.gov.in/selfdeclaration ವೆಬ್‌ಸೈಟ್‌ನಲ್ಲಿ ಸ್ವಯಂ ಘೋಷಣೆ ಮಾಡಿಕೊಳ್ಳಲು ಮೇ 28 ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಆನ್‌ಲೈನ್ ನೋಂದಣಿಗಾಗಿ ಆಧಾರ್ ಕಾರ್ಡ್ ಹಾಗೂ ಜಾತಿ ಪ್ರಮಾಣ ಪತ್ರ ಆರ್.ಡಿ ನಂಬರ್ ಅವಶ್ಯಕವಾಗಿರುತ್ತದೆ. ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರನ್ನು ಗುರುತಿಸುವ ಪರಿಶಿಷ್ಟ ಜಾತಿಗಳಲ್ಲಿ(ಎಸ್.ಸಿ) ಆಂತರಿಕ ಮೀಸಲಾತಿಯ ಬೇಡಿಕೆಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡ ಒಂದು ಮಹತ್ವಾಕಾಂಕ್ಷಿ ಹಾಗೂ ದಿಟ್ಟ ಹೆಜ್ಜೆಯಾಗಿರುತ್ತದೆ.

ಪರಿಶಿಷ್ಟ ಜಾತಿಗೆ ಸೇರಿದವರು ತಮ್ಮ ಮೂಲ ಜಾತಿ, ಶಿಕ್ಷಣ, ವರಮಾನ, ಉದ್ಯೋಗ ಮತ್ತು ಇನ್ನಿತರ ನಿಖರ ಮಾಹಿತಿ ನೀಡುವುದು.

ಗ್ರಾಪಂ ಕಾರ್ಯದರ್ಶಿಗಳು ಜನನ–ಮರಣ ನೋಂದಣಿಗೆ ಉಪನೋಂದಣಾಧಿಕಾರಿ

ಮಂಡ್ಯ, ಮೇ 22– ಗ್ರಾಮೀಣ ಪ್ರದೇಶದಲ್ಲಿ ಜನನ– ಮರಣ ನೋಂದಣಿಗೆ ಗ್ರಾಮ ಪಂಚಾಯತಿ ಕಾರ್ಯದರ್ಶಿಗಳನ್ನು ಉಪನೋಂದಣಾಧಿಕಾರಿಯಾಗಿ ನೇಮಕ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಗುರುವಾರ ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜನನ–ಮರಣ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜನನ ಪ್ರಮಾಣ ಪತ್ರವನ್ನು ಪಡೆದುಕೊಳ್ಳುವ ರೀತಿ ಮರಣ ಹೊಂದಿದ ಸಂದರ್ಭದಲ್ಲಿ ಕುಟುಂಬದವರು ಮರಣ ಪ್ರಮಾಣ ಪತ್ರ ಪಡೆದುಕೊಳ್ಳಬೇಕು ಎಂದರು.

ಜನನ, ಮರಣ ಪ್ರಮಾಣ ಪತ್ರ ವಿಳಂಬ ಮಾಡದೇ ಪಡೆದುಕೊಳ್ಳುವುದು ಉತ್ತಮ. 30 ದಿನದ ನಂತರ ಹಾಗೂ ಒಂದು ವರ್ಷದಲ್ಲಿ ಘಟಿಸಿದ ಘಟನೆಗಳಿಗೆ ಗ್ರಾಮಾಂತರ ಪ್ರದೇಶದಲ್ಲಿ ತಹಸೀಲ್ದಾರ್, ನಗರ ಪ್ರದೇಶದಲ್ಲಿ ಆಯುಕ್ತರು ಅಥವಾ ಮುಖ್ಯಾಧಿಕಾರಿಗಳ ಆದೇಶ ಪಡೆದು ನೋಂದಣಿ ಪ್ರಮಾಣ ಪತ್ರವನ್ನು ಪಡೆಯಬಹುದು. ಒಂದು ವರ್ಷ ಮೇಲ್ಪಟ್ಟರೆ ನ್ಯಾಯಾಲಯದ ಮುಖಾಂತರ ಆದೇಶ ಪಡೆದು ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ. ಆದ್ದರಿಂದ ಸಾರ್ವಜನಿಕರು ತಪ್ಪದೇ ನಿಗದಿತ ಅವಧಿಯಲ್ಲಿ ಜನನ ಹಾಗೂ ಮರಣ ಪ್ರಮಾಣ ಪತ್ರ ಪಡೆದುಕೊಳ್ಳಿ ಎಂದು ಹೇಳಿದರು.



ಜನನ ಮರಣ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ ನಡೆಸಿದ ಜಿಲ್ಲಾಧಿಕಾರಿ.

ಒಂದು ಗ್ರಾಮದಲ್ಲಿ ಯಾವುದೇ ವ್ಯಕ್ತಿ ಮರಣ ಹೊಂದಿದ ಸಂದರ್ಭದಲ್ಲಿ ಸ್ಥಳೀಯವಾಗಿ, ಆಶಾ, ಅಂಗನವಾಡಿ ಅಥವಾ ಪಂಚಾಯಿತಿ ಸಿಬ್ಬಂದಿಗಳಿಗೆ ತಿಳಿದಿರುತ್ತದೆ. ಅವರಿಗೆ ಮರಣ ಪ್ರಮಾಣ ಪತ್ರಕ್ಕೆ ಅರ್ಜಿ ಸಲ್ಲಿಸುವಂತೆ ತಿಳಿಸಿ. ಇದರಿಂದ ಬಹಳಷ್ಟು ಜನ ನ್ಯಾಯಾಲಯಕ್ಕೆ ಮರಣ ಪ್ರಮಾಣ ಪತ್ರ ಕೋರಿ ಅರ್ಜಿ ಸಲ್ಲಿಸುವುದನ್ನು ತಪ್ಪಿಸಬಹುದು. ಜಿಲ್ಲೆಯಲ್ಲಿ ಆರೋಗ್ಯ ಇಲಾಖೆಯ ವರದಿಯ ಪ್ರಕಾರ ಶೇ.100 ರಷ್ಟು ಹೆರಿಗೆಗಳು ಆಸ್ಪತ್ರೆಯಲ್ಲಿ ನಡೆಯುತ್ತಿರುವುದರಿಂದ ಜನನ ಪ್ರಮಾಣ ಪತ್ರದ ಬಗ್ಗೆ ತೊಂದರೆ ಇಲ್ಲ ಆದರೆ ಕೆಲವು ಆಸ್ಪತ್ರೆಯಲ್ಲಿ ತಡವಾಗಿ ವರದಿಯನ್ನು ಕಳುಹಿಸುತ್ತಿರುವುದು ಹಾಗೂ ಜನ್ಮ ದಿನಾಂಕ, ಗಂಡು/ಹೆಣ್ಣನ್ನು ತಪ್ಪು ನಮೂದು ಮಾಡುತ್ತಿರುವುದು ಕಂಡುಬಂದಿರುತ್ತದೆ. ಇದು ಮುಂದುವರೆದಲ್ಲಿ ನೋಟಿಸ್ ಜಾರಿ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿ ಬಿ.ಸಿ.ಕೇಶವಮೂರ್ತಿ, ಸಹಾಯಕ ಸಂಖ್ಯಾ ಸಂಗ್ರಹಣಾಧಿಕಾರಿ ಚೈತ್ರಾ ಕುಟುಂಬ ಕಲ್ಯಾಣಾಧಿಕಾರಿ ಡಾ.ಬೆಟ್ಟಸ್ವಾಮಿ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು

ಇಂದು ಬಸವೇಶ್ವರರ ಜಯಂತ್ಯುತ್ಸವ



ಪಾಂಡವಪುರ, ಮೇ 22– ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ತಾಲೂಕು ಘಟಕದ ವತಿಯಿಂದ ಮೇ 23ರಂದು ಪಟ್ಟಣದ ಟಿಎಪಿಸಿಎಂಎಸ್ ಆವರಣದಲ್ಲಿ ಶ್ರೀ ಜಗಜ್ಯೋತಿ ಬಸವೇಶ್ವರ 892ನೇ ಜಯಂತ್ಯುತ್ಸವವನ್ನು ಆಯೋಜಿಸಲಾಗಿದೆ ಎಂದು ಬೇಬಿಮಠ ಚಂದ್ರವನ ಆಶ್ರಮದ ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ತಿಳಿಸಿದ್ದಾರೆ.

ಶುಕ್ರವಾರ ಬೆಳಿಗ್ಗೆ 10 ಗಂಟೆಗೆ ಪಟ್ಟಣದ ಶ್ರೀಬನ್ನಾರಮ್ಮ ದೇವಸ್ಥಾನದಿಂದ ಬಸವೇಶ್ವರರ ಉತ್ಸವ ಮೂರ್ತಿಯೊಂದಿಗೆ ವಿವಿಧ ಜನಪದ ಕಲಾತಂಡಗಳೊಂದಿಗೆ ಮೆರವಣಿಗೆ ಆರಂಭವಾಗಲಿದೆ. ಪ್ರಮುಖ ಬೀದಿಗಳಲ್ಲಿ ಉತ್ಸವ ಸಾಗಿ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದಲ್ಲಿ ಸಮಾವೇಶಗೊಳ್ಳಲಿದ್ದು, ವೇದಿಕೆ ಕಾರ್ಯಕ್ರಮದಲ್ಲಿ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತುಮಕೂರು ಸಿದ್ದಗಂಗಾ ಮಠಾಧೀಶರಾದ ಸಿದ್ದಲಿಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಡಾ. ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ಬೇಬಿಬೆಟ್ಟ ಶ್ರೀರಾಮಯೋಗೀಶ್ವರ ಮಠದ ಶಿವಬಸವ ಸ್ವಾಮೀಜಿಗಳ ನೇತೃತ್ವದಲ್ಲಿ ಮಲೆಮಹದೇಶ್ವರ ಬೆಟ್ಟದ ಸಾಲೂರು ಬೃಹನ್ಮಠದ ಶಾಂತ ಮಲ್ಲಿಕಾರ್ಜುನ ಸ್ವಾಮೀಜಿ, ಕುಂದೂರು ಮಠದ ಶರತ್‌ಚಂದ್ರ ಸ್ವಾಮೀಜಿ ಸಮ್ಮುಖದಲ್ಲಿ ಅರಣ್ಯ ಸಚಿವರು ಅಖಿಲ ಭಾರತ ವೀರಶೈವ ಲಿಂಗಾಯಿತ ಮಹಾಸಭಾದ ಪ್ರಧಾನ ಕಾರ್ಯದರ್ಶಿ ಈಶ್ವರ್ ಬಿ.ಖಂಡ್ರೆ ಅವರ ಘನ ಉಪಸ್ಥಿತಿಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ.

ಶಾಸಕರುಗಳಾದ ವಿಜಯಾನಂದ ಕಾಶಪ್ಪನವರ್, ಎಚ್.ಎಂ.ಗಣೇಶ್‌ಪ್ರಸಾದ್, ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್, ಬಿಜೆಪಿ ಮುಖಂಡ ಸಚ್ಚಿದಾನಂದ ಸೇರಿದಂತೆ ಅನೇಕ ಗಣ್ಯರು ಪಾಲ್ಗೊಳ್ಳಲಿದ್ದಾರೆ. ಮಧ್ಯಾಹ್ನ 1 ಗಂಟೆಗೆ ಪ್ರಸಾದ ವಿನಿಯೋಗ ವ್ಯವಸ್ಥೆ ಮಾಡಲಾಗಿದ್ದು, ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ಡಾ.ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಮನವಿ ಮಾಡಿದ್ದಾರೆ.

ನಾಳೆ ಅಣ್ಣನ ನೆನಪು ಸಾಕ್ಷ್ಯ ನಾಟಕ ಪ್ರದರ್ಶನ

ಮಂಡ್ಯ, ಮೇ 22– ನೆಲದನಿ ಬಳಗದ ವತಿಯಿಂದ ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಅಣ್ಣನ ನೆನಪು ಸಾಕ್ಷ್ಯ ನಾಟಕ ಪ್ರದರ್ಶನವನ್ನು ಮೇ 24ರ ಸಂಜೆ 6 ಗಂಟೆಗೆ ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ಆಯೋಜಿಸಲಾಗಿದೆ ಎಂದು ಬಳಗದ ಅಧ್ಯಕ್ಷ ಎಂ.ಸಿ.ಲಂಕೇಶ್ ಮಂಗಲ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವೇದಿಕೆ ಕಾರ್ಯಕ್ರಮದ ನಂತರ ಸಂಜೆ 7ಕ್ಕೆ ನಾಟಕ ಪ್ರದರ್ಶನಗೊಳ್ಳಲಿದ್ದು, ನಾಟಕವು ಸುಮಾರು 1 ಗಂಟೆ 50 ನಿಮಿಷಗಳ ಕಾಲ ನಡೆಯಲಿದೆ ಎಂದರು. ವೇದಿಕೆ ಕಾರ್ಯಕ್ರಮದ ದಿವ್ಯಸಾನ್ನಿಧ್ಯವನ್ನು ವಿಶ್ವ ಒಕ್ಕಲಿಗ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ವಹಿಸಲಿದ್ದು, ನೆಲದನಿ ಬಳಗದ ಪೋಷಕರಾದ ರುಕ್ಮಿಣಿ ಎಸ್.ಸಿ. ಶಂಕರೇಗೌಡ ಅಧ್ಯಕ್ಷತೆ ವಹಿಸುವರು. ರೈತ ನಾಯಕಿ ಸುನಂದ ಜಯರಾಮ್ ಉದ್ಘಾಟಿಸುವರು ಎಂದು ಹೇಳಿದರು.

ಲಯನ್ಸ್ ಸಂಸ್ಥೆಯ ಅಂತರರಾಷ್ಟ್ರೀಯ ನಿರ್ದೇಶಕ ಡಾ.ನಾಗರಾಜು ವಿ.ಭೈರಿ, ಸೌತ್ ಮಲ್ಟಿಪಲ್ ಉಪಾಧ್ಯಕ್ಷ ಕೆ.ಟಿ.ಹನುಮಂತು, ನೆಲದನಿ ಬಳಗದ ಪೋಷಕ ಮರೀಗೌಡ, ಮಿಮ್ಸ್‌ನ ಪ್ರಸೂತಿ & ಸ್ತ್ರೀ ರೋಗ ವಿಭಾಗದ ಸಹ ಪ್ರಾಧ್ಯಾಪಕ ಡಾ.ಮನೋಹರ್, ಡಾ.ರವಿಕುಮಾರ್, ಕನ್ನಿಕಾ ಶಿಲ್ಪಿ ನವೋದಯ ಎಜುಕೇಷನ್ ಟ್ರಸ್ಟ್‌ನ ಕಾರ್ಯದರ್ಶಿ ಹೆಚ್.ಆರ್.ಕನ್ನಿಕ ಅವರನ್ನು ಅಭಿನಂದಿಸಲಾಗುವುದು ಎಂದು ತಿಳಿಸಿದರು.

ಶ್ರೀಮತಿ ಲಲಿತಾಭಾಯಿ ನಿಧನ



ಶ್ರೀರಂಗಪಟ್ಟಣ, ಮೇ 22– ಮಂಡ್ಯ ಕೊಪ್ಪಲು ಗ್ರಾಮದವರಾಗಿದ್ದು, ಶ್ರೀರಂಗಪಟ್ಟಣದಲ್ಲಿ ವಾಸವಿದ್ದ ದಿವಂಗತ ಮಾಧವರಾವ್ ಅವರ ಪತ್ನಿ ಶ್ರೀಮತಿ ಲಲಿತಾಭಾಯಿ(90) ಗುರುವಾರ ಬೆಳಗ್ಗೆ ನಿಧನರಾದರು.

ಮೃತರು ಪುತ್ರರು, ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದು, ಶ್ರೀರಂಗಪಟ್ಟಣದ ಶಂಭುಲಿಂಗಕಟ್ಟೆ ರುದ್ರಭೂಮಿಯಲ್ಲಿ ಗುರುವಾರ ಸಂಜೆ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ

ಒಂದನೇ ಪುಟದಿಂದ

ವೀರಶೈವ ಸಚಿವರ ವಿರೋಧ

ಎಂದು ಆಗ್ರಹಿಸಿದ್ದಾರೆ. ವೀರಶೈವ ಸಮುದಾಯದ ಸಚಿವರ ಜೊತೆಗೆ ಬೇರೆ ಪಂಗಡಕ್ಕೆ ಸೇರಿದ ಕೆಲವು ಸಚಿವರು, ಗಣತಿ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದರು. ಸದ್ಯಕ್ಕೆ ಯಾವ ನಿರ್ಣಯ ಬೇಡ ಎಂಬ ಸಲಹೆ ಮಾಡಿದರು. ಹೀಗಾಗಿ ಯಾವುದೇ ನಿರ್ಣಯ ಕೈಗೊಳ್ಳದ ಸಂಪುಟ ಸಭೆ, ಜಾತಿಗಣತಿ ವಿಚಾರವನ್ನು ಮುಂದೂಡಿದೆ. ಇದಕ್ಕೂ ಮುನ್ನ ದಲಿತ ಸಮುದಾಯಕ್ಕೆ ಸೇರಿದ ಸಚಿವರು ಕಾಂತರಾಜ್ ಅವರ ಸೋಷಿಯಲ್ ಸರ್ವೆ ಅನುಷ್ಠಾನ ಮಾಡಬಹುದು. ತೆಲಂಗಾಣ, ಬಿಹಾರದಲ್ಲಿ ಒಬಿಸಿ ಮೀಸಲಾತಿ ಅಳವಡಿಸಿಕೊಳ್ಳಲಾಗಿದೆ. ಯಾವುದೇ ಗೊಂದಲ ಇಲ್ಲದೇ ವರದಿ ಅನುಷ್ಠಾನಗೊಳಿಸಬಹುದು ಎಂದು ಸಿಎಂ ಬೆಂಬಲಕ್ಕೆ ನಿಂತಿದ್ದರು. ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು–ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್, ಹಿಂದುಳಿದ ವರ್ಗಗಳ ಆಯೋಗದ ವರದಿಗೆ ಸಂಬಂಧಿಸಿದಂತೆ ಬಹುತೇಕ ಸಚಿವರು ತಮ್ಮ ಅಭಿಪ್ರಾಯ ನೀಡಿದ್ದಾರೆಂದು ಸಿಎಂ ಅವರು ಸಭೆ ಗಮನಕ್ಕೆ ತಂದಿದ್ದಾರೆ. ವರದಿಗೆ ಸಂಬಂಧಿಸಿದಂತೆ ಮತ್ತಷ್ಟು ವಿವರಗಳನ್ನು ಪಡೆದು, ಅಧ್ಯಯನ ನಡೆಸಿ ಮುಂದಿನ ಇಲ್ಲವೇ ನಂತರದ ಸಭೆಗಳಲ್ಲಿ ಚರ್ಚೆ ಮಾಡಿ ತೀರ್ಮಾನ ಕೈಗೊಳ್ಳುವುದಾಗಿ ಪಾಟೀಲ್ ತಿಳಿಸಿದರು.

ಕಾನೂನು ಕ್ರಮಕ್ಕೆ ಸಂಪುಟ ಸಮ್ಮತಿ

ಈ ಸೌಲಭ್ಯಗಳನ್ನು ಒದಗಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಮಂಡ್ಯ ಜಿಲ್ಲೆ ಮದ್ದೂರು ಪುರಸಭೆಯನ್ನು ನಗರಸಭೆಯನ್ನಾಗಿ ಮೇಲ್ದರ್ಜೆಗೇರಿಸಲು ಸಮ್ಮತಿಸಿರುವ ಸಂಪುಟ, ಮೈಸೂರು ಜಿಲ್ಲೆಯ ಟಿ.ನರಸೀಪುರದ ರಾಜಾಪರಮೇಶ್ವರಿ ನಾಲೆ, ವಿರಿಜಾ ಅಣೆಕಟ್ಟು ನಾಲೆ, ಹಾರೋಹಳ್ಳಿ ಮೇಲ್ಮಟ್ಟದ ಹಾಗೂ ಕೆಳಮಟ್ಟದ ನಾಲೆಗಳ ಅಚ್ಚುಕಟ್ಟು ಪ್ರದೇಶಗಳಿಗೆ ನೀರೊದಗಿಸುವ ಕಾಮಗಾರಿ ಕೈಗೆತ್ತಿಕೊಳ್ಳಲು ಸಂಪುಟ ಅನುಮೋದನೆ ನೀಡಿದೆ. ಅಷ್ಟೇ ಅಲ್ಲ, 3 ಯೋಜನೆಗಳಿಗೆ ಅಗತ್ಯವಿರುವ 139.50 ಕೋಟಿ ರೂ.ಗಳನ್ನು ಈ ಕಾಮಗಾರಿಗಳಿಗೆ ಬಿಡುಗಡೆ ಮಾಡಿದೆ. ಮೈಸೂರು ತಾಲೂಕಿನ ಚಿಕ್ಕಂಕನಹಳ್ಳಿ ಕೆರೆ ಮೇಲ್ಗಾಲುವೆ, ಕಿಗ್ಗಾಲುವೆಗಳ ಆಧುನೀಕರಣಕ್ಕೆ 34.65 ಕೋಟಿ ರೂ. ಬಿಡುಗಡೆ ಮಾಡಿರುವ ಸಂಪುಟ, ಅರ್ಕಾವತಿ ದಂಡೆ ಅಭಿವೃದ್ಧಿ ಯೋಜನೆಯಡಿ ಜಲಾಶಯ ಯೋಜನೆ ಕಾಮಗಾರಿಯನ್ನು 120 ಕೋಟಿ ಅಂದಾಜು ವೆಚ್ಚದಲ್ಲಿ ಕೈಗೆತ್ತಿಕೊಳ್ಳಲು ಒಪ್ಪಿಗೆ ನೀಡಿದೆ.

ವಿಮಾನ ನಿಲ್ದಾಣ ಸ್ಥಾಪನೆಗೆ ಸಿದ್ಧತೆ

ಜೊತೆಗೆ ಮುಂಬರುವ ದಿನಗಳಲ್ಲಿ ಬೃಹತ್ ವಿಮಾನಗಳ ಪ್ರಯಾಣಕ್ಕೂ ಅನುಕೂಲವಾಗುವಂತೆ ನಿಲ್ದಾಣ ಅಭಿವೃದ್ಧಿಪಡಿಸುವ ಆಲೋಚನೆ ಇದೆ. ಕೊಡಗಿನಲ್ಲಿ ಏರ್‌ಸ್ಟ್ರಿಪ್ ನಿರ್ಮಾಣಕ್ಕೆ ಅಗತ್ಯವಿರುವ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಕೆಲವು ಸಮಸ್ಯೆಗಳಿವೆ. ಅದನ್ನು ಪರಿಹರಿಸಿ ಜಾಗ ಗುರುತಿಸುವಂತೆ ನಿರ್ದೇಶನ ನೀಡಲಾಗಿದೆ ಎಂದರು. ಪ್ರತಿ ವಿಮಾನ ನಿಲ್ದಾಣಕ್ಕೆ 150ರಿಂದ 160 ಎಕರೆ ಜಮೀನು ಬೇಕಾಗುತ್ತದೆ. ಈಗಾಗಲೇ ಚಿಕ್ಕಮಗಳೂರು ವಿಮಾನ ನಿಲ್ದಾಣಕ್ಕೆ ಬಹುತೇಕ ಭೂಸ್ವಾಧೀನ ಕಾರ್ಯ ಮುಗಿದಿದೆ. ಇನ್ನು ಅಗತ್ಯವಿರುವ ಸ್ವಲ್ಪ ಭೂಮಿಯನ್ನು ಖಾಸಗಿಯವರಿಂದ ಪಡೆದು ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು ಎಂದರು.

ಬೆಂಗಳೂರು ದಕ್ಷಿಣ ಜಿಲ್ಲೆ

ರಾಮನಗರ, ಚನ್ನಪಟ್ಟಣ, ಕನಕಪುರ, ಮಾಗಡಿ ಈಗಿನ ತಾಲೂಕು ವ್ಯಾಪ್ತಿಯನ್ನೇ ಒಳಗೊಂಡಿರುತ್ತದೆ. ಈ ಮೊದಲು ಬೆಂಗಳೂರು ಗ್ರಾಮಾಂತರ ಜಿಲ್ಲೆ ಎಂಬುದಿತ್ತು. ಅದನ್ನು ರಾಮನಗರ ಜಿಲ್ಲೆಯಾಗಿ ಮಾರ್ಪಡಿಸಲಾಗಿತ್ತು. ಆಡಳಿತಾತ್ಮಕ ಮತ್ತು ರೈತರ ಹಿತದೃಷ್ಟಿಯಿಂದ ಈ ತೀರ್ಮಾನ ಕೈಗೊಳ್ಳಲಾಗಿದೆ. ಜಿಲ್ಲೆ ಮರುನಾಮಕರಣಕ್ಕೆ ಕೇಂದ್ರದ ಅನುಮತಿ ಬೇಕಿಲ್ಲ. ಈ ಹಿಂದೆ ಹೊಸ ಜಿಲ್ಲೆಗಳನ್ನು ಮಾಡಿದಾಗಲೂ ಕೇಂದ್ರ ಹಸ್ತಕ್ಷೇಪ ಮಾಡಿಲ್ಲ. ಇನ್ನು ಮುಂದೆ ನಾನು ಬೆಂಗಳೂರು ದಕ್ಷಿಣ ಜಿಲ್ಲೆಗೆ ಸೇರಿದ ಪ್ರತಿನಿಧಿ ಎಂದರು. ಬೆಂಗಳೂರು ಮೆಟ್ರೊ ರೈಲು ಹಂತ–2 ಯೋಜನೆಯ 4,0425.02 ಕೋಟಿ ಪರಿಷ್ಕೃತ ಅಂದಾಜಿಗೆ ಸಂಪುಟ ಅನುಮೋದನೆ ನೀಡಿದೆ ಎಂದು ತಿಳಿಸಿದರು.

ಇಡಿ ದಾಳಿ ಉದ್ದೇಶ ನಂಗೊತ್ತಿಲ್ಲ...!

ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಯಾವ ಅರ್ಥದಲ್ಲಿ ಹೇಳಿದ್ದಾರೋ ಗೊತ್ತಿಲ್ಲ. ಇಂಥ ವಿಚಾರಗಳಲ್ಲಿ ಯಾರೂ ಜಾತಿ ನೋಡಿ ಬರುವುದಿಲ್ಲ. ಆ ಬಗ್ಗೆ ಈಗ ನಾನು ಏನೂ ಹೇಳುವುದಿಲ್ಲ ಎಂದರು.

ನಮ್ಮ ಶಿಕ್ಷಣ ಸಂಸ್ಥೆ ಸ್ಥಾಪನೆಯಾಗಿ 68 ವರ್ಷಗಳಾಗಿವೆ. ನಮ್ಮ ತಂದೆ ಕಾಲದಿಂದ ಸಂಸ್ಥೆ ನಡೆಯುತ್ತಿದೆ. ಸಿದ್ಧಾರ್ಥ ಸಂಸ್ಥೆಯಲ್ಲಿ ಕಲಿತು ಇದುವರೆಗೆ 40,000 ಮಂದಿ ಎಂಜಿನಿಯರ್ ಆಗಿದ್ದಾರೆ. 10,000 ಮಂದಿ ವೈದ್ಯರಾಗಿದ್ದಾರೆ. ದಾಳಿ ಸಂಬಂಧ ಜಾರಿ ನಿರ್ದೇಶನಾಲಯ ಇದುವರೆಗೆ ತಮಗೆ ಏನೂ ತಿಳಿಸಿಲ್ಲ. ಇ.ಡಿ. ವಿಚಾರಣೆ ನಡೆಯುತ್ತಿದೆ, ಹೆಚ್ಚಿನದ್ದೇನನ್ನೂ ವಿವರಿಸುವುದಿಲ್ಲ ಎಂದರು. ಅಕ್ರಮ ಚಿನ್ನ ಕಳ್ಳಸಾಗಣೆ ಆರೋಪದಲ್ಲಿ ಜೈಲಿನಲ್ಲಿರುವ ನಟಿ ರನ್ಯಾ ರಾವ್‌ಗೆ ಡಾ.ಪರಮೇಶ್ವರ್ 40 ಲಕ್ಷ ರೂ. ವರ್ಗಾ ವಣೆ ಮಾಡಿರುವರೆಂಬ ಆರೋಪದ ಹಿನ್ನೆಲೆಯಲ್ಲಿ ಸಿದ್ಧಾರ್ಥ ಶಿಕ್ಷಣ ಸಂಸ್ಥೆಗಳ ಮೇಲೆ ಇ.ಡಿ. ದಾಳಿ ನಡೆದಿದೆ ಎಂದು ಮೂಲಗಳು ತಿಳಿಸಿವೆ.

ಡಾ.ಪರಮೇಶ್ವರ್ ನನಗೆ ತಿಳಿಸಿದ್ದಾರೆ

ಅವರ ಕುಟುಂಬಕ್ಕೆ ನೀಡಿರಬಹುದು, ಇದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದ ಅವರು, ಸಿದ್ಧಾರ್ಥ ಶಿಕ್ಷಣ ಸಂಸ್ಥೆ ಅಗಾಧವಾಗಿ ಬೆಳೆದಿದೆ. ಸಂಸ್ಥೆ ಕೆಲವು ಚಾರಿಟೆಬಲ್ ಟ್ರಸ್ಟ್‌ಗಳಿಗೆ ನೆರವು ನೀಡುತ್ತದೆ, ಶಾಲಾ–ಕಾಲೇಜು ಶುಲ್ಕ, ಮದುವೆ ಕಾರ್ಯಗಳಿಗೆ ನೆರವು ನೀಡುತ್ತಿದೆ. ಅಷ್ಟೇ ಅಲ್ಲ, ಆಸ್ಪತ್ರೆ ವೆಚ್ಚಗಳನ್ನೂ ಟ್ರಸ್ಟ್ ಭರಿಸಿದೆ. ಇದು ಎಲ್ಲಾ ಸಂಸ್ಥೆಗಳು ಮತ್ತು ರಾಜಕಾರಣಿಗಳು ಮಾಡಿಕೊಂಡು ಬಂದಿರುತ್ತಾರೆ. ರನ್ಯಾ ರಾವ್‌ಗೆ ತಮ್ಮ ಸಂಸ್ಥೆಯಿಂದ ಡಾ.ಪರಮೇಶ್ವರ್ ಹಣ ವರ್ಗಾವಣೆ ಮಾಡಿರುವುದನ್ನೂ ಬಹಿರಂಗಪಡಿಸಿದರು.

ಸದಾಶಿವನಗರ ನಿವಾಸದಲ್ಲಿ ಡಾ.ಪರಮೇಶ್ವರ್ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಶಿವಕುಮಾರ್, ನಮ್ಮ ಗೃಹ ಸಚಿವರು ಪ್ರಭಾವೀ ವ್ಯಕ್ತಿ, ರನ್ಯಾ ತಪ್ಪು ಮಾಡಿದ್ದರೆ ಕ್ರಮ ಜರುಗಿಸಲಿ ಎಂದರು.

ಡಾ.ಪರಮೇಶ್ವರ್ ಅವರನ್ನು ಪ್ರಾಮಾಣಿಕ ವ್ಯಕ್ತಿ ಎಂಬುದಾಗಿ ಹೊಗಳಿದ ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷರಾಗಿ ಎಂಟು ವರ್ಷ ಪಕ್ಷ ಸಂಘಟನೆ ಮಾಡಿದ್ದಾರೆ. ನಾನು ಮತ್ತು ಅವರು ಶಾಸಕರಾಗಿ, ವಿವಿಧ ಇಲಾಖಾ ಸಚಿವರಾಗಿ ಕಾರ್ಯ ನಿರ್ವಹಿಸಿದ್ದೇವೆ. ಅವರೊಬ್ಬ ಮೇಧಾವಿ ಮತ್ತು ದೊಡ್ಡ ವ್ಯಕ್ತಿ ಎಂದರು.

ಸಿಎಂ ಭೇಟಿಯಾದ ಪರಮೇಶ್ವರ್

ಕಳೆದ ಐದು ವರ್ಷಗಳ ಆರ್ಥಿಕ ದಾಖಲೆಗಳನ್ನು ಕೋರಿದ್ದಾರೆ ಎಂದು ಪರಮೇಶ್ವರ್ ಹೇಳಿದ್ದಾರೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸತೀಶ್ ಜಾರಕಿಹೊಳಿ, ದಿನೇಶ್ ಗುಂಡೂರಾವ್ ಸೇರಿದಂತೆ ಹಲವು ಸಚಿವರು ಮತ್ತು ಆಡಳಿತ ಪಕ್ಷದ ಶಾಸಕರು ದಾಳಿಯ ನಂತರ ಪರಮೇಶ್ವರ ಅವರ ಸದಾಶಿವ ನಗರ ನಿವಾಸಕ್ಕೆ ಭೇಟಿ ನೀಡಿ ಬೆಂಬಲ ವ್ಯಕ್ತಪಡಿಸಿದರು.

ನಾವೆಲ್ಲರೂ ಸಾರ್ವಜನಿಕ ಜೀವನದಲ್ಲಿ ಇದ್ದೇವೆ. ಅನೇಕ ಜನರು ಟ್ರಸ್ಟ್‌ಗಳನ್ನು ನಡೆಸುತ್ತಿದ್ದು, ಅವರು ಮದುವೆಗೆ ಹಣವನ್ನು ಉಡುಗೊರೆಯಾಗಿ ನೀಡಿರಬಹುದು. ಪರಮೇಶ್ವರ್ ಅವರಂತಹ ಪ್ರಭಾವಿ ನಾಯಕ ಕಳ್ಳ ಸಾಗಣೆಯಲ್ಲಿ ತೊಡಗಬಹುದೇ ಎಂದು ಶಿವಕುಮಾರ್ ಪ್ರಶ್ನಿಸಿದರು. ನಟಿ ರನ್ಯಾ ರಾವ್ ಅವರನ್ನು ಮಾರ್ಚ್ 3ರಂದು ದುಬೈನಿಂದ ಬಂದ ನಂತರ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿತ್ತು.

ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿದ ಡಿಆರ್‌ಐ ಅಧಿಕಾರಿಗಳು ಆಕೆಯನ್ನು ವಶಕ್ಕೆ ಪಡೆದು 14.2 ಕೆಜಿ ತೂಕದ 12.56 ಕೋಟಿ ಮೌಲ್ಯದ ಚಿನ್ನವನ್ನು ವಶಕ್ಕೆ ಪಡೆದಿದ್ದರು.

ಸದ್ಯದಲ್ಲೇ ರಾಜ್ಯಕ್ಕೆ 4,500 ಎಲೆಕ್ಟ್ರಿಕ್ ಬಸ್

ಮೂಲ ಸೌಕರ್ಯಗಳನ್ನು ಸಿದ್ಧಪಡಿಸಿಕೊಳ್ಳುವಂತೆ ಸಭೆಯಲ್ಲಿದ್ದ ಅಧಿಕಾರಿಗಳಿಗೆ ಕೇಂದ್ರ ಸಚಿವರು ಸೂಚಿಸಿದರು.

ಮಾಲಿನ್ಯರಹಿತ ಸಮೂಹ ಸಾರಿಗೆ ವ್ಯವಸ್ಥೆ ಬಲಪಡಿಸುವುದು ರಾಷ್ಟ್ರೀಯ ಅಗತ್ಯವಾಗಿದೆ. ಎಲೆಕ್ಟ್ರಿಕ್ ಬಸ್‌ಗಳ ಹಂಚಿಕೆಯಲ್ಲಿ ಬೇಡಿಕೆ, ಜನಸಂಖ್ಯೆ ಹಾಗೂ ಹಳೆಯ ಬಸ್‌ಗಳ ವಿಲೇವಾರಿ ಅಂಶಗಳನ್ನು ಪರಿಗಣಿಸಲಾಗಿದೆ ಎಂದರು.

ಎಲೆಕ್ಟ್ರಿಕ್ ಬಸ್‌ಗಳ ಹಂಚಿಕೆ ಸಂಬಂಧ ಕೇಂದ್ರ ಸಚಿವರ ಸಭೆಯಲ್ಲಿ ಕರ್ನಾಟಕ ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್.ವಿ. ಪ್ರಸಾದ್ ಪಾಲ್ಗೊಂಡು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ)ಗೆ 7,000 ಎಲೆಕ್ಟ್ರಿಕ್ ಬಸ್‌ಗಳ ಬೇಡಿಕೆ ಸಲ್ಲಿಸಿದರು. ಕಳೆದ ಕೆಲವು ದಿನಗಳ ಹಿಂದೆ ನವದೆಹಲಿಯಲ್ಲಿ ಕೇಂದ್ರ ಸಚಿವ ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿದ್ದ ರಾಜ್ಯ ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ, ಎಲೆಕ್ಟ್ರಿಕ್ ಬಸ್‌ಗಳಿಗೆ ಬೇಡಿಕೆ ಇಟ್ಟಿದ್ದರು. ಮೊದಲ ಹಂತದಲ್ಲಿಯೇ ಬೆಂಗಳೂರಿಗೆ ಅತ್ಯಧಿಕ ಬಸ್‌ಗಳ ಹಂಚಿಕೆ ಭರವಸೆಯನ್ನೂ ಕೇಂದ್ರ ಸಚಿವರು ನೀಡಿದ್ದಾರೆ. ಒಟ್ಟಾರೆ ದೆಹಲಿ ಸೇರಿದಂತೆ ದೇಶದ ಐದು ಪ್ರಮುಖ ನಗರಗಳಿಂದ 14,200 ಬಸ್‌ಗಳಿಗೆ ಬೇಡಿಕೆ ಇದ್ದು, ಈ ಪೈಕಿ 10,900 ಬಸ್‌ಗಳನ್ನು ಮೊದಲ ಹಂತದಲ್ಲಿ ಹಂಚಿಕೆ ಮಾಡಲಾಗುತ್ತಿದೆ.

ಮೊದಲ ಹಂತದಲ್ಲಿ ಉದ್ಯಾನ ನಗರಿ ಬೆಂಗಳೂರಿಗೆ ಸಿಂಹಪಾಲು ದೊರೆಯಲಿದೆ, ಸುಮಾರು 800 ಕಿ.ಮೀ. ವ್ಯಾಪ್ತಿಯಲ್ಲಿ ಬಿಎಂಟಿಸಿ ಕಾರ್ಯಾಚರಣೆ ನಡೆಸುತ್ತಿರುವ ಅಂಶವನ್ನು ಸಭೆಯಲ್ಲಿ ಪರಿಗಣಿಸಲಾಯಿತು.

ಬಾನು ಮುಷ್ತಾಕ್‌ಗೆ ಜಿ–ಕೆಟಗರಿ ಸೈಟ್ ನೀಡಲು ಸಂಪುಟ ಅಸ್ತು



ಬೆಂಗಳೂರು, ಮೇ 22–2025ನೇ ಸಾಲಿನ ಪ್ರತಿಷ್ಠಿತ ಬೂಕರ್ ಪ್ರಶಸ್ತಿ ಪಡೆದ ಕನ್ನಡದ ಖ್ಯಾತ ಲೇಖಕಿ ಬಾನು ಮುಷ್ತಾಕ್ ಅವರಿಗೆ ಬಿಡಿಎದಲ್ಲಿ ಜಿ ಕೆಟಗರಿ ನಿವೇಶನ ನೀಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಅಲ್ಲದೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ನಾಗರಿಕ ಸೌಲಭ್ಯ ನಿವೇಶನ ಹಂಚಿಕೆ) ನಿಯಮಗಳು, 1989ನ್ನು ಸಡಿಲಿಕೆ ಮಾಡಲಾಗಿದೆ. ಅದರ ಪ್ರಕಾರ, ಒಂದು ಬಾರಿಯ ಕ್ರಮವಾಗಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ನಾಗರಿಕ ಸೌಲಭ್ಯ ನಿವೇಶನ ಹಂಚಿಕೆ ಪಡೆದಿರುವ ವಿವಿಧ ಸಂಘ, ಸಂಸ್ಥೆಗಳು ಬಾಕಿ ಉಳಿಸಿಕೊಂಡಿರುವ ಸಂಪೂರ್ಣ ಗುತ್ತಿಗೆ ಮೌಲ್ಯವನ್ನು ಪ್ರಾಧಿಕಾರವು ಪ್ರಕಟಣೆ ನೀಡಿದ 120 ದಿನಗಳೊಳಗಾಗಿ ಪಾವತಿಸಿದರೆ, ನಿಯಮಾನುಸಾರ ವಿಧಿಸಲಾಗುವ ಬಡ್ಡಿಯ ಮೊತ್ತವನ್ನು ಸಂಪೂರ್ಣವಾಗಿ ಮನ್ನಾ ಮಾಡಲು ಸಂಪುಟ ಸಭೆ ಅನುಮೋದನೆ ನೀಡಿದೆ ಎಂದು ತಿಳಿಸಿದರು.

ಬೆಂಗಳೂರು ಮೆಟ್ರೋ ರೈಲು ಹಂತ–3 ಯೋಜನೆಯ 40,425.02 ಕೋಟಿ ರೂ.ಗಳ ಪರಿಷ್ಕೃತ ಅಂದಾಜಿಗೆ ಸಚಿವ ಸಂಪುಟ ಅನುಮೋದನೆ ನೀಡಿದೆ ಎಂದು ವಿವರ ನೀಡಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಹಸಿ ತ್ಯಾಜ್ಯ, ಒಣ ತ್ಯಾಜ್ಯ, ನೈರ್ಮಲ್ಯ ತ್ಯಾಜ್ಯ ಮತ್ತು ರಸ್ತೆ ತ್ಯಾಜ್ಯದ ಸಂಗ್ರಹಣೆ ಹಾಗೂ ಸಾಗಾಣಿಕೆ ಸೇವೆಗಾಗಿ 7 ವರ್ಷಗಳ ಅವಧಿಗೆ 4,791.95 ಕೋಟಿ ರೂ.ಗಳ ಅಂದಾಜು ಮೊತ್ತದಲ್ಲಿ ಪ್ಯಾಕೇಜ್ ಅನ್ನು 33 ಪ್ಯಾಕೇಜ್ ಗಳಾಗಿ ವಿಂಗಡಿಸಿ, ಟೆಂಡರ್ ಮೂಲಕ ಗುತ್ತಿಗೆ ನೀಡಲು ಆಡಳಿತಾತ್ಮಕ ಅನುಮೋದನೆ ಸಿಕ್ಕಿದೆ ಎಂದು ಡಿಸಿಎಂ ಡಿಕೆಶಿ ತಿಳಿಸಿದರು.


ಪ್ರಯಾಣ ದರ ಏರಿಕೆ ಬೆನ್ನಲ್ಲೇ, ಶೌಚಾಲಯ ಬಳಕೆಗೂ ಶುಲ್ಕ ವಿಧಿಸಿದ ನಮ್ಮ ಮೆಟ್ರೋ

ಬೆಂಗಳೂರು, ಮೇ 22– ಪ್ರಯಾಣ ದರ ಶೇ.71ರಷ್ಟು ಹೆಚ್ಚಳದ ನಂತರ, ಬೆಂಗಳೂರು ಮೆಟ್ರೋ ರೈಲು ನಿಗಮ ತನ್ನ 12 ನಿಲ್ದಾಣಗಳಲ್ಲಿ ಶೌಚಾಲಯಗಳಿಗೆ ಬಳಕೆದಾರ ಶುಲ್ಕವನ್ನು ಮೊದಲ ಹಂತದಲ್ಲಿ ಪರಿಚಯಿಸಿದೆ. ಈ 12 ನಿಲ್ದಾಣಗಳ ಪ್ರವೇಶ ಪ್ರದೇಶಗಳಲ್ಲಿ ಶೌಚಾಲಯಗಳನ್ನು ಸುಲಭ್ ಇಂಟರ್ನ್ಯಾಷನಲ್‌ಗೆ ಹಸ್ತಾಂತರಿಸಲಾಗಿದೆ. ಇದು ಸೌಲಭ್ಯಗಳನ್ನು ನಿರ್ವಹಿಸುತ್ತದೆ ಮತ್ತು ಬಳಕೆದಾರರ ಶುಲ್ಕ ಸಂಗ್ರಹಿಸುತ್ತದೆ. ಮೂತ್ರ ವಿಸರ್ಜನೆಗೆ 2 ರೂ. ಮತ್ತು ಶೌಚಾಲಯಗಳಿಗೆ 5 ರೂ.ಗಳನ್ನು ನಿಗದಿಪಡಿಸಲಾಗಿದೆ. ನ್ಯಾಷನಲ್ ಕಾಲೇಜು, ಲಾಲ್‌ಬಾಗ್, ಸೌತ್ ಎಂಡ್ ಸರ್ಕಲ್, ಜಯನಗರ, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಬನಶಂಕರಿ, ಜಯಪ್ರಕಾಶ್‌ನಗರ, ಯಲಚೇನಹಳ್ಳಿ, ಸರ್ ಎಂ.ವಿಶ್ವೇಶ್ವರಯ್ಯ ನಿಲ್ದಾಣ– ಸೆಂಟ್ರಲ್ ಕಾಲೇಜು, ಡಾ.ಬಿ.ಆರ್.ಅಂಬೇಡ್ಕರ್ ನಿಲ್ದಾಣ–ವಿಧಾನಸೌಧ, ಕಬ್ಬನ್ ಪಾರ್ಕ್ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣಗಳಲ್ಲಿ ಶೌಚಾಲಯ ಬಳಕೆಗೆ ಶುಲ್ಕ ವಿಧಿಸಲಾಗುತ್ತಿದೆ. ಈ ಶೌಚಾಲಯಗಳು ಪ್ರವೇಶ ಪ್ರದೇಶಗಳಲ್ಲಿವೆ. ಮೆಟ್ರೋ ಗ್ರಾಹಕರಲ್ಲದವರೂ ಸಹ ಇಲ್ಲಿ ಶೌಚಾಲಯಗಳನ್ನು ಬಳಸುತ್ತಿದ್ದರು. ಆದ್ದರಿಂದ ನಾವು ಅವುಗಳನ್ನು ಸುಲಭ್ ಇಂಟರ್ ನ್ಯಾಷನಲ್‌ಗೆ ಹಸ್ತಾಂತರಿಸಲು ಮತ್ತು ಬಳಕೆದಾರ ಶುಲ್ಕವನ್ನು ಪರಿಚಯಿಸಲು ನಿರ್ಧರಿಸಿದ್ದೇವೆ ಎಂದು ಹಿರಿಯ ಬೆಂಗಳೂರು ಮೆಟ್ರೋ ರೈಲು ನಿಗಮದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಾಕ್‌ನ ಉಗ್ರವಾದ ಬಯಲು ಮಾಡಲು ವಿದೇಶಕ್ಕೆ ಹೊರಟ ಸರ್ವಪಕ್ಷಗಳ ನಿಯೋಗ

ನವದೆಹಲಿ, ಮೇ 22– 'ಆಪರೇಷನ್ ಸಿಂಧೂರ್' ಕಾರ್ಯಾಚರಣೆ ನಂತರದ ರಾಜತಾಂತ್ರಿಕ ಕಾರ್ಯತಂತ್ರದ ಭಾಗವಾಗಿ, ಪಾಕಿಸ್ತಾನ ಪ್ರಚೋದಿತ ಭಯೋತ್ಪಾದನೆ ಬಗ್ಗೆ ಜಾಗತಿಕ ಸಮುದಾಯಕ್ಕೆ ವಾಸ್ತವಾಂಶಗಳನ್ನು ವಿವರಿಸಲು ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರನ್ನು ಒಳಗೊಂಡ ಡಿಎಂಕೆ ಕನಿಮೋಳಿ ನೇತೃತ್ವದ ಸರ್ವಪಕ್ಷಗಳ ನಿಯೋಗವು ಗುರುವಾರ ವಿದೇಶಕ್ಕೆ ಪ್ರಯಾಣ ಬೆಳೆಸಿದೆ.

ದೆಹಲಿ ವಿಮಾನ ನಿಲ್ದಾಣ ಮೂಲಕ ಬೆಳಗ್ಗೆ 11ಗಂಟೆಗೆ ಹೊರಟ ತಂಡದಲ್ಲಿ ಕ್ಯಾ. ಚೌಟ ಅವರ ಜೊತೆ ಡಿಎಂಕೆ ಪಕ್ಷದ ಸಂಸದೆ ಕನಿಮೋಳಿ, ಸಮಾಜವಾದಿ ಪಕ್ಷದ ರಾಜೀವ್ ರೈ, ನ್ಯಾಷನಲ್ ಕಾನ್ಫರೆನ್ಸ್ ಸಂಸದ ಮಿಯಾನ್ ಅಲ್ತಾಫ್ ಅಹ್ಮದ್, ಆರ್‌ಜೆಡಿ ಪಕ್ಷದ ಪ್ರೇಮ್ ಚಂದ್ ಗುಪ್ತಾ, ಎಎಪಿ ಪಕ್ಷದ ಅಶೋಕ್ ಮಿತ್ತಲ್, ನೇಪಾಳದ ಮಾಜಿ ರಾಯಭಾರಿ ಮಂಜೀವ್ ಪುರಿ ಹಾಗೂ ಫ್ರಾನ್ಸ್ ಮಾಜಿ ರಾಯಭಾರಿ ಜಾವೇದ್ ಅಶ್ರಫ್ ಇದ್ದರು. ಈ ನಿಯೋಗವು ಮೊದಲು ರಷ್ಯಾಗೆ ತೆರಳುತ್ತಿದೆ. ನಂತರ ಸ್ಲೋವೇನಿಯಾ(ಮೇ 25),




ಗ್ರೀಸ್(ಮೇ 27), ಲಾಟ್ವಿಯಾ(ಮೇ 29) ಮತ್ತು ಸ್ಪೇನ್ (ಮೇ 31) ದೇಶಕ್ಕೆ ಭೇಟಿ ನೀಡಲಿದೆ. ವಿದೇಶಕ್ಕೆ ತೆರಳುವ ಮುನ್ನ ಮಾಧ್ಯಮಗಳ ಜೊತೆ ಮಾತನಾಡಿದ ದಕ್ಷಿಣ ಕನ್ನಡ ಸಂಸದ ಕ್ಯಾ. ಬ್ರಿಜೇಶ್ ಚೌಟ ಅವರು, ಮೊದಲ ಬಾರಿಗೆ ಸಂಸದನಾಗಿರುವ ಹಾಗೂ ಸೇನೆಯಲ್ಲಿ ಸೇವೆ ಸಲ್ಲಿಸಿದ ಓರ್ವ ಯೋಧನಾಗಿರುವ ನನಗೆ, ಭಯೋತ್ಪಾದನೆ ವಿರುದ್ಧ ಅದರಲ್ಲೂ ನಿರ್ದಿಷ್ಟವಾಗಿ ಪಾಕಿಸ್ತಾನ ಪ್ರೇರಿತ ಜಿಹಾದಿ ಉಗ್ರಗಾಮಿತ್ವದ ಅಪಾಯಗಳ ಬಗ್ಗೆ ಪ್ರಧಾನಿ ಮೋದಿ ನೇತೃತ್ವದಲ್ಲಿ ಮುನ್ನಡೆಯುತ್ತಿರುವ ಭಾರತದ ದೃಢ ಮತ್ತು ಒಗ್ಗಟ್ಟಿನ ಸಂದೇಶವನ್ನು ಜಾಗತಿಕ ಮಟ್ಟದಲ್ಲಿ ಸಾರುವುದಕ್ಕೆ ಈ ಅಪರೂಪದ ಅವಕಾಶ ದೊರಕಿದೆ. ನಿಯೋಗದ ಭಾಗವಾಗಿರುವುದು ಬಹಳ ಹೆಮ್ಮೆ ಮತ್ತು ಸೌಭಾಗ್ಯದ ಸಂಗತಿ ಎಂದರು.

ಪಾಕಿಸ್ತಾನ ಹರಡಲು ಯತ್ನಿಸುತ್ತಿರುವ ಸುಳ್ಳಿನ ಕಥೆಯನ್ನು ಜಾಗತಿಕವಾಗಿಯೂ ಬಯಲಿಗೆಳೆಯಲಿದೆ. ಪಾಕಿಸ್ತಾನ ಪ್ರೇರಿತ ಭಯೋತ್ಪಾದನೆಯ ವಿರುದ್ಧ ಹೋರಾಡುವ ನಮ್ಮ ಸಂಕಲ್ಪ ದೃಢವಾಗಿದೆ ಎಂದು ಹೇಳಿದರು.

ನಾಳೆಯಿಂದ ನಮ್ಮ ಬಸವ ಜಯಂತಿ–2025

'ನಮ್ಮ ನಡೆ ಅನುಭವ ಮಂಟಪದ ಕಡೆ' ಕಾರ್ಯಕ್ರಮ



ಮೈಸೂರು, ಮೇ22(ಜಿಎ)–ಬಸವ ಬಳಗ ಒಕ್ಕೂಟ, ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಹಾಗೂ ವೀರ ಶೈವ–ಲಿಂಗಾಯತ ಸಂಘ ಸಂಸ್ಥೆಗಳ ವತಿಯಿಂದ ಮೇ24 ಮತ್ತು 25ರಂದು ಮೈಸೂರಿನ ಕಲಾಮಂದಿರ ದಲ್ಲಿ ನಮ್ಮ ಬಸವ ಜಯಂತಿ–2025 'ನಮ್ಮ ನಡೆ ಅನುಭವ ಮಂಟಪದ ಕಡೆ' ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಬಸವ ಸಮಿತಿ ಅಧ್ಯಕ್ಷ ಬಿ.ಕೆ. ನಾಗರಾಜು ಬ್ಯಾತಹಳ್ಳಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನ ದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 24ರಂದು ಬೆಳಗ್ಗೆ 8 ಗಂಟೆಗೆ ಶ್ರೀಶಿವರಾತ್ರಿ ರಾಜೇಂದ್ರ ವೃತ್ತದಲ್ಲಿ ಷಟ್ಸ್ಥಲ ಧ್ವಜಾರೋಹಣಕ್ಕೆ ಶ್ರೀ ಹೊಸ ಮಠದ ಚಿದಾನಂದ ಸ್ವಾಮೀಜಿಗಳು ಚಾಲನೆ ನೀಡುವರು. ನಂತರ ಬೆಳಗ್ಗೆ 8.30ಕ್ಕೆ ಶ್ರೀ ಬಸವೇಶ್ವರ ಪುತ್ಥಳಿಯಿಂದ ಮೆರ ವಣಿಗೆಗೆ ಶ್ರೀ ಕುಂದೂರು ಮಠದ ಡಾ.ಶ್ರೀಶರತ್ ಚಂದ್ರ ಸ್ವಾಮೀಜಿ, ಕುದೇರು ಮಠದ ಶ್ರೀ ಗುರುಶಾಂತ ಸ್ವಾಮೀಜಿ ಅವರ ಸಮ್ಮುಖದಲ್ಲಿ ಶಾಸಕ ಹೆಚ್.ಎಂ. ಗಣೇಶ್‌ಪ್ರಸಾದ್ ಚಾಲನೆ ನೀಡುವರು.

ಮುಖ್ಯ ಅತಿಥಿಗಳಾಗಿ ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಅಪರ ಜಿಲ್ಲಾಧಿಕಾರಿ ಪಿ.ಶಿವರಾಜ್, ಮುಕ್ತ ವಿವಿ ಕುಲಪತಿ ಡಾ.ಶರಣಪ್ಪ ವಿ.ಹಲಸೆ ಭಾಗವಹಿಸುವರು.

ಕಲಾಮಂದಿರದಲ್ಲಿ ಬೆಳಗ್ಗೆ 11 ಗಂಟೆಗೆ ನಡೆಯಲಿರುವ ಕಾರ್ಯಕ್ರಮದಲ್ಲಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಶ್ರೀ ಸಿದ್ದಸಂಸ್ಥಾನ ಮಠದ ಡಾ.ಪಂಚಮ ಶ್ರೀ ಶಿವಲಿಂಗೇಶ್ವರ ಸ್ವಾಮೀಜಿ ಸಮ್ಮುಖದಲ್ಲಿ ಕಾರ್ಯಕ್ರಮ ವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸುವರು. ಶ್ರೀ ಬಸವೇಶ್ವರ ಪುತ್ಥಳಿಗೆ ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್ ಪುಷ್ಪಾರ್ಚನೆ ಮಾಡುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್‌ಗೌಡ, ಅನಿಲ್ ಚಿಕ್ಕಮಾದು, ಕೆ.ಹರೀಶ್‌ಗೌಡ, ಡಿ.ರವಿಶಂಕರ್, ಹೆಚ್.ಎಂ.ಗಣೇಶ್‌ಪ್ರಸಾದ್, ದರ್ಶನ್ ಧ್ರುವನಾರಾಯಣ್, ವಿನಯ್ ಕುಲಕರ್ಣಿ, ಎಂಎಲ್‌ಸಿಗಳಾದ ಎ.ಹೆಚ್.ವಿಶ್ವನಾಥ್, ಡಾ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ ಆಗಮಿಸುವರು ಸಚಿವ ಡಾ.ಎಚ್.ಸಿ. ಮಹದೇವಪ್ಪ ಅಧ್ಯಕ್ಷತೆ ವಹಿಸುವರು ಎಂದು ಅವರು ತಿಳಿಸಿದ್ದಾರೆ.

ಅಂದು ಮಧ್ಯಾಹ್ನ 2.30ಕ್ಕೆ ನಡೆಯುವ ವಿಚಾರಗೋಷ್ಠಿಯಲ್ಲಿ ವಚನಗಳಲ್ಲಿ ಪರಿಸರ ಪ್ರಜ್ಞೆ ಕುರಿತು ನಂದಿವೇರಿ ಸಂಸ್ಥಾನ ಮಠದ ಶಿವಕುಮಾರ ಸ್ವಾಮೀಜಿ, ವಚನ ಸಾಹಿತ್ಯದಲ್ಲಿ ಜ್ಞಾನ ವಿಜ್ಞಾನ ಕುರಿತು ಮಹೇಶ್ ಚಟ್ನಳ್ಳಿ ಮಾತನಾಡುವರು. ಡಾ.ಶ್ರೀ ಶರತ್ ಚಂದ್ರ ಸ್ವಾಮೀಜಿ ಅಧ್ಯಕ್ಷತೆ ವಹಿಸುವರು. ಸಂಜೆ 4.30ಕ್ಕೆ ನಡೆಯಲಿರುವ ಸಾಂಸ್ಕೃತಿಕ ಕಾರ್ಯಕ್ರಮವನ್ನು ರಂಗಾಯಣ ಮಾಜಿ ನಿರ್ದೇಶಕ ಅಡ್ಡಂಡ ಕಾರ್ಯಪ್ಪ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಗಾನಭಾರತಿ ಜಂಟಿ ನಿರ್ದೇಶಕಿ ಕೃಪಾ ಫಡ್ಕೆ ಭಾಗವಹಿಸುವರು. ಅಪೇಕ್ಷಾ ಜಿ.ದೇವನೂರು ಮತ್ತು ತಂಡದವರಿಂದ ವಚನರೂಪಕ ಭರತನಾಟ್ಯ ಮತ್ತು ಸಂಜೆ 6.30ಕ್ಕೆ ಮೋಳಿಗೆ ಮಾರಯ್ಯ ನಾಟಕ ಪ್ರದರ್ಶನಗೊಳ್ಳಲಿದೆ ಎಂದರು.

ಮೇ 25ರಂದು ಬೆಳಗ್ಗೆ 9ಕ್ಕೆ ಸಮೂಹ ವಚನ ಗಾಯನ, ಸಾಂಸ್ಕೃತಿಕ ಕಾರ್ಯಕ್ರಮವನ್ನು ಉಕ್ಕಿನ ಕಂತೆಮಠದದ ಸಾಂಬಾಸದಾಶಿವ ಸ್ವಾಮೀಜಿ ಸಮ್ಮುಖದಲ್ಲಿ ದಾವಣಗೆರೆ ಸಂಸದರಾದ ಪ್ರಭಾ ಮಲ್ಲಿಕಾರ್ಜುನ್ ಉದ್ಘಾಟಿಸುವರು. ವಿಶೇಷ ಆಹ್ವಾನಿತರಾಗಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಿಳಾ ಘಟಕದ ಅಧ್ಯಕ್ಷೆ ವೀಣಾ ಕಾಶಪ್ಪನವರ್ ಆಗಮಿಸುವರು. ರಾಜ್ಯ ಮಹಿಳಾ ಘಟಕದ ಅಧ್ಯಕ್ಷೆ ಮುಕ್ತಾಂಬ ಮುಖ್ಯ ಅತಿಥಿಯಾಗಿ ಭಾಗವಹಿಸುವರು. ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅಧ್ಯಕ್ಷತೆ ವಹಿಸುವರು.

ಮಧ್ಯಾಹ್ನ 2 ಗಂಟೆಯ ವಿಚಾರ ಗೋಷ್ಠಿಯಲ್ಲಿ ಪ್ರೊ.ಡಿ.ವಿ.ವಸಂತಕುಮಾರ್ ಹಾಗೂ ಪ್ರೊ.ಕವಿತಾ ರೈ ಮಾತನಾಡುವರು. ಮೊರಬದ ಮಲ್ಲಿಕಾರ್ಜುನ ಅಧ್ಯಕ್ಷತೆ ವಹಿಸುವರು. ಸಂಜೆ 4.30ಕ್ಕೆ ನಡೆಯಲಿರುವ ಸಮಾರೋಪ ಸಮಾರಂಭದಲ್ಲಿ ದೇಗುಲ ಮಠದ ಚನ್ನಬಸವ ಸ್ವಾಮೀಜಿಯವರ ಸಮ್ಮುಖದಲ್ಲಿ ಡಾ.ಮಹೇಂದ್ರ ಮೂರ್ತಿ ಸಂಪಾದಕತ್ವದ ಸಾಂಸ್ಕೃತಿಕ ನಾಯಕ ಜಗಜ್ಯೋತಿ ಬಸವೇಶ್ವರರು ಎಂಬ ಕೃತಿಯನ್ನು ಸಾಲೂರು ಬೃಹನ್ಮಠದ ಡಾ.ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಬಿಡುಗಡೆ ಮಾಡುವರು. ಲೋಕಾಯುಕ್ತ ಬಿ.ಎಸ್.ಪಾಟೀಲ್ ಮುಖ್ಯ ಭಾಷಣ, ಬಿ.ವೈ.ವಿಜಯೇಂದ್ರ ಸಮಾರೋಪ ಭಾಷಣ ಮಾಡುವರು. ಮುಖ್ಯ ಅತಿಥಿಗಳಾಗಿ ಸಂಸದ ಸುನೀಲ್ ಬೋಸ್, ಶಂಕರ ಮಹಾದೇವ ಬಿದರಿ, ಅಶೋಕ್ ಖೇಣಿ ಭಾಗವಹಿಸುವರು. ಸಚಿವ ಬಿ.ಈಶ್ವರ್ ಖಂಡ್ರೆ ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು.

ಇಂದಿನಿಂದ ಸಿಎಂ ಸಿದ್ದರಾಮಯ್ಯ ಮೈಸೂರು ಪ್ರವಾಸ

ದೇವನೂರು ಮಹದೇವ ಅವರ ಎದೆಗೆ ಬಿದ್ದ ಅಕ್ಷರ ನಾಟಕ ವೀಕ್ಷಣೆ




ಮೈಸೂರು, ಮೇ22(ಬಿಎಲ್‌ಯು)–ನಾಳೆಯಿಂದ ಮೈಸೂರು ಜಿಲ್ಲೆಯಲ್ಲಿ ಎರಡು ದಿನಗಳ ಪ್ರವಾಸ ಕೈಗೊಳ್ಳುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಮೇ 24ರಂದು ಖ್ಯಾತ ಸಾಹಿತಿ ದೇವನೂರು ಮಹದೇವ ಅವರ ಪುಸ್ತಕ ಆಧಾರಿತ ಎದೆಗೆ ಬಿದ್ದ ಅಕ್ಷರ ನಾಟಕ ವೀಕ್ಷಣೆ ಮಾಡುವರು.

ಸಿದ್ದರಾಮಯ್ಯ ಅವರು ಮೇ 23 ರಂದು ಬೆಳಿಗ್ಗೆ 11.30 ಗಂಟೆಗೆ ಹೆಲಿಕಾಪ್ಟರ್ ಮೂಲಕ ಕೆ.ಆರ್.ನಗರದ ಹೆಲಿಪ್ಯಾಡ್‌ಗೆ ಆಗಮಿಸುವರು. ಕೆ.ಆರ್.ನಗರದ ರೇಡಿಯೋ ಮೈದಾನದಲ್ಲಿ ವಿವಿಧ ಅಭಿವೃದ್ಧಿ ಕಾರ್ಯಗಳಿಗೆ ಶಂಕುಸ್ಥಾಪನೆ ನೆರವೇರಿಸುವರು. ಕೆ.ಆರ್.ನಗರದಿಂದ ಹೆಲಿಕಾಪ್ಟರ್‌ನಲ್ಲಿ ಹೊರಟು 3.50 ಗಂಟೆಗೆ ಮೈಸೂರು ನಗರಕ್ಕೆ ಆಗಮಿಸುವರು. ಮೈಸೂರಿನ ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ರಾಜ್ಯದ ಜಿಲ್ಲಾ ಆಸ್ಪತ್ರೆಗಳಲ್ಲಿ ಕಿಮೋಥೆರಪಿ ಚಿಕಿತ್ಸಾ ಕೇಂದ್ರಗಳ ಉದ್ಘಾಟನೆ ನೆರವೇರಿಸುವರು. ಮೇ 23ರಂದು ಮೈಸೂರು ನಗರದಲ್ಲೆ ವಾಸ್ತವ್ಯ ಹೂಡುವ ಸಿದ್ದರಾಮಯ್ಯ ಅವರು, ಮೇ 24ರಂದು ನಗರದ ಕಲಾಮಂದಿರದಲ್ಲಿ ಬಸವ ಬಳಗಗಳ ಒಕ್ಕೂಟ ಆಯೋಜಿಸಿರುವ ಬಸವ ಜಯಂತಿಯ ನಮ್ಮ ನಡೆ ಅನುಭವ ಮಂಟಪದ ಕಡೆ ಕಾರ್ಯಕ್ರಮ ಉದ್ಘಾಟಿಸುವರು. ಸಂಜೆ 4 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಉದ್ಘಾಟನೆ ನೆರವೇರಿಸುವರು. ತರುವಾಯ ಕಲಾಮಂದಿರದಲ್ಲಿ ಸಂಜೆ 6 ಗಂಟೆಗೆ ಆಯೋಜಿಸಿರುವ ಎದೆಗೆ ಬಿದ್ದ ಅಕ್ಷರ ನಾಟಕವನ್ನು ಸಿದ್ದರಾಮಯ್ಯ ವೀಕ್ಷಣೆ ಮಾಡುವರು.



ಎದೆಗೆ ಬಿದ್ದ ಅಕ್ಷರ ನಾಟಕದ ದೃಶ್ಯ



ದೇಮ

ಈ ಎಲ್ಲಾ ಕಾರ್ಯಕ್ರಮದಲ್ಲಿ ಪಾಲ್ಗೊಂಡ ನಂತರ ಅಂದು ರಾತ್ರಿ 8 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳುವರು.

ವರಕೋಡು ಗ್ರಾಪಂಗೆ ಶಿವಣ್ಣ ಅಧ್ಯಕ್ಷರಾಗಿ ಆಯ್ಕೆ



ಮೈಸೂರು ತಾಲೂಕು ವರಕೋಡು ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಶಿವಣ್ಣ ಅವಿರೋಧವಾಗಿ ಆಯ್ಕೆಯಾದರು.

ಮೈಸೂರು, ಮೇ 22– ಮೈಸೂರು ತಾಲೂಕು ವರಕೋಡು ಗ್ರಾಮ ಪಂಚಾಯಿತಿ ನೂತನ ಅಧ್ಯಕ್ಷರಾಗಿ ಶಿವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಒಪ್ಪಂದದಂತೆ ಈ ಹಿಂದಿನ ಅಧ್ಯಕ್ಷರು ರಾಜೀನಾಮೆ ನೀಡಿದ್ದರಿಂದ ತೆರವಾಗಿದ್ದ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶಿವಣ್ಣ ಅವರು ಬಿಟ್ಟರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಶಿವಣ್ಣ ಅವಿರೋಧ ಆಯ್ಕೆ ಎಂದು ಘೋಷಿಸಲಾಯಿತು.

ಶಿವಣ್ಣ ಅವರ ಆಯ್ಕೆಯನ್ನು ಘೋಷಿಸುತ್ತಿದ್ದಂತೆ ಗ್ರಾಪಂ ಸದಸ್ಯರು ಮತ್ತು ಗ್ರಾಮಸ್ಥರು ಗ್ರಾಮದಲ್ಲಿ ಪಟಾಕಿ ಸಿಡಿಸಿ, ಸಿಹಿ ಹಂಚಿ ವಿಜಯೋತ್ಸವ ಆಚರಿಸಿದರು.

ತಾಪಂ ಸದಸ್ಯರಾದ ಎಂ.ಟಿ.ರವಿಕುಮಾರ್, ಮುದ್ದರಾಮೇಗೌಡ, ಮಂಜುಳ ಮರೀಗೌಡ, ಗ್ರಾಪಂ ಮಾಜಿ ಅಧ್ಯಕ್ಷ ವಿ.ಸಿ.ಬಸವರಾಜು, ಕೃಷ್ಣ ದೊಡ್ಡರಾಮೇಗೌಡ, ಬೀರಪ್ಪ, ಸಣ್ಣತಾಯಮ್ಮ, ಸದಸ್ಯರಾದ ಶಿವರಾಜು, ಸುಮಾ ರವಿ, ರತ್ನಮ್ಮ ರಾಜು, ಮಾಜಿ ಉಪಾಧ್ಯಕ್ಷೆ ಮಹದೇವಮ್ಮ, ಶಂಕರ್, ಉಪಾಧ್ಯಕ್ಷೆ ಸುಮಿತ್ರಾ ಸುಬ್ಬಮ್ಮ, ರಾಜಮ್ಮ ಸಿದ್ದೇಗೌಡ, ರಾಧ ಮಹದೇವು, ಗ್ರಾಮದ ಯಜಮಾನರಾದ ಗುರು ಮಠದ ಗುರುಸ್ವಾಮಪ್ಪ, ವಿ.ಸಿ. ರಮೇಶ್, ಅಪ್ಪಯ್ಯನ ಮರೀಗೌಡ, ಮಲ್ಲೇಗೌಡ, ಮೋಳಯ್ಯನ ಪ್ರಕಾಶ್, ಭಾವನ ರವಿ, ಭಾಗ್ಯಮ್ಮ, ಬಸವಯ್ಯ, ಕುಂಬಾರ ಕುಮಾರ್, ಮುಖಂಡರಾದ ಸಿ ಉಮೇಶ್, ಮಹದೇವು, ತಂಬಡೀಗೌಡ, ರವಿ, ರಾಮಚಂದ್ರೇಗೌಡ, ಚನ್ನಪ್ಪ, ಗುರುಮಲ್ಲಪ್ಪ, ಕುಮಾರ್, ಚಂದ್ರು, ದೊಡ್ಡರಾಮೇಗೌಡ, ಕೆ.ಆರ್.ಸಿದ್ದರಾಮೇಗೌಡ, ಸೊಸೈಟಿ ಅಧ್ಯಕ್ಷ ಕರೀಗೌಡ, ಚಿಕ್ಕಂಡು, ಚಿಕ್ಕಣ್ಣ, ಉಮೇಶ್, ಸಾಕಪ್ಪ ಗ್ರಾಮಸ್ಥರು ಉಪಸ್ಥಿತರಿದ್ದು, ವಿಜೇತರನ್ನು ಅಭಿನಂದಿಸಿದರು.

ಮುಸ್ಲಿಂರು, ಪಾಕಿಸ್ತಾನ ಇಲ್ಲವೆಂದರೆ ಬಿಜೆಪಿಗೆ ಅಸ್ತಿತ್ವವೇ ಇಲ್ಲ

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಟೀಕೆ



ಮೈಸೂರು, ಮೇ22(ಬಿಎಲ್‌ಯು)– ಮುಸ್ಲಿಂರು ಹಾಗೂ ಪಾಕಿಸ್ತಾನ ಇಲ್ಲವೆಂದರೆ ಬಿಜೆಪಿಗೆ ಅಸ್ತಿತ್ವವೇ ಇಲ್ಲ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಟೀಕಿಸಿದ್ದಾರೆ.

ನಗರದ ಕಾಂಗ್ರೆಸ್ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ತಮ್ಮ ಓಟ್ ಬ್ಯಾಂಕ್ ರಾಜಕಾರಣಕ್ಕಾಗಿ ಪಾಕಿಸ್ತಾನ ಮತ್ತು ಮುಸಲ್ಮಾನರನ್ನು ಬಿಜೆಪಿಯವರು ಬಳಸಿಕೊಳ್ಳುತ್ತಿದ್ದಾರೆ ಎಂದರು.

ಕೇಂದ್ರದ ಬಿಜೆಪಿ ಸರ್ಕಾರ ಇಡಿ, ಸಿಬಿಐ ಸೇರಿದಂತೆ ಇತರೆ ಸ್ವತಂತ್ರ ಏಜೆನ್ಸಿಗಳನ್ನು ತಮ್ಮ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿದೆ. ಈಗ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರ ಶಿಕ್ಷಣ ಸಂಸ್ಥೆಗಳ ಮೇಲೆ ಇಡಿ ದಾಳಿ ಮಾಡಿದೆ. ಅವ್ಯವಹಾರ ನಡೆದಿದೆ ಎಂದು ಯಾರಾದರೂ ದೂರು ನೀಡಿದರೆ ಮಾತ್ರ ದಾಳಿ ನಡೆಸಬೇಕೇ ಹೊರತು, ಸ್ವಯಂ ಪ್ರೇರಣೆಯಿಂದ ದಾಳಿ ಮಾಡಲು ಇಡಿಗೆ ಅಧಿಕಾರವಿಲ್ಲ ಎಂದು ಲಕ್ಷ್ಮಣ್ ಸ್ಪಷ್ಟಪಡಿಸಿದರು.

ಡಾ.ಪರಮೇಶ್ವರ್ ಅವರ ಶಿಕ್ಷಣ ಸಂಸ್ಥೆಗಳಲ್ಲಿ ಏನಾದರೂ ಭ್ರಷ್ಟಾಚಾರ ನಡೆದಿದ್ದರೆ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಸರ್ಕಾರದ ಇಲಾಖೆಗಳು ಮೊದಲು ತನಿಖೆ ಮಾಡುತ್ತವೆ. ಆದರೆ ಇಡಿಯವರು ನೇರವಾಗಿ ತನಿಖೆ ನಡೆಸಲು ಅವಕಾಶ ಇಲ್ಲ. ಆದರೂ ದಾಳಿ ಮಾಡಿದ್ದಾರೆ ಎಂದರು.

ಡಾ.ಪರಮೇಶ್ವರ್ ಅವರ ತಂದೆ ಕಾಲದಿಂದಲೂ ಶಿಕ್ಷಣ ಸಂಸ್ಥೆ ನಡೆಸಿಕೊಂಡು ಬರುತ್ತಿದ್ದಾರೆ. ಆದರೆ ಕೇಂದ್ರದ ಬಿಜೆಪಿ ಸರ್ಕಾರ ದಲಿತರನ್ನು ಟಾರ್ಗೆಟ್ ಮಾಡಿ ಇಂತಹ ದಾಳಿ ನಡೆಸಿದೆ. ಕರ್ನಾಟಕದ ಇನ್ನು ಏಳೆಂಟು ದಲಿತ ಶಾಸಕರು ಹಾಗೂ ಸಚಿವರ ಮೇಲೆ ಇದೇ ಮಾದರಿ ದಾಳಿ ಮಾಡುವ ಸಾಧ್ಯತೆ ಇದೆ ಎಂದು ಬಲ್ಲ ಮೂಲಗಳು ತಿಳಿಸಿವೆ ಎಂದರು.

ದೇಶದಲ್ಲಿ ಇಡಿ ಈ ತನಕ 28.,878 ಪ್ರಕರಣಗಳಲ್ಲಿ ದಾಳಿ ಮಾಡಿದೆ. ಇದರಲ್ಲಿ ಶೇಕಡ 98 ರಷ್ಟು ಪರ್ಸೆಂಟ್ ವಿರೋಧ ಪಕ್ಷಗಳನ್ನು ಟಾರ್ಗೆಟ್ ಮಾಡಲಾಗಿದೆ. 982 ಪ್ರಕರಣಗಳಲ್ಲಿ ಚಾರ್ಜ್‌ಶೀಟ್ ಹಾಕಲಾಗಿದ್ದು, ಕೇವಲ 23 ಪ್ರಕರಣದಲ್ಲಿ ಮಾತ್ರ ತಪ್ಪಿತಸ್ಥರಿಗೆ ಶಿಕ್ಷೆಯಾಗಿದೆ ಎಂದು ಮಾಹಿತಿ ನೀಡಿದರು. ಈಗ ಪರಿಶಿಷ್ಟ ಜಾತಿ ಗಣತಿ ನಡೆಯುತ್ತಿದ್ದು, ವರದಿ ಬಂದ ನಂತರ ಎಲ್ಲರೂ ಕಾಂಗ್ರೆಸ್ ತೆಕ್ಕೆಗೆ ಹೋಗಲಿದ್ದಾರೆ ಎಂಬ ಲೆಕ್ಕಾಚಾರದಿಂದ ಕೇಂದ್ರ ಸರ್ಕಾರ ಇಂತಹ ದಾಳಿ ನಡೆಸುತ್ತಿದೆ ಎಂದು ಲಕ್ಷ್ಮಣ ಆರೋಪಿಸಿದರು.

ಪ್ರತಾಪ್ ಸಿಂಹ ರಾತ್ರಿ 12 ಗಂಟೆ ತನಕ ಡಿ.ಕೆ.ಶಿವಕುಮಾರ್ ಮನೆ ಬಾಗಿಲು ಕಾಯುತ್ತಿದ್ದರು!

ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸಿದ್ದರಾಮಯ್ಯ ಅವರನ್ನು ಟೀಕಿಸುವ ಮಾಜಿ ಸಂಸದ ಪ್ರತಾಪ್ ಸಿಂಹ ಇತ್ತೀಚಿಗೆ ರಾತ್ರಿ 12 ಗಂಟೆ ತನಕ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮನೆ ಬಾಗಿಲು ಕಾಯುತ್ತಿದ್ದರೇಕೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಪ್ರಶ್ನಿಸಿದರು.

ಪ್ರತಾಪ್ ಸಿಂಹ ಡಿ.ಕೆ.ಶಿವಕುಮಾರ್ ಮನೆ ಕಾಯುತ್ತಿದ್ದ ಬಗ್ಗೆ ಸಿಸಿಟಿವಿ ಫುಟೇಜ್ ಇದೆ. ಯಾವ ಕಾರಣಕ್ಕೆ ಅಲ್ಲಿ ಕಾಯುತ್ತಿದ್ದರು ಎಂಬ ಬಗ್ಗೆ ಶೀಘ್ರದಲ್ಲೇ ವಿವರ ನೀಡುತ್ತೇನೆ. ಮಲ್ಲಿಕಾರ್ಜುನ ಖರ್ಗೆ ಅವರು ನಮ್ಮ ಪಾಕಿಸ್ತಾನ ಎಂದು ಹೇಳಿಲ್ಲ. ಆದರೆ ಪ್ರತಾಪ್ ಸಿಂಹ, ಖರ್ಗೆ ಅವರ ಮಾತನ್ನು ತಿರುಚಿ ಹೇಳುತ್ತಿದ್ದಾರೆ. ಖರ್ಗೆ ಅವರನ್ನು ಪಪ್ಪು ಎಂದು ಕರೆದಿದ್ದಾರೆ. ಮಲ್ಲಿಕಾರ್ಜುನ ಖರ್ಗೆ ಮುತ್ಸದ್ದಿ ರಾಜಕಾರಣಿ, ಅವರಿಗೆ ಅನುಭವ ಆಗಿರುವಷ್ಟು ಪ್ರತಾಪ್ ಸಿಂಹಗೆ ವಯಸ್ಸಾಗಿಲ್ಲ. ವಾಸ್ತವತೆ ತಿಳಿಯದೆ ಬಾಯಿಗೆ ಬಂದಂತೆ ಮಾತನಾಡಿದ್ದಾರೆ ಎಂದು ಕಿಡಿಕಾರಿದರು.

ಪ್ರತಾಪ್ ಸಿಂಹ ಹೀಗೆ ಅಸಂಬದ್ಧವಾಗಿ ಮಾತಾಡಿದರೆ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು ಸಚಿವ ಪ್ರಿಯಾಂಕ್ ಖರ್ಗೆಯನ್ನು ನಾಯಿಗೆ ಹೋಲಿಸಿದ್ದಾರೆ. ಇವರು ಎಲ್ಲೆ ಹೋದರು ಮುತ್ತಿಗೆ ಹಾಕುವಂತೆ ಕಾಂಗ್ರೆಸ್ ಕಾರ್ಯಕರ್ತರಿಗೆ ಕರೆ ನೀಡಿದ್ದೇನೆ ಎಂದು ಲಕ್ಷ್ಮಣ್ ತಿಳಿಸಿದರು.

ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ ನಾಳೆ

ಮೈಸೂರು, ಮೇ 22– ಮೈಸೂರಿನ ಶ್ರೀ ಜಯದೇವ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯೋವಾಸ್ಕುಲರ್ ಸೈನ್ಸಸ್ ಮತ್ತು ಸಂಶೋಧನಾ ವತಿಯಿಂದ ಮೇ 24ರಂದು ಮಧ್ಯಾಹ್ನ 2 ಗಂಟೆಗೆ ಜಯದೇವ ಆಸ್ಪತ್ರೆ ಆವರಣದಲ್ಲಿ ಅಂತರರಾಷ್ಟ್ರೀಯ ಶುಶ್ರೂಷಕರ ದಿನಾಚರಣೆ ಹಮ್ಮಿಕೊಳ್ಳಲಾಗಿದೆ. ಜಯದೇವ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ಅಧ್ಯಕ್ಷತೆ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಮೈಸೂರು ಮೆಡಿಕಲ್ ಕಾಲೇಜಿನ ಸರ್ಕಾರಿ ನರ್ಸಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಡಾ.ಪಿ.ನಂದಪ್ರಕಾಶ್ ಮತ್ತು ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನ ಪ್ರಿನ್ಸಿಪಾಲ್ ಡಿ.ಎನ್. ರೇಣುಕಾದೇವಿ ಭಾಗವಹಿಸಲಿದ್ದಾರೆ.

ಇಂದು ಮೈಸೂರಲ್ಲಿ ದಕ್ಷಿಣ ಅಯೋಧ್ಯೆ ಮಂದಿರ ನಿರ್ಮಾಣಕ್ಕೆ ಚಾಲನೆ

ದಕ್ಷಿಣದಲ್ಲೂ ಸೌಹಾರ್ದ ಹಾಳು ಮಾಡಲು ಹುನ್ನಾರ

ಅಂಬೇಡ್ಕರ್ ಅನುಯಾಯಿಗಳಿಂದ ಪ್ರತಿಭಟನೆಗೆ ಸಜ್ಜು



ಪುರುಷೋತ್ತಮ್

ಮೈಸೂರು, ಮೇ22(ಜಿಎ)–ಮೈಸೂರಿನ ಹಾರೋಹಳ್ಳಿಯಲ್ಲಿ ದಕ್ಷಿಣ ಅಯೋಧ್ಯೆ ಮಂದಿರ ಕಟ್ಟುವ ಮೂಲಕ ದಕ್ಷಿಣದಲ್ಲಿಯೂ ಸೌಹಾರ್ದ ಹಾಳು ಮಾಡುವ ಹುನ್ನಾರ ನಡೆಯುತ್ತಿದೆ ಎಂದು ಮಾಜಿ ಮೇಯರ್ ಪುರುಷೋತ್ತಮ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಯೋಧ್ಯೆಯ ರಾಮಮಂದಿರದ ಬಾಲರಾಮನ ವಿಗ್ರಹ ಕೆತ್ತನೆಗೆ ಹಾರೋಹಳ್ಳಿಯಲ್ಲಿ ಕಲ್ಲು ಸಿಕ್ಕಿದೆ ಎಂದು ಆ ಸ್ಥಳದಲ್ಲಿ ಮೇ23ರಂದು ಪೇಜಾವರ ಶ್ರೀಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ, ಶಾಸಕ ಜಿ.ಟಿ.ದೇವೇಗೌಡ ಹಾಗೂ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ದಕ್ಷಿಣ ಅಯೋಧ್ಯೆ ಮಾಡಲು ಮುಂದಾಗಿರುವುದಕ್ಕೆ ಅಂಬೇಡ್ಕರ್ ಅನುಯಾಯಿಗಳಿಂದ ತೀವ್ರ ವಿರೋಧವಿದೆ. ಇದರ ವಿರುದ್ಧ ಪ್ರತಿಭಟನೆ ಕೂಡ ನಡೆಸುತ್ತೇವೆ ಎಂದರು.


ಈ ಜಾಗದ ಮಾಲೀಕ ಹೆಚ್.ರಾಮದಾಸ್ ಅವರಿಗೆ ಆಸೆ ತೋರಿಸಿ ದೇವಾಲಯ ನಿರ್ಮಾಣ ಮಾಡಲು ಮುಂದಾಗುತ್ತಿದ್ದಾರೆ. ಆದರೆ, ಈ ಸ್ಥಳದಲ್ಲಿ ನಾವು ನಳಂದ ವಿವಿ ಹಾಗೂ ಶಿಕ್ಷಣ ಸಂಸ್ಥೆ ನಿರ್ಮಾಣ ಮಾಡಲು ಚಿಂತನೆ ನಡೆಸಿ, ಸರ್ವೆ ನಂಬರ್ 196, 197ರ ಮಾಲೀಕರ ಬಳಿ ಅನುಮತಿ ಪಡೆದುಕೊಂಡಿದ್ದೇವೆ. ಅದಕ್ಕೆ ಅವರು ಸಮ್ಮತಿ ಸೂಚಿಸಿದ್ದಾರೆ. ಹಾರೋಹಳ್ಳಿಯ ಈ ಸ್ಥಳದಲ್ಲಿ ಕಲ್ಲು ಸಿಕ್ಕಿರುವುದಕ್ಕೆ ಯಾವುದೇ ದಾಖಲೆ ಇಲ್ಲ. ಜನರ ದಿಕ್ಕು ತಪ್ಪಿಸಿ ಈ ರೀತಿ ಒಂದು ಸಮುದಾಯದ ಅಸ್ತಿತ್ವ ನಾಶ ಮಾಡಲು ಮುಂದಾಗುತ್ತಿದ್ದಾರೆ ಎಂದು ಕಿಡಿಕಾರಿದರು.

ನಮಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಭೂಮಿ ನೀಡಿರುವುದು. ಆದರೆ, ಮೈಸೂರು–ಕೊಡಗು ಸಂಸದರು ಈ ರೀತಿ ಮಾಡುತ್ತಿರುವುದು ಸರಿಯಲ್ಲ. ಬೇಕಿದ್ದರೆ ಶಾಸಕ ಜಿ.ಟಿ.ದೇವೇಗೌಡರು ಮತ್ತು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ತಮ್ಮ ಜಾಗದಲ್ಲಿ ಮಂದಿರ ನಿರ್ಮಾಣ ಮಾಡಿಕೊಳ್ಳಲಿ. ಈ ಸ್ಥಳದಲ್ಲಿ ನಿರ್ಮಾಣ ಮಾಡಲು ಬಿಡುವುದಿಲ್ಲ. ಈಗಾಗಲೇ ರಾಜ್ಯದಾದ್ಯಂತ ಈ ದೇವಾಲಯ ನಿರ್ಮಾಣ ವಿರೋಧಿಸಿ ಪ್ರತಿಭಟನೆ ಮಾಡಲು ಕರೆ ನೀಡಲಾಗಿದೆ. ಶುಕ್ರವಾರ ನೂರಾರು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಹಾರೋಹಳ್ಳಿ ಸುರೇಶ್, ನಟರಾಜು, ತುಂಬಲಾ ರಾಮಣ್ಣ ಮತ್ತಿತರರು ಉಪಸ್ಥಿತರಿದ್ದರು.

ಮೇ 25ರಂದು 'ವಿಸ್ಮಯ 25ರ ಬೆಳ್ಳಿ ಬೆರಗು'

ಕಲಾಚಿತ್ರಗಳ ಪ್ರದರ್ಶನ, ವಿಸ್ಮಯ ಮಾಧ್ಯಮ ಪ್ರೀತಿ, ವಿಸ್ಮಯ ಸಮಾಜ ಸೇವೆ, ವಿಸ್ಮಯ ಧಾರ್ಮಿಕ ಪ್ರೀತಿ, ವಿಸ್ಮಯ ಕಲಾ ಪ್ರೀತಿ ಕಾರ್ಯಕ್ರಮಗಳು



ಸುದ್ದಿಗೋಷ್ಠಿಯಲ್ಲಿ ಪ್ರೊ.ಕೃಷ್ಣೇಗೌಡ ಮಾತನಾಡಿದರು.

ಮೈಸೂರು, ಮೇ22(ಜಿಎ)–ಮೈಸೂರಿನ ವಿಸ್ಮಯ ಬಳಗದ ವತಿಯಿಂದ ಮೇ 25ರಂದು ಬೆಳಿಗ್ಗೆ 10 ಗಂಟೆಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ 'ವಿಸ್ಮಯ 25ರ ಬೆಳ್ಳಿ ಬೆರಗು' ಕಾರ್ಯಕ್ರಮವನ್ನು 5 ಸಂಪುಟಗಳಲ್ಲಿ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಬಳಗದ ಸದಸ್ಯರಾದ ಪ್ರೊ.ಎಂ.ಕೃಷ್ಣೇಗೌಡ ಈ ವಿಷಯ ತಿಳಿಸಿ, ವಿಸ್ಮಯ ಸಂಸ್ಥಾಪಿಸಿರುವ ಪ್ರಕಾಶ್ ಚಿಕ್ಕಪಾಳ್ಯ ಅವರು ವಿಸ್ಮಯ ಸಂಸ್ಥೆಯು ಸಮಾರಂಭ, ಉತ್ಸವಗಳ ಆಯೋಜನೆ. ಜಾಹೀರಾತು ನಿರ್ವಹಣೆ, ಪುಸ್ತಕ ಪ್ರಕಟಣೆ, ಒಳಾಂಗಣ ಅಲಂಕಾರ, ಸಿನಿಮಾಗಳ ಕಲಾ ನಿರ್ದೇಶನ, ಪುಸ್ತಕ ಪ್ರಕಾಶನ ಹೀಗೆ ಹಲವು ಕ್ಷೇತ್ರಗಳಲ್ಲಿ ಹಬ್ಬಿಕೊಂಡಿದ್ದು, ಈ ಸಂಸ್ಥೆಯ 25ನೇ ವರ್ಷದ ಬೆಳ್ಳಿಹಬ್ಬವನ್ನು ಬಳಗದಿಂದ ಅರ್ಥಪೂರ್ಣವಾಗಿ ಆಚರಿಸಲು ನಿರ್ಧರಿಸಲಾಗಿದೆ. ಈ ಸಮಾರಂಭದಲ್ಲಿ ಸುಮಾರು 2000 ಕ್ಕೂ ಹೆಚ್ಚು ಪ್ರಕಾಶ್ ಚಿಕ್ಕಪಾಳ್ಯ ಅವರ ಅಭಿಮಾನಿಗಳು, ಹಿತೈಷಿಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದರು.

ಅಂದು ಬೆಳಿಗ್ಗೆ 10 ಗಂಟೆಗೆ ಪ್ರಕಾಶ್ ಚಿಕ್ಕಪಾಳ್ಯ ಅವರ ಕಲಾಚಿತ್ರಗಳ ಪ್ರದರ್ಶನವನ್ನು ಗ್ರೀನ್ ಆಸ್ಕರ್ ಪ್ರಶಸ್ತಿ ಪುರಸ್ಕೃತರಾದ ಕೃಪಾಕರ ಸೇನಾನಿ ಅವರು ಉದ್ಘಾಟಿಸಲಿದ್ದಾರೆ. ವಿಸ್ಮಯ ಸಾಹಿತ್ಯ ಪ್ರೀತಿ ಕಾರ್ಯಕ್ರಮವನ್ನು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹಾಗೂ ಇತರೆ ಹರಗುರುಗಳ ಉಪಸ್ಥಿತಿಯಲ್ಲಿ ಅಂದು ಬೆಳಿಗ್ಗೆ 10.30ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಮಹದೇವಪ್ಪ ಅವರು ಉದ್ಘಾಟಿಸಲಿದ್ದಾರೆ. ಹಿರಿಯ ಸಾಹಿತಿ ಡಾ.ನರಹಳ್ಳಿ ಬಾಲಸುಬ್ರಮಣ್ಯಂ ಅಧ್ಯಕ್ಷತೆ ವಹಿಸುವರು. ಬೆಳ್ಳಿ ಬೆರಗು ಮಾಲಿಕೆಯಲ್ಲಿ ನಾಡಿನ ಖ್ಯಾತ ಲೇಖಕರ 12 ಪುಸ್ತಕಗಳನ್ನು ಡಾ.ನಾಗತಿಹಳ್ಳಿ ಚಂದ್ರಶೇಖರ್ ಅವರು ಲೋಕಾರ್ಪಣೆ ಮಾಡಲಿದ್ದಾರೆ.

ಅಂದು ಮಧ್ಯಾಹ್ನ 12ಕ್ಕೆ ನಡೆಯಲಿರುವ ವಿಸ್ಮಯ ಮಾಧ್ಯಮ ಪ್ರೀತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಪತ್ರಕರ್ತ ರವೀಂದ್ರ ಭಟ್ಟ ವಹಿಸಲಿದ್ದು, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಯ ಸಂಸ್ಥಾಪಕ ಸಂಪಾದಕ ಕೆ.ಬಿ.ಗಣಪತಿ ಅವರು ವಿಸ್ಮಯ ಇಂಡಿಯಾ ಯೂ–ಟ್ಯೂಬ್ ವಾಹಿನಿಗೆ ಚಾಲನೆ ನೀಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಿವಾನಂದ ತಗಡೂರು, ಸುದರ್ಶನ ಚನ್ನಂಗಿಹಳ್ಳಿ, ರವಿ ಹೆಗಡೆ, ಎನ್.ಕೆ.ಚನ್ನೇಗೌಡ, ರವಿ ಕೋಟಿ ಹಾಗೂ ಅಂಶಿ ಪ್ರಸನ್ನಕುಮಾರ್ ಅವರುಗಳು ಭಾಗವಹಿಸಲಿದ್ದಾರೆ. ಇದೇ ಸಂದರ್ಭದಲ್ಲಿ ಮಾಧ್ಯಮ ವಲಯದ ಲೇಖಕರುಗಳ ಒಟ್ಟು ಏಳು ಪುಸ್ತಕಗಳು ಬಿಡುಗಡೆಯಾಗಲಿವೆ ಎಂದು ತಿಳಿಸಿದರು.

ಮಧ್ಯಾಹ್ನ 2.30ರಿಂದ ನಡೆಯಲಿರುವ ವಿಸ್ಮಯ ಸಮಾಜ ಪ್ರೀತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕ ಜಿ.ಟಿ. ದೇವೇಗೌಡರು ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಎಂಎಲ್‌ಸಿ ಹೆಚ್.ವಿಶ್ವನಾಥ್, ಸಂಸದ ಸುನಿಲ್ ಬೋಸ್, ಶಾಸಕರಾದ ಡಿ.ರವಿಶಂಕರ್, ಕೆ.ಹರೀಶ್‌ಗೌಡ, ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ, ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್. ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಎಸ್.ಬಾಲರಾಜು, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಮತ್ತಿತರ ರಾಜಕೀಯ ಗಣ್ಯರು ಭಾಗವಹಿಸಲಿದ್ದಾರೆ. ಈ ಸಂದರ್ಭದಲ್ಲಿ ಸಿ.ಸಿ.ರಮೇಶ್ ಚಿಕ್ಕಪಾಳ್ಯ, ಡಾ.ಕೆ.ಜಿ ಶ್ರೀಕಲಾ ಹಾಗೂ ಪೂರ್ಣಿಮಾ ರಮೇಶ್ ಅವರನ್ನು ಅಭಿನಂದಿಸಲಾಗುವುದು ಎಂದು ತಿಳಿಸಿದರು.

ಶ್ರೀ ಆದಿಚುಂಚನಗಿರಿ ಮಠಾಧೀಶರಾದ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ಅಂದು ಸಂಜೆ 4.30ರಿಂದ ನಡೆಯಲಿರುವ ವಿಸ್ಮಯ ಧಾರ್ಮಿಕ ಪ್ರೀತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೃಷಿ ಸಚಿವ ಎನ್.ಚೆಲುವರಾಯಸ್ವಾಮಿ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿಶೇಷವಾಗಿ ವಿಸ್ಮಯ ಪ್ರಶಸ್ತಿ ಪುರಸ್ಕಾರವನ್ನು ನಾಡಿನ ಶ್ರೇಷ್ಠ ಸಾಧಕರಿಗೆ ನೀಡಿ ಗೌರವಿಸಲಾಗುತ್ತಿದೆ. ಹಿರಿಯ ಕವಿ ಕೆ.ಸಿ.ಶಿವಪ್ಪ, ಶಿಲ್ಪಿ ಅರುಣ್ ಯೋಗಿರಾಜ್, ಸಂಗೀತ ನಿರ್ದೇಶಕರಾದ ರವಿ ಬಸ್ರೂರು, ಮಣಿಕಾಂತ್ ಕದ್ರಿ, ಐಎಎಸ್ ಆಗಿ ಆಯ್ಕೆಗೊಂಡ ಅಭ್ಯರ್ಥಿ ಎ.ಸಿ.ಪ್ರೀತಿ ಅವರಿಗೆ ವಿಸ್ಮಯ ಪ್ರಶಸ್ತಿ ನೀಡಿ ಸನ್ಮಾನಿಸಲಾಗುತ್ತಿದೆ. ಮುಖ್ಯ ಅತಿಥಿಗಳಾಗಿ ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ರಮೇಶ್‌ಬಾಬು ಬಂಡಿಸಿದ್ದೇಗೌಡ, ಜಿ.ಡಿ. ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಗಣಿಗ ರವಿ, ಎಂಎಲ್‌ಸಿ ದಿನೇಶ್ ಗೂಳೀಗೌಡ, ಮಾಜಿ ಸಚಿವ ಸಾ.ರಾ ಮಹೇಶ್, ಮಾಜಿ ಉಪಸಭಾಪತಿ ಮರಿತಿಬ್ಬೇಗೌಡರು ಭಾಗವಹಿಸಲಿದ್ದಾರೆ.

ಅಂದು ಸಂಜೆ 7ರಿಂದ ಪ್ರಾರಂಭವಾಗುವ ವಿಸ್ಮಯ ಕಲಾ ಪ್ರೀತಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಟಿ.ಎಸ್. ನಾಗಾಭರಣ ವಹಿಸಲಿದ್ದಾರೆ. ಹಂಸಲೇಖ, ಶಾಸಕ ಸಿ.ಪಿ.ಯೋಗೇಶ್ವರ್, ಲಹರಿ ವೇಲು, ರವಿ ಬಸ್ರೂರು, ಮಣಿಕಾಂತ್ ಕದ್ರಿ, ಮಂಡ್ಯ ರಮೇಶ್, ಶಮಿತಾ ಮಲ್ನಾಡ್, ಹಂಸಿಕಾ ಅಯ್ಯರ್, ಚಂದ್ರಪ್ರಭಾ.ಎನ್ ಲೋಕೇಶ್, ನವೀನ್ ಸಜ್ಜು, ರಾಮೇಗೌಡ, ಜಗ್ಗಪ್ಪ, ಡಾ.ಮಳವಳ್ಳಿ ಮಹಾದೇವಸ್ವಾಮಿ, ನರಸಿಂಹಮೂರ್ತಿ, ಸೂರಜ್ ಬೋಳಾರ್, ನಿತಿನ್ ರಾಜಾರಾಮ್ ಶಾಸ್ತ್ರಿ, ಹಂಸಿನಿ ಎಸ್ ಕುಮಾರ್, ಸಂಜಯ್ ವಿಜಯ್, ನಾಗೇಶ್ ಕಂದೇಗಾಲ, ಋತ್ವಿಕ್ ಮಂಜು, ಮಹೇಂದ್ರ, ಅಮ್ಮ ರಾಮಚಂದ್ರ, ದೇವಾನಂದ ಪ್ರಸಾದ್ ಹಾಗೂ ನಗಾರಿ ಮಂಜು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದರು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಡಾ.ಹೆಚ್.ಆರ್. ತಿಮ್ಮೇಗೌಡ, ಎಂ.ಎಸ್.ಮರಿಸ್ವಾಮಿಗೌಡ, ಲೋಕೇಶ್ ವಿಕ್ರಾಂತ್, ಪ್ರಕಾಶ್ ಚಿಕ್ಕಪಾಳ್ಯ ಉಪಸ್ಥಿತರಿದ್ದರು.

ದೇಶ – ವಿದೇಶ

ಅಮೆರಿಕಾದಲ್ಲಿ ಇಸ್ರೇಲಿ ರಾಯಭಾರ ಕಚೇರಿಯ ಇಬ್ಬರು ಸಿಬ್ಬಂದಿ ಹತ್ಯೆ



ವಾಷಿಂಗ್ಟನ್: ವಾಷಿಂಗ್ಟನ್‌ನಲ್ಲಿರುವ ಇಸ್ರೇಲ್ ರಾಯಭಾರ ಕಚೇರಿಯ ಇಬ್ಬರು ಸಿಬ್ಬಂದಿಯನ್ನು ನಿನ್ನೆ ಸಾಯಂಕಾಲ ಯಹೂದಿ ವಸ್ತುಸಂಗ್ರಹಾಲಯದ ಬಳಿ ಗುಂಡಿಕ್ಕಿ ಕೊಂದಿದ್ದಾರೆ ಎಂದು ಹೋಮ್‌ಲ್ಯಾಂಡ್ ಸೆಕ್ಯುರಿಟಿ ಕಾರ್ಯದರ್ಶಿ ಕ್ರಿಸ್ಟಿ ನೋಯೆಮ್ ತಿಳಿಸಿದ್ದಾರೆ.

ರಾಷ್ಟ್ರದ ರಾಜಧಾನಿಯಲ್ಲಿರುವ ಎಫ್‌ಬಿಐನ ಕ್ಷೇತ್ರ ಕಚೇರಿಯಿಂದ ಸ್ವಲ್ಪ ದೂರದಲ್ಲಿರುವ ಕ್ಯಾಪಿಟಲ್ ಯಹೂದಿ ವಸ್ತು ಸಂಗ್ರಹಾಲಯದ ಹೊರಗೆ ಗುಂಡಿನ ದಾಳಿ ನಡೆದಿದೆ. ಅಟಾರ್ನಿ ಜನರಲ್ ಪ್ಯಾಮ್ ಬೋಂಡಿ ಅವರು ವಾಷಿಂಗ್ಟನ್‌ನಲ್ಲಿ ಯುಎಸ್ ಅಟಾರ್ನಿಯಾಗಿ ಸೇವೆ ಸಲ್ಲಿಸುತ್ತಿರುವ ಮಾಜಿ ನ್ಯಾಯಾಧೀಶ ಜೀನೈನ್ ಪಿರೋ ಅವರೊಂದಿಗೆ ಸ್ಥಳದಲ್ಲಿದ್ದರು. ವಿಶ್ವಸಂಸ್ಥೆಗೆ ಇಸ್ರೇಲ್‌ನ ರಾಯಭಾರಿಯಾಗಿರುವ ಡ್ಯಾನಿ ಡ್ಯಾನನ್, ಗುಂಡಿನ ದಾಳಿಯನ್ನು ಯೆಹೂದ್ಯ ವಿರೋಧಿ ಭಯೋತ್ಪಾದನೆಯ ದುಷ್ಕೃತ್ಯ ಎಂದು ಕರೆದಿದ್ದಾರೆ. ಈ ಕೃತ್ಯಕ್ಕೆ ಕಾರಣರಾದವರ ವಿರುದ್ಧ ಅಮೆರಿಕ ಅಧಿಕಾರಿಗಳು ಬಲವಾದ ಕ್ರಮ ಕೈಗೊಳ್ಳುತ್ತಾರೆ ಎಂಬ ವಿಶ್ವಾಸ ನಮಗಿದೆ ಎಂದು ಡ್ಯಾನನ್ ಹೇಳಿದ್ದಾರೆ.


ಹಾವು ಕಡಿದು ಹಲವು ಬಾರಿ ಸತ್ತು ಪರಿಹಾರ ಪಡೆದವರು!



ಭೋಪಾಲ್: ಸರ್ಕಾರದ ಹಣಕ್ಕಾಗಿ ಹಾವು ಕಡಿತವೆಂದು ಹೇಳಿ ಇಬ್ಬರು 59 ಬಾರಿ ಸಾವನ್ನಪ್ಪಿರುವುದಾಗಿ ನಾಟಕವಾಡಿರುವ ಘಟನೆ ಮಧ್ಯಪ್ರದೇಶದ ಸಿಯೋನಿ ಜಿಲ್ಲೆಯಲ್ಲಿ ನಡೆದಿದೆ. ರಾಜ್ಯ ಸರ್ಕಾರದಿಂದ ಪರಿಹಾರ, ಆರ್ಥಿಕ ನೆರವು ಪಡೆಯಲು ಸರ್ಕಾರಿ ದಾಖಲೆಗಳಲ್ಲಿ ಹಾವು ಕಡಿತ, ಮುಳುಗುವಿಕೆ ಮತ್ತು ಸಿಡಿಲು ಸಂಬಂಧಿತ ನಕಲಿ ಸಾವಿಗೆ ಸಂಬಂಧಿಸಿದಂತೆ ರೂ.11.26 ಕೋಟಿ ಮೊತ್ತದ ಹಗರಣ ಸಿಯೋನಿಯಲ್ಲಿ ಬೆಳಕಿಗೆ ಬಂದಿದೆ. ಕಿಯೋಲಾರಿ ತಹಸಿಲ್‌ನ ಪರಿಶೀಲನೆಯೊಂದಿಗೆ ಹಣಕಾಸು ಇಲಾಖೆ ನಡೆಸಿದ ತನಿಖೆ ವೇಳೆ ಈ ಹಗರಣ ಬೆಳಕಿಗೆ ತಂದಿದೆ.

ತನಿಖೆ ನಂತರ ರೂ. 11.26 ಕೋಟಿ ಮೊತ್ತದ ಹಗರಣ ಮುನ್ನೆಲೆಗೆ ಬಂದಿದೆ. ವಂಚಿಸಲಾದ ಹಣವನ್ನು 47 ಜನರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಲಾಗಿದೆ ಎಂದು ವರ್ಷವಿಡೀ ತನಿಖೆ ನೇತೃತ್ವ ವಹಿಸಿದ್ದ ಜಂಟಿ ನಿರ್ದೇಶಕ ರೋಹಿತ್ ಕೌಶಲ್ ಹೇಳಿದ್ದಾರೆ. ಕೆಯೊಲಾರಿ ತಹಸಿಲ್‌ನ ಬಿಲ್‌ಗಳು/ದಾಖಲೆಗಳಲ್ಲಿ ರಮೇಶ್ ಎಂಬ ವ್ಯಕ್ತಿ 30 ಬಾರಿ ಸಾವನ್ನಪ್ಪಿದ್ದರೆ, ದ್ವಾರಿಕಾ ಬಾಯಿ 29 ಬಾರಿ ಹಾವು ಕಡಿತದಿಂದ ಸಾವನ್ನಪ್ಪಿದ್ದಾರೆ. ರಾಮ್‌ಕುಮಾರ್ ಎಂಬಾತ 28 ಬಾರಿ ಹಾವು ಕಚ್ಚಿ ಮೃತಪಟ್ಟಿರುವುದಾಗಿ ತೋರಿಸಲಾಗಿದೆ.

ಭಾರತೀಯ ಹೈಕಮಿಷನ್ ಸಿಬ್ಬಂದಿ ಉಚ್ಚಾಟಿಸಿದ ಪಾಕಿಸ್ತಾನ



ಇಸ್ಲಾಮಾಬಾದ್: ಪಾಕಿಸ್ತಾನ ಸರ್ಕಾರ ಗುರುವಾರ ಭಾರತೀಯ ಹೈಕಮಿಷನ್ ಸಿಬ್ಬಂದಿಯೊಬ್ಬರನ್ನು ಉಚ್ಚಾಟನೆ ಮಾಡುವುದಾಗಿ ಘೋಷಿಸಿದೆ. ಬೇಹುಗಾರಿಕೆಯಲ್ಲಿ ತೊಡಗಿರುವ ಆರೋಪದ ಮೇಲೆ ಪಾಕಿಸ್ತಾನ ಹೈಕಮಿಷನ್‌ನಲ್ಲಿ ಕೆಲಸ ಮಾಡುತ್ತಿರುವ ಪಾಕಿಸ್ತಾನಿ ಅಧಿಕಾರಿಯೊಬ್ಬರನ್ನು ಬುಧವಾರ ಭಾರತ ಹೊರಹಾಕಿದ್ದು, ಒಂದು ವಾರದಲ್ಲಿ ಎರಡನೇ ಬಾರಿಗೆ ಇದು ನಡೆದಿರುವ ಗಡಿಪಾರು ಎಂದು ಈ ವಿಷಯದ ಬಗ್ಗೆ ತಿಳಿದಿರುವವರು ಹೇಳುತ್ತಾರೆ.

ಪಾಕಿಸ್ತಾನ ಸರ್ಕಾರವು ಇಸ್ಲಾಮಾಬಾದ್‌ನ ಭಾರತದ ಹೈಕಮಿಷನ್‌ನ ಸಿಬ್ಬಂದಿಯನ್ನು ಅವರ ವಿಶೇಷ ಸ್ಥಾನಮಾನಕ್ಕೆ ವಿರುದ್ಧವಾದ ಚಟುವಟಿಕೆಗಳಲ್ಲಿ ತೊಡಗಿದ್ದಕ್ಕಾಗಿ ಪರ್ಸನಾ ನಾನ್ ಗ್ರಾಟಾ ಎಂದು ಘೋಷಿಸಿದೆ. ಸಂಬಂಧಪಟ್ಟ ಅಧಿಕಾರಿಯನ್ನು 24 ಗಂಟೆಗಳ ಒಳಗೆ ಪಾಕಿಸ್ತಾನ ತೊರೆಯುವಂತೆ ನಿರ್ದೇಶಿಸಲಾಗಿದೆ ಎಂದು ವಿದೇಶಾಂಗ ಕಚೇರಿಯ ಹೇಳಿಕೆ ತಿಳಿಸಿದೆ. ಮೇ 13 ರಂದು ಬೇಹುಗಾರಿಕೆಯಲ್ಲಿ ತೊಡಗಿರುವ ಆರೋಪದ ಮೇಲೆ ಭಾರತ ಮತ್ತೊಬ್ಬ ಪಾಕಿಸ್ತಾನಿ ಅಧಿಕಾರಿಯನ್ನು ಉಚ್ಚಾಟಿಸಿತ್ತು.

ಸರಣಿ ಕೊಲೆ ಮಾಡಿ, ದೇಹಗಳನ್ನು ಮೊಸಳೆಗೆ ಹಾಕುತ್ತಿದ್ದ ಡಾಕ್ಟರ್ ಬಂಧನ



ನವದೆಹಲಿ: ಸಾಲು ಸಾಲು ಕೊಲೆಗಳನ್ನು ಮಾಡಿ ಮೃತದೇಹಗಳನ್ನು ಕತ್ತರಿಸಿ ಮೊಸಳೆಗೆ ಹಾಕುತ್ತಿದ್ದ ಖತರ್ನಾಕ್ ವೈದ್ಯನನ್ನು ದೆಹಲಿ ಪೊಲೀಸರು ಬಂಧಿಸಿದ್ದಾರೆ.

ದೆಹಲಿಯಲ್ಲಿ ಇತ್ತೀಚೆಗೆ ಸಾವಿನ ಭೀತಿ ಹುಟ್ಟಿಸಿದ್ದ ವೈದ್ಯ ದೇವೇಂದರ್ ಶರ್ಮಾನನ್ನು ಬಂಧಿಸುವಲ್ಲಿ ಕೊನೆಗೂ ದೆಹಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಪೊಲೀಸ್ ಮೂಲಗಳ ಪ್ರಕಾರ ಕೊಲೆಗಳನ್ನು ಮಾಡಿ, ಸುಳಿವು ಸಿಗಬಾರದು ಎಂದು ಆ ಶವವನ್ನು ತುಂಡು ತುಂಡಾಗಿ ಕತ್ತರಿಸಿ ಈತ ಮೊಸಳೆಗಳಿಗೆ ಆಹಾರವಾಗಿ ಹಾಕುತ್ತಿದ್ದ ಎನ್ನಲಾಗಿದೆ. ರಾಜಸ್ಥಾನದ ದೌಸಾದಲ್ಲಿರುವ ಆಶ್ರಮದಿಂದ ಆತನನ್ನು ಬಂಧಿಸಲಾಯಿತು. ಅಲ್ಲಿ ಆತ ಅರ್ಚಕರೆಂದು ಹೇಳಿಕೊಂಡು ಬದುಕುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಕಳೆದ ವರ್ಷ ಪೆರೋಲ್‌ನಿಂದ ತಪ್ಪಿಸಿಕೊಂಡಿದ್ದ ರಾಜಸ್ಥಾನದ ಸೀರಿಯಲ್ ಕಿಲ್ಲರ್ ಬಹು ಕೊಲೆ ಪ್ರಕರಣಗಳಲ್ಲಿ ಶಿಕ್ಷೆಗೊಳಗಾಗಿದ್ದು, ಉತ್ತರಪ್ರದೇಶದ ಕಾಸ್ಗಂಜ್‌ನಲ್ಲಿರುವ ಹಜಾರ ಕಾಲುವೆಯ ಮೊಸಳೆ ತುಂಬಿದ ನೀರಿನಲ್ಲಿ ತಾನು ಕೊಂದವರ ದೇಹಗಳನ್ನು ಎಸೆಯುತ್ತಿದ್ದ. ಹೀಗಾಗಿ, ಆ ಶವಗಳ ಮಾಹಿತಿ ಪೊಲೀಸರಿಗೆ ಸಿಗುತ್ತಿರಲಿಲ್ಲ ಎನ್ನಲಾಗಿದೆ.


ಭಾರತದ ವಿಮಾನಗಳಿಗೆ ವಾಯು ಮಾರ್ಗ ನಿಷೇಧ 1 ತಿಂಗಳು ವಿಸ್ತರಿಸಲು ಪಾಕಿಸ್ತಾನ ನಿರ್ಧಾರ



ಇಸ್ಲಾಮಾಬಾದ್: ಭಾರತೀಯ ವಿಮಾನಗಳಿಗೆ ತನ್ನ ವಾಯುಮಾರ್ಗದಲ್ಲಿ ಸಂಚರಿಸದಂತೆ ವಿಧಿಸಿರುವ ನಿಷೇಧವನ್ನು ಮತ್ತೊಂದು ತಿಂಗಳು ವಿಸ್ತರಿಸಲು ಪಾಕಿಸ್ತಾನ ನಿರ್ಧರಿಸಿದೆ ಎಂದು ಬುಧವಾರ ಮಾಧ್ಯಮ ವರದಿಯೊಂದು ತಿಳಿಸಿದೆ. ಜಮ್ಮು–ಕಾಶ್ಮೀರದ ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಭಾರತ ತೆಗೆದುಕೊಂಡ ಹಲವು ಕಠಿಣ ಕ್ರಮಗಳ ನಂತರ ಪಾಕಿಸ್ತಾನ ಕಳೆದ ತಿಂಗಳಿಂದ ಭಾರತಕ್ಕೆ ತನ್ನ ವಾಯುಮಾರ್ಗವನ್ನು ನಿಷೇಧಿಸಿದೆ. ಒಂದು ಬಾರಿಗೆ ಒಂದು ತಿಂಗಳಿಗಿಂತ ಹೆಚ್ಚು ಕಾಲ ವಾಯುಮಾರ್ಗಕ್ಕೆ ನಿರ್ಬಂಧಗಳನ್ನು ವಿಧಿಸಲಾಗುವುದಿಲ್ಲ ಎಂಬ ಅಂತರರಾಷ್ಟ್ರೀಯ ನಾಗರಿಕ ವಿಮಾನಯಾನ ಸಂಸ್ಥೆ ನಿಯಮಗಳ ಪ್ರಕಾರ, ಮೇ 23 ರವರೆಗೆ ಒಂದು ತಿಂಗಳ ಕಾಲ ನಿಷೇಧವನ್ನು ವಿಧಿಸಲಾಗಿದೆ. ನಿಷೇಧವನ್ನು ವಿಸ್ತರಿಸುವ ನಿರ್ಧಾರವನ್ನು ಬುಧವಾರ ಅಥವಾ ಗುರುವಾರ ಘೋಷಿಸುವ ನಿರೀಕ್ಷೆಯಿದೆ ಮತ್ತು ಈ ಸಂಬಂಧ ವಾಯುಪಡೆಯವರಿಗೆ(ನೋಟಮ್) ನೋಟಿಸ್ ನೀಡಲಾಗುವುದು ಎಂದು ಸುದ್ದಿ ಸಂಸ್ಥೆ ವರದಿ ಮಾಡಿದೆ.

ಭಕ್ತಿಭಾವದಿಂದ ಹೆಬ್ಬಾಲೆ ಬೋಡ್ನಮ್ಮೆ ಆಚರಣೆ

ದೈವಸ್ಥಾನದಲ್ಲಿ ಕುಣಿದು ಕುಪ್ಪಳಿಸಿದ ವೇಷಧಾರಿಗಳು, ದೇವರ ನಾಮ ಜಪ



ಸಾವಿರಾರು ಭಕ್ತರ ಸಮ್ಮುಖದಲ್ಲಿ ಹೆಬ್ಬಾಲೆ ಬೋಡ್ನಮ್ಮೆ ಭಕ್ತಿಭಾವದಿಂದ ನಡೆಯಿತು.

ಗೋಣಿಕೊಪ್ಪ, ಮೇ 22– ಹೆಬ್ಬಾಲೆ ಬೋಡ್ನಮ್ಮೆ ಭಕ್ತಿಭಾವದಿಂದ ನಡೆಯಿತು. ಸಾವಿರಾರು ವೇಷಧಾರಿಗಳು ದೈವಸ್ಥಾನದಲ್ಲಿ ಕುಣಿದು, ದೇವರ ನಾಮ ಜಪ ಮಾಡಿದರು.

ಪಟ್ಟಣಿ, ಅಯ್ಯಪ್ಪ ದೇವನಿಗೆ ಕುದುರೆ, ಬೋಟೆಕಾರನಿಗೆ ಮಣ್ಣಿನಿಂದ ತಯಾರಿಸಿದ ನಾಯಿ ಮೂರ್ತಿ, ಭದ್ರಕಾಳಿಗೆ ಪ್ರಸಾದ ಅರ್ಪಿಸಲಾಯಿತು. ಅಯ್ಯಪ್ಪ ಸ್ಥಾನದ ಎದುರು ಸಾವಿರಾರು ವೇಷಧಾರಿಗಳು ಕುಣಿದು ಸಂಭ್ರಮಿಸಿದರು.

ಅಯ್ಯಪ್ಪನ ಸ್ಥಾನದಲ್ಲಿ ಸಾವಿರಾರು ವೇಷಧಾರಿಗಳು ಕುಣಿದು ಹರಕೆ ಒಪ್ಪಿಸಿದರು. ದೈವನೆಲೆಯ ಸುತ್ತಲೂ ಹೆಜ್ಜೆ ಹಾಕಿ ಕುಣಿದು ಕುಪ್ಪಳಿಸಿದರು. ಸ್ಥಾನಕ್ಕೆ ಭದ್ರಕಾಳಿ ಹಾಗೂ ಅಯ್ಯಪ್ಪ ದೇವರ ಕುದುರೆ ಆಗಮಿಸುತ್ತಿದ್ದಂತೆ ಅಕ್ಕಿಯಿಂದ ಮಾಡಿರುವ ಪೆರಿಯನ್ನು ಅರ್ಚನೆ ಮಾಡುವ ಮೂಲಕ ಭಕ್ತಿ ಮೆರೆದರು. ಅಯ್ಯಪ್ಪ ದೇವ ಬೋಜೋ, ಭದ್ರಕಾಳಿ ಬೋಜೋ ಎಂದು ಗ್ರಾಮಸ್ಥರು ಪ್ರಾರ್ಥನೆ ಸಲ್ಲಿಸಿದರು. ಮೊಗ ತೆರೆ ದೇವರೊಂದಿಗೆ ಸಾಗಿ ಬಂತು. ಭದ್ರಕಾಳಿಯನ್ನು ಕುದ್ರೆ ಹೊತ್ತವರು ಹೊತ್ತು ಸಾಗುವ ಆಚರಣೆ ನಡೆಯಿತು.

6 ದಿನಗಳ ಆಚರಣೆ; ಶನಿವಾರ ಹಬ್ಬಕ್ಕೆ ನಾಪರೆ ತಾತುವೋ ಎಂಬ ಆಚರಣೆ ಮೂಲಕ ಚಾಲನೆ ನೀಡಲಾಯಿತು. ಅಯ್ಯಪ್ಪನ ಸ್ಥಾನದಲ್ಲಿ ಸೇರಿದ ಗ್ರಾಮಸ್ಥರು ಡೋಲು ಬಡಿದು ವನ ದೇವರುಗಳಾದ ಅಯ್ಯಪ್ಪ, ಭದ್ರಕಾಳಿ ಹಾಗೂ ಬೋಟೆಕಾರ ದೇವನನ್ನು ಪ್ರಾರ್ಥಿಸಿ ಹಬ್ಬಕ್ಕೆ ಚಾಲನೆ ನೀಡಲಾಗಿತ್ತು. ಹಬ್ಬ ಮುಗಿಯುವವರೆಗೆ ಪ್ರಾಣಿಹಿಂಸೆ ಮಾಡದಂತೆ, ಮಾಂಸಾಹಾರ ತ್ಯಜಿಸುತ್ತಾರೆ. ಗುರುವಾರ ಕುದುರೆ ತೆಗೆಯುವ ಹಾಗೂ ವೇಷಧಾರಿಗಳಿಂದ ಮನೆ ಮನೆ ಬೇಡುವಹಬ್ಬವಾಗಿ ಆಚರಿಸಲಾಯಿತು.

ವೇಷಧಾರಿ ಭಕ್ತರು ಅಂಬಲಕ್ಕೆ ತೆರಳಿ ಭಂಡಾರ ಪೆಟ್ಟಿಗೆ, ಮೊಗದೊಂದಿಗೆ ಅಯ್ಯಪ್ಪ ದೇವಸ್ಥಾನಕ್ಕೆ ಆಗಮಿಸಿದರು. ಭದ್ರಕಾಳಿ ದೇವರ ಮೊಗಕ್ಕೆ ಮೊಗ ಪೂಜೆ ಸಲ್ಲಿಸಿ, ಮೊಗ ಪಾಟ್, ಅಯ್ಯಪ್ಪ ದೇವರ ಬೇಟೆಯ ವಾಹನವಾದ ಕುದುರೆಯನ್ನು ಅಯ್ಯಪ್ಪ ದೇವರಿಗೆ ಅರ್ಪಿಸಲಾಯಿತು. ಭದ್ರಕಾಳಿ ಚಾಮುಂಡಿ ಮಾತೆಗೆ ಸಂಹಾರ ಪ್ರತೀಕವಾಗಿ ಆಹಾರ ಅರ್ಪಣೆ, ಭೇಟೆ ಕುರುಬ ದೇವರಿಗೆ ಬೇಟೆ ನಾಯಿ ಅರ್ಪಿಸಲಾಯಿತು.

ಹಲವು ವೇಷ ತೊಟ್ಟು ಮನೆ, ಮನೆಗಳಿಂದ ಬೇಡಿ ಪಡೆದು ದೇವಿಗೆ ಅರ್ಪಿಸುವ ದೇವರಪುರ ಗ್ರಾಮದ ಹೆಬ್ಬಾಲೆ ಬೋಡ್ನಮ್ಮೆ ಹಲವು ಧಾರ್ಮಿಕ ವಿಧಿ–ವಿಧಾನಗಳ ಮೂಲಕ ನಡೆಯಿತು. ವನ ದೇವಿಗಾಗಿ ಒಂದು ದಿನದ ಉಪವಾಸ ಆಚರಣೆಯಾಗಿ ಆಚರಿಸುವ ಪಟ್ಟಣಿ, ಅಯ್ಯಪ್ಪ ದೇವನಿಗೆ ಕುದುರೆ, ಬೋಟೆಕಾರನಿಗೆ ಮಣ್ಣಿನಿಂದ ತಯಾರಿಸಿ ನಾಯಿಯನ್ನು ಭದ್ರಕಾಳಿಗೆ ಪ್ರಸಾದ ಅರ್ಪಿಸುವ ಮೂಲಕ ಗ್ರಾಮಸ್ಥರು ಪುರಾತನ ಕಾಲದಿಂದ ನಡೆದು ಬಂದ ಆಚರಣೆಯನ್ನು ಆಚರಿಸಿದರು. ಅಯ್ಯಪ್ಪ ಸ್ಥಾನದ ಎದುರು ಹಲವು ವೇಷತೊಟ್ಟ ಸಾವಿರಾರು ಭಕ್ತಾದಿಗಳು ಒಂದಾಗಿ ಕುಣಿದು ಸಂಭ್ರಮಿಸಿದರು.

ಭದ್ರಕಾಳಿ ಚಾಮುಂಡಿ ಮಾತೆಗೆ ಸಂಹಾರ ಪ್ರತೀಕವಾಗಿ ಆಹಾರ ಅರ್ಪಣೆ, ಬೇಟೆ ಕುರುಬ ದೇವರಿಗೆ ಬೇಟೆ ನಾಯಿ ಅರ್ಪಿಸಲಾಯಿತು. ನಮ್ಮೆಯನ್ನು ಸಣ್ಣುವಂಡ, ಕಳ್ಳಿಚಂಡ, ಮನೆಯಪಂಡ, ಚೆಕ್ಕೇರ, ಅಜ್ಜಿನಿಕಂಡ, ಕಂಜಿತಂಡ ಕುಟುಂಬಗಳು ಹಾಗೂ ಗ್ರಾಮದ ಆದಿವಾಸಿಗಳು ಸೇರಿ ಆಚರಿಸಿದರು.

ಪುನರ್ವಸತಿಯಿಂದ ಕಾಡಾನೆ ಉಪಟಳ ನಿಯಂತ್ರಣ : ಸಂಕೇತ್ ಪೂವಯ್ಯ



ಸಂಕೇತ್ ಪೂವಯ್ಯ

ಮಡಿಕೇರಿ, ಮೇ 22– ಕಾಡಾನೆಗಳಿಗೆ ಪುನರ್ವಸತಿ ಕಲ್ಪಿಸಿದಲ್ಲಿ ಮುಂದಿನ 2 ವರ್ಷಗಳಲ್ಲಿ ಕಾಡಾನೆ ಉಪಟಳ ನಿಯಂತ್ರಣಕ್ಕೆ ಬರಲಿದೆ ಎಂದು ರಾಜ್ಯ ವನ್ಯಜೀವಿ ಮಂಡಳಿ ಸದಸ್ಯ ಸಂಕೇತ್ ಪೂವಯ್ಯ ವಿಶ್ವಾಸ ವ್ಯಕ್ತಪಡಿಸಿದ್ದಾರೆ.


ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಘೋಷಿಸಿದಂತೆ ಭದ್ರಾ ಸಾಫ್ಟ್ ಏರಿಯಾ ಲಿಸ್ಟ್‌ನಲ್ಲಿ ಕಾಡಾನೆಗಳಿಗೆ ಪುನರ್ವಸತಿ ಕಲ್ಪಿಸಲು 2ರಿಂದ 3 ವರ್ಷಗಳು ಬೇಕಾಗಬಹುದು ಎಂದರು.

ದಕ್ಷಿಣ ಕೊಡಗಿನ ಪೊನ್ನಂಪೇಟೆ ತಾಲೂಕಿನ ದೇವರಪುರದಲ್ಲಿ ವ್ಯಕ್ತಿಯೊಬ್ಬರನ್ನು ಕಾಡಾನೆ ಬಲಿ ಪಡೆದ ದುರ್ಘಟನೆಯನ್ನು ಶಾಸಕ ಎ.ಎಸ್.ಪೊನ್ನಣ್ಣ ಅವರು ಮುಖ್ಯಮಂತ್ರಿಗಳ ಗಮನಕ್ಕೆ ತಂದಿದ್ದಾರೆ. ಕಾಡಾನೆ ಸೆರೆಗೆ ಅನುಮತಿ ನೀಡುವಂತೆ ಮನವಿ ಮಾಡಿದ್ದಾರೆ ಎಂದು ತಿಳಿಸಿದರು.

ರಾಜ್ಯದ ಏಳೆಂಟು ಜಿಲ್ಲೆಗಳಲ್ಲಿ ಮಾನವ ವನ್ಯಜೀವಿ ಸಂಘರ್ಷವಿದೆ ಕಾಡಾನೆ ಹಾವಳಿಯಿಂದಾಗಿ ರಾಜ್ಯದಲ್ಲೇ ಅತೀ ಹೆಚ್ಚು ಜೀವಹಾನಿ ಕೊಡಗು ಜಿಲ್ಲೆಯಲ್ಲಿ ಆಗುತ್ತಿದೆ. ಕಾಡಿನಲ್ಲಿರುವ ಆನೆಗಳಿಗಿಂತಲೂ ಹೆಚ್ಚಾಗಿ ತೋಟ ಗಳಲ್ಲಿ ಬೀಡುಬಿಟ್ಟಿರುವ ಕಾಡಾನೆಗಳಿಂದ ಸಮಸ್ಯೆಯಾಗುತ್ತಿದೆ. ಸಮಸ್ಯೆ ಪರಿಹಾರಕ್ಕೆ ಎಲ್ಲಾ ಪಕ್ಷಗಳು, ಸಂಘ ಸಂಸ್ಥೆಗಳ ಸಹಕಾರ ಅಗತ್ಯವೆಂದರು. ಗಣತಿ ಪ್ರಕಾರ ನಾಗರಹೊಳೆಯಲ್ಲಿ 2 ಸಾವಿರ ಕಾಡಾನೆಗಳಿದ್ದು, 563 ಹುಲಿಗಳು ಇವೆ. ಜನವಸತಿ ಪ್ರದೇಶದಲ್ಲಿರುವ ಎರಡು ಹುಲಿಗಳನ್ನು ಸೆರೆ ಹಿಡಿಯಲು ಸಂಬಂಧಿಸಿದ ಇಲಾಖೆಯಿಂದ ಅನುಮತಿ ದೊರೆತಿದೆ ಆದರೆ ಅರಣ್ಯ ಇಲಾಖೆ ಕಾರ್ಯಗತ ಮಾಡುತ್ತಿಲ್ಲವೆಂದು ಸಂಕೇತ್ ಪೂವಯ್ಯ ಅಸಮಾಧಾನ ವ್ಯಕ್ತಪಡಿಸಿದರು.

ಅರಣ್ಯ ಇಲಾಖಾಧಿಕಾರಿಗಳು ಹಾಗೂ ಸಿಬ್ಬಂದಿಗಳು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕೆಂದು ತಿಳಿಸಿದರು.

ಇಂದು ವಿದ್ಯುತ್ ವ್ಯತ್ಯಯ



ಮಡಿಕೇರಿ, ಮೇ 22– ಸೋಮವಾರಪೇಟೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ಮಾರ್ಗ ನಿರ್ವಹಣೆ ಕಾಮಗಾರಿ ಕೈಗೊಂಡಿರುವುದರಿಂದ ಮೇ 23 ರಂದು ಬೆಳಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ಯಡೂರು, ತಲ್ತಾರೆಶೆಟ್ಟಳ್ಳಿ, ಕಿರಗಂದೂರು, ತಾಕೇರಿ, ಗಿಜಗನಮನೆ, ತೋಳೂರುಶೆಟ್ಟಳ್ಳಿ, ಕೂತಿ, ಹೊಸಬೀಡು, ಕಲ್ಕಂದೂರು, ಬಸವನಕಟ್ಟೆ, ನಗರಳ್ಳಿ, ಹೆಮನಗದ್ದೆ, ಶಾಂತಳ್ಳಿ, ಬೆಟ್ಟದಳ್ಳಿ, ಬೀದಳ್ಳಿ, ಕುಂದಳ್ಳಿ, ಹೆಗ್ಗಡಮನೆ, ಹರಗ, ಕುಂಬಾರಗಡಿಗೆ ಹಾಗೂ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಸಿಎನ್‌ಸಿ ಅಧ್ಯಕ್ಷ ನಾಚಪ್ಪ ಅವರಿಗೆ ಪಿತೃ ವಿಯೋಗ



ಮಡಿಕೇರಿ,ಮೇ 22 – ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಅವರ ತಂದೆ ನಂದಿನೆರವಂಡ ಉತ್ತಪ್ಪ (93) ಅವರು ಇಂದು ನಿಧನ ಹೊಂದಿದರು. ಮೃತರ ಅಂತ್ಯಕ್ರಿಯೆ ಮೇ 23ರಂದು ಕುಶಾಲನಗರ ತಾಲೂಕಿನ ಚಿಕ್ಕಬೆಟ್ಟಗೇರಿ ಗ್ರಾಮದಲ್ಲಿ ನಡೆಯಲಿದೆ. ನಂದಿನೆರವಂಡ ಉತ್ತಪ್ಪ ಅವರು ಮೂವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಹೃದಯಾಘಾತದಿಂದ ಉಪವಲಯ ಅರಣ್ಯಾಧಿಕಾರಿ ದಿನೇಶ್ ನಿಧನ



ಮಡಿಕೇರಿ: ಕುಶಾಲನಗರ ಅರಣ್ಯ ವಲಯದ ಅಂದಗೋವೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಉಪ ವಲಯ ಅರಣ್ಯಾಧಿಕಾರಿ ಟಿ.ಕೆ.ದಿನೇಶ್(37) ಬುಧವಾರ ರಾತ್ರಿ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಮೂಲತಃ ಹಾಸನ ಜಿಲ್ಲೆಯವರಾದ ಟಿ.ಕೆ.ದಿನೇಶ್ ದ್ವಿತೀಯ ಅವಧಿಗೆ ಕುಶಾಲನಗರ ಉಪ ವಲಯ ಅರಣ್ಯಾಧಿಕಾರಿಯಾಗಿ ಸೇವೆಗೆ ನಿಯೋಜನೆಯಾಗಿದ್ದರು. ಅವರು ವಸತಿ ಗೃಹದಲ್ಲಿದ್ದ ಸಂದರ್ಭ ಎದೆ ನೋವು ಕಾಣಿಸಿಕೊಂಡಿತ್ತು. ತಕ್ಷಣವೇ ಅವರನ್ನು ಕುಶಾಲನಗರ ಆಸ್ಪತ್ರೆಗೆ ಕರೆದೊಯ್ಯುವ ಸಂದರ್ಭ ಮೃತಪಟ್ಟಿದ್ದಾರೆ.

ಮೃತ ದಿನೇಶ್ ಅವರು ತಾಯಿ, ಪತ್ನಿ, ಓರ್ವ ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಅವರ ಸ್ವಗ್ರಾಮದಲ್ಲಿ ನೆರವೇರಿತು.

ಸ್ಮಶಾನ ಜಾಗದ ವಿವಾದ ಬಗೆಹರಿಸಲು ಒತ್ತಾಯಿಸಿ ಪ್ರತಿಭಟನೆ

ಕುಶಾಲನಗರ: ಬೈಚನಹಳ್ಳಿ ಗ್ರಾಮದ ಸ್ಮಶಾನ ವಿವಾದ ಸಮರ್ಪಕವಾಗಿ ಬಗೆಹರಿಯದ ಕಾರಣ ಗೆಳೆಯರ ಬಳಗದ ನೇತೃತ್ವದಲ್ಲಿ ಗ್ರಾಮಸ್ಥರು ಸ್ಮಶಾನದಲ್ಲಿ ಗುರುವಾರದಿಂದ ಅನಿರ್ದಿಷ್ಟಾವಧಿ ಹೋರಾಟ ಆರಂಭಿಸಿದ್ದಾರೆ.

ಶವಸಂಸ್ಕಾರಕ್ಕೆ ಜಾಗ ಒದಗಿಸಬೇಕು ಹಾಗೂ ಈ ಭಾಗದಲ್ಲಿ ಅತಿಕ್ರಮಿಸಿಕೊಂಡಿರುವ ಗೋಮಾಳ ಜಾಗವನ್ನು ಸಂರಕ್ಷಿಸುವಂತೆ ಒತ್ತಾಯಿಸಿ ಗ್ರಾಮಸ್ಥರು ಘೋಷಣೆಗಳನ್ನು ಕೂಗಿದರು. ಸ್ಥಳಕ್ಕೆ ಜಿಲ್ಲಾಧಿಕಾರಿಗಳು ಆಗಮಿಸಿ ಸಮಸ್ಯೆ ಇತ್ಯರ್ಥಗೊಳಿಸುವವರೆಗೆ ಧರಣಿ ಹಿಂಪಡೆಯುವುದಿಲ್ಲ ಎಂದು ಪಟ್ಟು ಹಿಡಿದರು.

ಈ ಸಂದರ್ಭ ಸುದ್ದಿಗಾರರೊಂದಿಗೆ ಮಾತನಾಡಿದ ಗ್ರಾಮದ ಮುಖಂಡ ಕೆ.ಎನ್. ಅಶೋಕ್ ಹಾಗೂ ಬಿ.ಎಸ್.ಶಿವಕುಮಾರ್, ಗ್ರಾಮದ ಸರ್ವೆ ನಂ.2/1 ರಲ್ಲಿ ಗೋಮಾಳ ಪೈಸಾರಿಗೆ ಸೇರಿದ ಒಂದು ಭಾಗದಲ್ಲಿ ಕಳೆದ 4 ದಶಕಗಳಿಂದ ಈ ಭಾಗದ ಗ್ರಾಮಸ್ಥರು ಶವಸಂಸ್ಕಾರ ನೆರವೇರಿಸಿಕೊಂಡು ಬರುತ್ತಿದ್ದರು. ಎಲ್ಲಾ ಧರ್ಮೀಯರು ಕೂಡ ಈ ಜಾಗ ಬಳಸುತ್ತಿದ್ದರು. ಆದರೆ ಇದೀಗ ಒಂದು ಧರ್ಮಕ್ಕೆ ಜಾಗ ಮೀಸಲು ಮಾಡಿ ದಾಖಲೆ ಸಿದ್ಧಪಡಿಸ ಲಾಗಿದೆ. ಇದರ ವಿರುದ್ಧ ಈ ಹಿಂದೆ ಪ್ರತಿಭಟನೆ ನಡೆಸಲಾಗಿತ್ತು ಎಂದರು.

ಬಸವ ಜಯಂತಿ ಪ್ರಯುಕ್ತ ವಾರ್ಷಿಕ ಕ್ರೀಡಾಕೂಟ, ಪ್ರತಿಭಾ ಪುರಸ್ಕಾರ



ವಿರಾಜಪೇಟೆ, ಮೇ 22– ಅಖಿಲ ಭಾರತ ವೀರಶೈವ ಮಹಾಸಭಾ ಪೊನ್ನಂಪೇಟೆ ಹಾಗೂ ವಿರಾಜಪೇಟೆ ತಾಲೂಕು ಘಟಕದ ವತಿಯಿಂದ ಬಸವ ಜಯಂತಿ ಪ್ರಯುಕ್ತ ವಾರ್ಷಿಕ ಕ್ರೀಡಾಕೂಟ ಮತ್ತು ಪ್ರತಿಭಾ ಪುರಸ್ಕಾರ ಸಮಾರಂಭವು ಮಾಯಮುಡಿ ಧನುಗಾಲ ಮುರುಡೇಶ್ವರ ದೇವಸ್ಥಾನದ ಆವರಣದಲ್ಲಿ ನಡೆಯಿತು.

ವೀರಶೈವ ಮಹಾಸಭಾ ಸಲಹಾ ಸಮಿತಿ ಸದಸ್ಯ ಈಶಕುಮಾರ್ ಮಂಜು ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿ, ಸಮಾಜದ ಬಾಂಧವರು ತಮ್ಮ ಆಚಾರ ವಿಚಾರಗಳೊಂದಿಗೆ ಬಸವಣ್ಣನವರ ಆದರ್ಶವನ್ನು ಪಾಲಿಸುವಂತಾಗಬೇಕು. ನಮ್ಮ ಬಾಂಧವರು ಒಗ್ಗೂಡಲು ಇಂಥ ಕ್ರೀಡಾಕೂಟಗಳು ಸಹಕಾರಿಯಾಗಲಿದೆ. ಕ್ರೀಡೆಯಿಂದ ಮನೋಲ್ಲಾಸ ಹಾಗೂ ಉತ್ತಮ ಆರೋಗ್ಯ ಹೆಚ್ಚುತ್ತದೆ ಜನಾಂಗದ ಪ್ರತಿಯೊಬ್ಬರು ಕ್ರೀಡೆಯಲ್ಲಿ ಭಾಗವಹಿಸುವಂತಾಗಬೇಕು ಎಂದರು.

ಅಧ್ಯಕ್ಷತೆ ವೀರಶೈವ ಮಹಾಸಭಾದ ಪೊನ್ನಂಪೇಟೆ ಮತ್ತು ವಿರಾಜಪೇಟೆ ತಾಲೂಕು ಘಟಕದ ಅಧ್ಯಕ್ಷ ಎನ್.ಎಂ.ರಾಜೇಶ್ ಮಾತನಾಡಿ, ಬಸವಣ್ಣನವರ ತತ್ವ ಮತ್ತು ವಚನಗಳನ್ನು ಮೈಗೂಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಪಾಠದೊಂದಿಗೆ ಕ್ರೀಡೆಯಲ್ಲಿಯೂ ಸಹಾ ಭಾಗವಹಿಸಿ ಉತ್ತಮ ಪಟುಗಳಾಗಿ ತಾಲೂಕು, ಜಿಲ್ಲೆ, ರಾಜ್ಯ ಹಾಗೂ ರಾಷ್ಟ್ರ ಮಟ್ಟದಲ್ಲಿಯು ಹೆಸರುಗಳಿಸುವಂತಾಗಬೇಕು ಎಂದರು. ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಅಧ್ಯಕ್ಷ ಹೆಚ್.ವಿ.ಶಿವಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ರಾಜ್ಯ ಘಟಕದ ನಿರ್ದೇಶಕರಾದ ಅನುರಾಧ ಚಂದ್ರಶೇಖರ್, ಕೊಡಗು ಜಿಲ್ಲಾ ಉಪಾಧ್ಯಕ್ಷ ಎಸ್.ಎಸ್.ಸುರೇಶ್, ಜಿಲ್ಲಾ ಮಹಿಳಾ ಘಟಕದ ಅಧ್ಯಕ್ಷೆ ದೀಪಿಕ ಕರ್ಣ ಅವರುಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು.

ಡಾಕ್ಟರೇಟ್ ಪದವಿ ಪಡೆದ ಸಮಾಜದ ಎಸ್.ಎನ್.ಪಂಚಮ ಮತ್ತು ಎಸ್.ಪಿ. ಲಾವಣ್ಯ ಹಾಗೂ ಗಣ್ಯ ವ್ಯಕ್ತಿಗಳನ್ನು ಸನ್ಮಾನಿಸಲಾಯಿತು. ಹೆಚ್ಚು ಅಂಕ ಪಡೆದ 7ನೇ ತರಗತಿಯ ಎಸ್.ಬಿ.ಚಾಂದಿನಿ ಮತ್ತು ಎಸ್.ಡಿ.ಕೃತಿಕಾ, ಎಸ್.ಎಸ್.ಎಲ್.ಸಿ ಎಸ್.ಹೆಚ್. ಶಕ್ತಿಧರ ಮತ್ತು ಕೆ.ಎಂ.ದೀಕ್ಷ–ಪಿಯುಸಿಯಲ್ಲಿ ಜೆ.ಎಲ್.ಹರ್ಷಿಣಿ, ಭಜೀತಾ, ಎ.ಮದುಮಿತ ಅವರುಗಳಿಗೆ ನೆನಪಿನ ಕಾಣಿಕೆ ನೀಡಿ ಸನ್ಮಾನಿಸಲಾಯಿತು. ಕ್ರೀಡೆಯಲ್ಲಿ ವಿಜೇತರಿಗೆ ಅತಿಥಿಗಳು ಬಹುಮಾನ ವಿತರಿಸಿದರು. ಉಪಾಧ್ಯಕ್ಷ ಶ್ರೀಕಂಠಪ್ಪ ರಘು ಸ್ವಾಗತಿಸಿದರೆ, ಕಾರ್ಯದರ್ಶಿ ವೇದಾಜಯರಾಜು ವಂದಿಸಿದರು.

ಮೊದಲಿಗೆ ಮಾಯಮುಡಿ ಧನುಗಾಲ ಶ್ರೀ ಮುರುಡೇಶ್ವರ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಬಳಿಕ ಕ್ರೀಡೆಗೆ ಚಾಲನೆ ನೀಡಲಾಯಿತು. ಬಳಿಕ ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಗೆ ಬಲಿಯಾದವರಿಗೆ ಸಭೆಯ ಸಂತಾಪ ಸೂಚಿಸಲಾಯಿತು. ಕ್ರೀಡಾಕೂಟದಲ್ಲಿ ಹಗ್ಗಜಗ್ಗಾಟ, ಥ್ರೋಬಾಲ್, ಪಾಸಿಂಗ್ ಬಾಲ್, ನಿಂಬೆಹಣ್ಣು ಚಮಚ ಓಟ, ಮಕ್ಕಳಿಗೆ ಕಾಳು ಹೆಕ್ಕುವುದು, ಮಹಿಳೆಯರಿಗೆ ಪುರುಷರಿಗೆ ಮತ್ತು ಮಕ್ಕಳಿಗೆ ಪ್ರತ್ಯೇಕ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

ಮಾಂಗಲ್ಯ ಧಾರಣೆಯಾದ ಮರು ಕ್ಷಣವೇ ಪರೀಕ್ಷೆಗೆ ಹಾಜರಾದ ವಧು



ಕೊಳ್ಳೇಗಾಲ: ಮಾಂಗಲ್ಯ ಧಾರಣೆಯಾದ ಕೆಲವೇ ನಿಮಿಷಗಳಲ್ಲಿ ಮದುಮಗಳೊಬ್ಬಳು ಕೊಳ್ಳೇಗಾಲದಲ್ಲಿ ನಡೆಯುತ್ತಿದ್ದ ಬಿಕಾಂ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಿ ಪರೀಕ್ಷೆ ಬರೆಯುವ ಮೂಲಕ ಗಮನ ಸೆಳೆದಿದ್ದಾರೆ.

ಕೊಳ್ಳೇಗಾಲ ಪಟ್ಟಣದ ವಾಸಿ ಎಂ ಸಂಗೀತ ಅವರಿಗೆ ಪರೀಕ್ಷೆ ದಿನಾಂಕ ನಿಗದಿಗೂ ಮುನ್ನ ಆರು ತಿಂಗಳ ಹಿಂದೆಯೇ ಮದುವೆ ನಿಶ್ಚಯವಾಗಿತ್ತು. ಗುರುವಾರ ಅವರಿಗೆ ಅಂತಿಮ ಬಿಕಾಂ ಪರೀಕ್ಷೆಯೂ ನಿಗದಿಯಾಗಿತ್ತು ಅಂದೇ ಅವರ ಮದುವೆಯೂ ಸಹ ಇತ್ತು. ಇದನ್ನೇ ಜೀವನದ ಪರೀಕ್ಷೆ ಅನ್ನುವುದು. ಈ ಹಿನ್ನೆಲೆ ಎರಡನ್ನು ಸವಾಲಾಗಿ ಸ್ವೀಕರಿಸಿದ ಸಂಗೀತಾ ಅವರು ಬೆಳಗ್ಗೆ 9.20ರಲ್ಲಿ ಮಾಂಗಲ್ಯ ಧಾರಣೆ ಮಾಡಿಸಿಕೊಂಡ ಕೆಲವೇ ನಿಮಿಷಗಳಲ್ಲಿ ಕೊಳ್ಳೇಗಾಲದ ವಾಸವಿ ಪ್ರಥಮ ದರ್ಜೆ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಹಾಜರಾಗಿ ಪರೀಕ್ಷೆ ಬರೆದರು. ಪರೀಕ್ಷೆಗೆ ತಡವಾಗುತ್ತಿದ್ದಂತೆ ಕಾರಿನಿಂದ ಇಳಿದು ಓಡೋಡಿ ವಧು ಗಾಬರಿಯಿಂದಲೇ ಪರೀಕ್ಷಾ ಕೇಂದ್ರ ಪ್ರವೇಶಿಸಿದರು.

ಪರೀಕ್ಷಾ ಕೇಂದ್ರಕ್ಕೆ ಹಾಜರಾದ ಸಂಗೀತಾಗೆ ಜೊತೆಯಲ್ಲಿ ಬಂದ ಸಂಬಂಧಿಗಳಾದ ಶಂಭುಲಿಂಗಸ್ವಾಮಿ, ಕುಮಾರಸ್ವಾಮಿ, ಕಿರಣ್, ಮಧು, ಸತೀಶ್ ಇನ್ನಿತರರು ಸಾಥ್ ನೀಡುವ ಜೊತೆಗೆ ಧೈರ್ಯ ತುಂಬಿ ಪರೀಕ್ಷಾ ಕೇಂದ್ರ ಪ್ರವೇಶಕ್ಕೆ ಕರೆತಂದು ಬಿಟ್ಟರು. ಸಂಗೀತಾ ಅವರು ಈಗಾಗಲೇ ಅಂತಿಮ ಬಿಕಾಂ ಪರೀಕ್ಷೆಯಲ್ಲಿನ ಐದು ವಿಷಯಗಳಲ್ಲೂ ಪರೀಕ್ಷೆ ಬರೆದಿದ್ದು ಗುರುವಾರ ಅಂತಿಮ ವಿಷಯವಿದ್ದ ಕಾರಣ ತಾಳಿ ಕಟ್ಟಿಸಿಕೊಳ್ಳುತ್ತಿದ್ದಂತೆ ಅವರು ಪರೀಕ್ಷೆ ಬರೆದರು.

ಪತಿಯ ಪ್ರೋತ್ಸಾಹ : ತಾಳಿ ಕಟ್ಟಿಸಿಕೊಳ್ಳುತ್ತಿದ್ದಂತೆ ಪರೀಕ್ಷೆಗೆ ತೆರಳಲು ಅಣಿಯಾದ ಪತ್ನಿ ಸಂಗೀತಾರನ್ನು ಉತ್ತಮ ರೀತಿ ಪರೀಕ್ಷೆ ಬರೆಯುವಂತೆ ಪ್ರೋತ್ಸಾಹಿಸಿ ಹುರಿದುಂಬಿಸಿ ಕಳುಹಿಸಿಕೊಡುವಲ್ಲಿ ಪತಿ ಯೋಗೀಶ್ ಯಶಸ್ವಿಯಾದರು. ಕೊಳ್ಳೇಗಾಲದ ವಾಸಿ ಮಂಟೇಶ್–ಅನಸೂಯ ದಂಪತಿಗಳ ಪುತ್ರಿ ಸಂಗೀತಾ ಜೊತೆ ನಂಜನಗೂಡು ತಾಲೂಕಿನ ಸಿಂಧುವಳ್ಳಿ ಗ್ರಾಮದ ಕುಮಾರ್, ರಾಜೇಶ್ವರಿ ದಂಪತಿಗಳ ಪುತ್ರ ಯೋಗೀಶ್ ಜೊತೆ ಮೇ 21 ಮತ್ತು 22ರಂದು ವಿವಾಹ ನಿಶ್ಚಯವಾಗಿತ್ತು. ಗುರುವಾರ ಬೆಳಗ್ಗೆ 9ಗಂಟೆ 5ನಿಮಿಷದಿಂದ 9–30ರತನಕ ಧಾರಾ ಮುಹೂರ್ತ ನಡೆಯಿತು.

ಮಾದಪ್ಪನಬೆಟ್ಟದಲ್ಲಿ ರೂಂ ಬೇಕಾ!! ಮೊಬೈಲ್‌ನಲ್ಲೇ ಬುಕ್ ಮಾಡಿ



ಹನೂರು: ಶ್ರೀ ಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಭಕ್ತರ ವಾಸ್ತವ್ಯಕ್ಕಾಗಿ ಶೇ.70ರಷ್ಟು ಮುಂಗಡ ಬುಕಿಂಗ್ (ಆನ್ಲೈನ್) ಮಾಡಲು ಶ್ರೀ ಕ್ಷೇತ್ರ ಮಲೆಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರ ಕ್ರಮ ಕೈಗೊಂಡಿದ್ದು, ಭಕ್ತಾದಿಗಳು ಇದರ ಪ್ರಯೋಜನವನ್ನು ಸದ್ಬಳಕೆ ಮಾಡಿಕೊಳ್ಳುವಂತೆ ಶ್ರೀ ಕ್ಷೇತ್ರ ಮಲೆಮಾದೇಶ್ವರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎ.ಈ. ರಘು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀ ಕ್ಷೇತ್ರ ಮಲೆಮಹದೇಶ್ವರ ಬೆಟ್ಟದಲ್ಲಿ ಬರುವ ಭಕ್ತರ ಅನುಕೂಲಕ್ಕಾಗಿ ಶ್ರೀ ಮಲೆ ಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ವಸತಿಗೃಹಗಳನ್ನು ನಿರ್ಮಾಣ ಮಾಡಲಾಗಿದೆ. ಈ ಹಿಂದೆಯೂ ಮುಂಗಡ ಬುಕಿಂಗ್ ವ್ಯವಸ್ಥೆ ಕಲ್ಪಿಸಲಾಗಿತ್ತು ಆದರೆ ತಾಂತ್ರಿಕ ದೋಷದಿಂದ ಕೆಲವು ತಿಂಗಳ ಕಾಲ ಸ್ಥಗಿತವಾಗಿತ್ತು. ಇದೀಗ ಶೇ.70ರಷ್ಟು ಮುಂಗಡ ಬುಕಿಂಗ್ ಮಾಡಲು ಅವಕಾಶ ನೀಡಲಾಗಿದ್ದು ಪ್ರತಿಯೊಬ್ಬರು ವಸತಿಗೃಹಗಳನ್ನು ಮುಂಗಡವಾಗಿಯೇ ಬುಕ್ ಮಾಡಿಕೊಳ್ಳಬಹುದು ಇದರಿಂದ ಸಮಯ ಉಳಿತಾಯವಾಗಲಿದೆ, ಉಳಿದಂತೆ ಶೇ.30ರಷ್ಟು ಮಾಹಿತಿ ಕೇಂದ್ರಕ್ಕೆ ತೆರಳಿ ವಸತಿಗೃಹಗಳನ್ನು ಪಡೆದುಕೊಳ್ಳಬಹುದು ಎಂದು ತಿಳಿಸಿದ್ದಾರೆ.

ಶ್ರೀ ಕ್ಷೇತ್ರ ಮಲೈ ಮಹದೇಶ್ವರಬೆಟ್ಟದ ಜೇನುಮಲೆ, ಶಿವದರ್ಶಿನಿ, ಸೂರ್ಯದರ್ಶಿನಿ, ಶೈಲ ಭವನ, ಗುರುದರ್ಶಿನಿ, ಮಹದೇಶ್ವರ ಭವನ, ಯಾತ್ರಿ ನಿವಾಸ, ಡಾರ್ಮೆಟರಿ, ನಾಗಮಲೆ ಭವನಗಳಲ್ಲಿ https://mmhillsresevation.com ವೆಬ್‌ಸೈಟ್ ಮುಖಾಂತರ ಮುಂಗಡ ಬುಕಿಂಗ್ ಮಾಡಿಕೊಳ್ಳಬಹುದು ಎಂದು ಕಾರ್ಯದರ್ಶಿ ಎ.ಈ. ರಘು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೀವನೋದ್ಧಾರಕ್ಕಾಗಿ ಕಾಯಕ ನೀಡಿದ ಲಿಂಗಾಯತ ಧರ್ಮ

ಪ್ರಭುದೇವ ಯೋಗಾಶ್ರಮದ ನವಲಿಂಗಿ ಶರಣರು ಅಭಿಮತ



ಸಮಾರಂಭದಲ್ಲಿ ಶಿವಮೊಗ್ಗ ಜಿಲ್ಲೆ ಸಂತೇಕಡೂರು ಗ್ರಾಮದ ಪ್ರಭುದೇವ ಯೋಗಾಶ್ರಮದ ನವಲಿಂಗಿ ಶರಣರು ಮಾತನಾಡುತ್ತಿರುವುದು.

ಚಾಮರಾಜನಗರ, ಮೇ 22– ಜೀವನೋದ್ಧಾರಕ್ಕಾಗಿ ಕಾಯಕ ನೀಡಿದ ಧರ್ಮ ಯಾವುದೆಂದರೆ ಅದು ಬಸವಣ್ಣ ವಿಕಾಸಗೊಳಿಸಿದ ಲಿಂಗಾಯತ ಧರ್ಮವಾಗಿದೆ ಎಂದು ಶಿವಮೊಗ್ಗ ಜಿಲ್ಲೆ ಸಂತೇಕಡೂರು ಗ್ರಾಮದ ಪ್ರಭುದೇವ ಯೋಗಾಶ್ರಮದ ನವಲಿಂಗಿ ಶರಣರು ತಿಳಿಸಿದರು.

ನಗರದ ಶ್ರೀ ಸಿದ್ದಮಲ್ಲೇಶ್ವರಸ್ವಾಮಿ ವಿರಕ್ತ ಮಠದ ಆವರಣದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಬಸವ ಧರ್ಮದ ಕುರಿತು ಮಾತನಾಡಿ, ಜಗತ್ತಿನಲ್ಲಿ ಸಕಲ ಜೀವರಾಶಿಗಳಿಗೆ ಬೇಕಾಗಿರುವ ಮೊದಲನೇ ಬೇಡಿಕೆ ಹಸಿವು, ತಾನು ದುಡಿದು, ಇತರರ ಹಸಿವು ನೀಗಿಸುವುದು, ಅದರಿಂದ ತಾನು ಸಂತೃಪ್ತಗೊಳ್ಳುವುದು ಲಿಂಗಾಯತ ಧರ್ಮದ ಸಾರವಾಗಿದೆ ಎಂದರು.

ಜೀವನೋದ್ಧಾರಕ್ಕಾಗಿ ಕಾಯಕ, ಆತ್ಮೋದ್ಧಾರಕ್ಕಾಗಿ ಶಿವಯೋಗ, ಜೀವನ್ಮುಕ್ತಿಗಾಗಿ ದಾಸೋಹದ ಪರಿಕಲ್ಪನೆ ಕೊಟ್ಟವರು ನಮ್ಮ ಬಸವಾದಿ ಶರಣರು. ದೇವರು ಗುಡಿಯಲ್ಲಿಲ್ಲ. ಆತನು ನಿನ್ನ ಆತ್ಮದಲ್ಲಿದ್ದಾನೆ. ಇದನ್ನು ಅರಿತಾಗ ನೀನೇ ಕಾಣಾದೇವಾ ಎಂದು ಬಸವಣ್ಣ ಜಗತ್ತಿಗೆ ಸಾರಿದ್ದಾನೆ. ಪ್ರಾಣಲಿಂಗವೇ ದೇವರು, ಮಿಕ್ಕಿದ್ದೆಲ್ಲ ಸ್ಥಾವರಗಳು, ನಿಮಗೆ ಜನ್ಮ ನೀಡಿದ ತಂದೆ–ತಾಯಂದಿರು, ದೇವರು ಅವರನ್ನು ಆರಾಧಿಸುವ ಕಡೆ ತಾವು ಕಾರ್ಯೋನ್ಮುಖರಾಗಿ ಎಂದು ಸಲಹೆ ನೀಡಿದರು.

ನಂತರ ಕಬ್ಬಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಶಿವರಾಜಪ್ಪ ಮಾತನಾಡಿ, ಚಾಮರಾಜನಗರ ಸಿದ್ದಮಲ್ಲೇಶ್ವರ ವಿರಕ್ತ ಮಠವನ್ನು ಸಂಕಷ್ಟದ ದಿನಗಳಲ್ಲೂ ಮುನ್ನಡೆಸಿದವರು ಹಿಂದಿನ ಶ್ರೀಗಳಾದ ಸಿದ್ದಬಸವರಾಜಶ್ರೀಗಳು, ಅವರ ಕಾಲನಂತರ ಮಠದ ಅಧಿಕಾರ ವಹಿಸಿಕೊಂಡ ಇಂದಿನ ಶ್ರೀಗಳು ಭಕ್ತರ ಸಹಕಾರದೊಂದಿಗೆ ಅಪೂರ್ಣವಾಗಿದ್ದ ಬಸವರಾಜಸ್ವಾಮಿಗಳ ಅನುಭವ ಮಂಟಪವನ್ನು ಪೂರ್ಣಗೊಳಿಸಿದ್ದಾರೆ. ಭಕ್ತಾದಿಗಳಿಗೆ ಪ್ರತಿನಿತ್ಯ ದಾಸೋಹ ನೆರವೇರಿಸಲು ಸುಸಜ್ಜಿತ ದಾಸೋಹಭವನ ನಿರ್ಮಿಸುವ ಕಾರ್ಯದಲ್ಲಿ ತೊಡಗಿದ್ದಾರೆ. ಕಾಯಕದ ಜತೆಗೆ ಶಿಕ್ಷಣಕ್ಕೂ ಇಂದಿನ ಶ್ರೀಗಳು ಒತ್ತು ನೀಡುತ್ತಿದ್ದಾರೆ. ವಿಶ್ವ ಸಾಹಿತ್ಯಕ್ಕೆ ಕರ್ನಾಟಕ ವಚನ ಸಾಹಿತ್ಯ ಅಪಾರ ಕೊಡುಗೆ ನೀಡಿದ್ದು, ಇದು ಬಹು ಸಂಸ್ಕೃತಿಯ ಕೂಡಲ ಸಂಗಮ ಎಂದರು.

ಇದೇ ವೇಳೆ ಖೋಖೋ ಕ್ರೀಡೆಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿ, ವಿಶ್ವಕಪ್ ತಂದುಕೊಟ್ಟ ಕುರುಬೂರು ಗ್ರಾಮದ ಚೈತ್ರಾ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಮರಿಯಾಲ ಮಠದ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ, ಚಾಮರಾಜನಗರ ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವ ಸ್ವಾಮೀಜಿ, ಮಾದಾಪಟ್ಟಣ ಮಠದ ತೋಂಟದಾರ್ಯ ಸ್ವಾಮೀಜಿ, ಮಾದ್ರಳ್ಳಿ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಕುಂತೂರು ಮಠದ ಶಿವಪ್ರಭು ಸ್ವಾಮೀಜಿ, ಕೊತ್ತಲವಾಡಿ ಮಠದ ಗುರುಸ್ವಾಮೀಜಿ, ಕಬ್ಬಳ್ಳಿ ಮಠದ ಗುರುಸಿದ್ದ ಸ್ವಾಮೀಜಿ, ಕಬ್ಬಳ್ಳಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಶಿವರಾಜಪ್ಪ, ಸೇರಿದಂತೆ ವಿವಿಧ ಗ್ರಾಮಗಳ ಗ್ರಾಮಸ್ಥರು, ಸಂಘ–ಸಂಸ್ಥೆಗಳ ಮುಖಂಡರು, ಮಠದ ಭಕ್ತಾದಿಗಳು ಭಾಗವಹಿಸಿದ್ದರು.

ಸಾವಿರಾರು ಭಕ್ತರಿಗೆ ಅನ್ನದಾಸೋಹ: ಬಸವ ಜಯಂತಿ ಅಂಗವಾಗಿ ಸಿದ್ದಮಲ್ಲೇಶ್ವರಸ್ವಾಮಿ ವಿರಕ್ತ ಮಠದ ಆವರಣದಲ್ಲಿ ಸಾವಿರಾರು ಭಕ್ತರಿಗೆ ಬುಧವಾರ ಸಂಜೆ ಹಾಗೂ ಗುರುವಾರ ಬೆಳಗ್ಗೆ ತಿಂಡಿ ಹಾಗೂ ಮಧ್ಯಾಹ್ನ ಅನ್ನದಾಸೋಹ ಮಾಡಲಾಗಿತ್ತು. ಚಾಮರಾಜನಗರ ಸೇರಿದಂತೆ ಜಿಲ್ಲೆ ಹಾಗೂ ಹೊರಜಿಲ್ಲೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ಜಯಂತ್ಯುತ್ಸವದಲ್ಲಿ ಪಾಲ್ಗೊಂಡಿದ್ದರು.

ಅದ್ಧೂರಿ ಕಾರ್ಯಕ್ರಮ: ನಗರದ ಶ್ರೀಸಿದ್ದಮಲ್ಲೇಶ್ವರಸ್ವಾಮಿ ವಿರಕ್ತ ಮಠದ ಆವರಣದಲ್ಲಿ ಶ್ರೀಚನ್ನಬಸವ ಸ್ವಾಮೀಜಿ ನೇತೃತ್ವದಲ್ಲಿ ಅದ್ಧೂರಿಯಾಗಿ ಗ್ರಾಮಾಂತರ ಬಸವ ಜಯಂತಿ ಆಚರಿಸಲಾಯಿತು.

ಬೆಳಗ್ಗೆ ಮಠದ ಆವರಣದಲ್ಲಿರುವ ಪೂಜ್ಯರ ಗದ್ದುಗೆಗೆ ಬಿಲ್ವಾರ್ಚನೆ ಹಾಗೂ ಮಹಾಮಂಗಳಾರತಿ, ಷಟ್ಸ್ಥಲ ಧ್ವಜಾರೋಹಣ, ಇಷ್ಟಲಿಂಗಪೂಜೆ, ಪ್ರವಚನ ಕಾರ್ಯಕ್ರಮ ನೆರವೇರಿಸಲಾಯಿತು.

ಎರಡು ದಿನಗಳ ಕಾಲ ನಡೆದ ಕಾರ್ಯಕ್ರಮದಲ್ಲಿ ಮೊದಲ ದಿನ ಬೆಳಗ್ಗೆ ಕನಕಪುರದ ಶ್ರೀಗಳ ಪಾದಪೂಜೆ ನೆರವೇರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ರಾತ್ರಿ ಭಜನೆ, ಭಕ್ತಿಗೀತೆ ಗಾಯನ ಹಾಗೂ ಭರತ ನಾಟ್ಯ ಕಾರ್ಯಕ್ರಮವು ನಡೆಯಿತು. ಗುರುವಾರ ರಾತ್ರಿ ಬದನಗುಪ್ಪೆ ಗ್ರಾಮದವರಿಂದ ಪ್ರಭುಲಿಂಗ ಲೀಲೆ ನಾಟಕ ಪ್ರದರ್ಶನದೊಂದಿಗೆ ಎರಡು ದಿನಗಳ ಕಾರ್ಯಕ್ರಮಕ್ಕೆ ತೆರೆ ಬಿದ್ದಿತು.

ಬಸವ ಜಯಂತಿ ಕಾರ್ಯಕ್ರಮದ ಅಂಗವಾಗಿ ಶ್ರೀಮಠವನ್ನು ವಿವಿಧ ಬಣ್ಣದ ವಿದ್ಯುತ್ ದೀಪಾಲಂಕಾರದಿಂದ ಸಿಂಗರಿಸಲಾಗಿತ್ತು.

ಕಿರುಕುಳ ತಾಳಲಾರದೆ ವ್ಯಕ್ತಿ ಆತ್ಮಹತ್ಯೆ

ಯಳಂದೂರು: ತನ್ನ ಮನೆಯ ನೆರೆಹೊರೆಯವರು ನನ್ನ ವಾಸದ ಮನೆಯ ಬಳಿ ತಿರುಗಾಡಲು ಸ್ಥಳ ನೀಡುತ್ತಿಲ್ಲ ಎಂದು ಆರೋಪಿಸಿ ವ್ಯಕ್ತಿಯೊಬ್ಬರು ಡೆತ್ ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮಂಗಳವಾರ ತಾಲೂಕಿನ ಅಗರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರಂಗಸ್ವಾಮಿ (40) ನೇಣಿಗೆ ಶರಣಾದ ವ್ಯಕ್ತಿ. ಇವರಿಗೆ ಪತ್ನಿ ಜ್ಯೋತಿ ಹಾಗೂ ಒಬ್ಬ ಗಂಡು, ಒಬ್ಬ ಹೆಣ್ಣು ಮಗಳಿದ್ದಾಳೆ. ಈ ಬಗ್ಗೆ ಪತ್ನಿ ಜ್ಯೋತಿ ಅಗರ–ಮಾಂಬಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ರಂಗಸ್ವಾಮಿ ತಮ್ಮ ಮನೆಯ ಬಳಿ ತಿರುಗಾಡಲು ತಮ್ಮ ನೆರೆಹೊರೆಯವರು ತೊಂದರೆ ನೀಡುತ್ತಿದ್ದರು. ಇವರ ಕಿರುಕುಳ ತಾಳಲಾರದೆ ನಾನು ಆತ್ಮಹತ್ಯೆ ಮಾಡಿಕೊಂಡಿದ್ದೇನೆ ಎಂದು ಡೆತ್‌ನೋಟ್ ಬರೆದು ತಮ್ಮ ಮನೆಯ ಪಕ್ಕದಲ್ಲಿದ್ದ ಪ್ರಕಾಶ್ ಎಂಬುವರ ಜಮೀನಿನಲ್ಲಿ ಮರಕ್ಕೆ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸ್ಥಳಕ್ಕೆ ಡಿವೈಎಸ್ಪಿ ಧರ್ಮೇಂದ್ರ, ಸಿಪಿಐ ಕೆ. ಶ್ರೀಕಾಂತ್, ಪಿಎಸ್‌ಐ ಆಕಾಶ್, ಪೇದೆಗಳಾದ ಪರಶಿವ, ಚಿಕ್ಕಸ್ವಾಮಿ, ಬಸವರಾಜು ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮ ವಹಿಸಿದ್ದಾರೆ.

ಗೃಹಲಕ್ಷ್ಮಿ ಯೋಜನೆ ಅನುಷ್ಠಾನದಲ್ಲಿ ಚಾ.ನಗರ ಜಿಲ್ಲೆ ರಾಜ್ಯದಲ್ಲೇ ಪ್ರಥಮ

ಚಾಮರಾಜನಗರ, ಮೇ 22– ಮಹಿಳೆಯರು ಆರ್ಥಿಕವಾಗಿ ಸದೃಢಗೊಂಡು ಸ್ವಾವಲಂಬಿ ಬದುಕು ಸಾಗಿಸಬೇಕೆಂಬ ಉದ್ದೇಶದಿಂದ ಸರ್ಕಾರ ಜಾರಿಗೊಳಿಸಿದ ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಪ್ರಮುಖವಾದ ಗೃಹಲಕ್ಷ್ಮಿ ಯೋಜನೆಯಲ್ಲಿ ಚಾಮರಾಜನಗರ ಜಿಲ್ಲೆ ರಾಜ್ಯದಲ್ಲೇ ಮೊದಲ ಸ್ಥಾನದಲ್ಲಿದೆ.

ಪಡಿತರ ಕಾರ್ಡ್ ಹೊಂದಿರುವ ಕುಟುಂಬದ ಯಜಮಾನಿ ಮಹಿಳೆಗೆ ಪ್ರತಿ ತಿಂಗಳು 2 ಸಾವಿರ ರೂ. ನೀಡುವ ಗೃಹಲಕ್ಷ್ಮಿ ಯೋಜನೆಗೆ 2023ರ ಜುಲೈ 19 ರಂದು ಚಾಲನೆ ನೀಡಲಾಯಿತು. ಆಗಸ್ಟ್ 2023ರಲ್ಲಿ ಫಲಾನುಭವಿಗಳಿಗೆ ಮೊದಲ ಕಂತಿನ ಹಣ ಜಮೆಯಾಯಿತು.

ಚಾಮರಾಜನಗರ ಜಿಲ್ಲೆಯು ಗೃಹಲಕ್ಷ್ಮಿ ಯೋಜನೆ ಅನುಷ್ಠಾನದಲ್ಲಿ 2025ರ ಏಪ್ರಿಲ್ ಮಾಹೆಯ ಅಂತ್ಯಕ್ಕೆ ಶೇ.99.97ರಷ್ಟು ಪ್ರಗತಿ ಸಾಧಿಸಿ ಇಡೀ ರಾಜ್ಯದಲ್ಲಿಯೇ ಅಗ್ರಸ್ಥಾನದಲ್ಲಿದೆ. ಜಿಲ್ಲೆಯಲ್ಲಿ ಈವರೆಗೆ 2,77,464 ಫಲಾನುಭವಿಗಳು ಗೃಹಲಕ್ಷ್ಮಿ ಯೋಜನೆಗೆ ನೋಂದಾಯಿಸಿದ್ದಾರೆ. 2025ರ ಏಪ್ರಿಲ್ ಮಾಹೆಯ ಅಂತ್ಯಕ್ಕೆ ಫಲಾನುಭವಿಗಳ ಖಾತೆಗೆ ಒಟ್ಟು 39,49,50,000 ರೂ. ಜಮೆಯಾಗಿದೆ.

ಚಾಮರಾಜನಗರ ತಾಲೂಕಿನಲ್ಲಿ 97359, ಗುಂಡ್ಲುಪೇಟೆ ತಾಲೂಕಿನಲ್ಲಿ 62111, ಹನೂರು ತಾಲೂಕಿನಲ್ಲಿ 48562, ಕೊಳ್ಳೇಗಾಲ ತಾಲೂಕಿನಲ್ಲಿ 46933 ಹಾಗೂ ಯಳಂದೂರು ತಾಲೂಕಿನಲ್ಲಿ 22499 ಫಲಾನುಭವಿಗಳು ಗೃಹಲಕ್ಷ್ಮಿ ಯೋಜನೆಗೆ ನೋಂದಣಿಯಾಗಿದ್ದಾರೆ. ಗೃಹಲಕ್ಷ್ಮಿ ಯೋಜನೆಯಿಂದ ಬಂದ ಹಣದಿಂದ ಮಹಿಳೆಯರು ವೈಯಕ್ತಿಕ ಬದುಕಿನ ಸಬಲೀಕರಣದ ಜೊತೆ ಸಮಾಜದಲ್ಲಿ ಇತರರಿಗೂ ನೆರವಾಗುತ್ತಿದ್ದಾರೆ. ಅನೇಕರು ಗೃಹಲಕ್ಷ್ಮಿ ಹಣದಿಂದ ಬದುಕು ಕಟ್ಟಿಕೊಂಡಿದ್ದಾರೆ. ಆರ್ಥಿಕವಾಗಿ ಮುಂದೆ ಬರುವ ಸ್ವಯಂ ಉದ್ಯೋಗಕ್ಕೆ ಗೃಹಲಕ್ಷ್ಮಿ ಹಣವನ್ನು ಬಳಕೆ ಮಾಡಿಕೊಂಡಿರುವುದು ವಿಶೇಷವಾಗಿದೆ.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಮೇ 22– ಸಂತೇಮರಹಳ್ಳಿ ಉಪವಿಭಾಗ ವ್ಯಾಪ್ತಿಯಲ್ಲಿ 1ನೇ ತ್ರೈಮಾಸಿಕ ನಿರ್ವಹಣೆ ಕಾಮಗಾರಿಯನ್ನು ಮೇ 24ರಂದು ಹಮ್ಮಿಕೊಂಡಿರುವುದರಿಂದ ಅಂದು ಬೆಳಿಗ್ಗೆ 9 ರಿಂದ ಸಂಜೆ 6 ಗಂಟೆಯವರೆಗೆ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

ಹೊಂಗನೂರು, ಇರಸವಾಡಿ, ಮಸಣಾಪುರ, ಚಾಟಿಪುರ, ಗಂಗವಾಡಿ, ಬೂದಂಬಳ್ಳಿ, ಬೂದಂಬಳ್ಳಿ ಮೋಳೆ, ಗೂಳಿಪುರ, ಹೊಮ್ಮ, ರೇಚಂಬಳ್ಳಿ, ಹೆಚ್. ಮೂಕಳ್ಳಿ, ಕುರುಬರಹುಂಡಿ ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಸಾರ್ವಜನಿಕರು ನಿಗಮದ ಜೊತೆ ಸಹಕರಿಸಬೇಕು. ವಿದ್ಯುತ್ ಸಂಬಂಧಿತ ದೂರು ಮತ್ತು ಸಹಾಯಕ್ಕಾಗಿ ಗ್ರಾಹಕರು ಉಚಿತ ದೂರವಾಣಿ ಸಂಖ್ಯೆ 1912 ಸಂಪರ್ಕಿಸುವಂತೆ ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರಿಗೆ ಬಂದ ವ್ಯಕ್ತಿ ನಾಪತ್ತೆ



ಕೊಳ್ಳೇಗಾಲ ಮೇ 22– ತಾಲೂಕಿನ ಕುಣಗಳ್ಳಿ ಗ್ರಾಮದ ವ್ಯಕ್ತಿಯೊಬ್ಬರು ಕಾಣೆಯಾಗಿರುವ ಘಟನೆ ಜರುಗಿದೆ.

ಕುಣಗಳ್ಳಿ ಗ್ರಾಮದ ಗುತ್ತಿಗೆದಾರ ಕೆ.ಎನ್. ಲಿಂಗರಾಜು (44) ಎಂಬಾತ ಕಾಣೆಯಾದ ವ್ಯಕ್ತಿ.

ಈತ ಎಂದಿನಂತೆ ಮೇ 14 ರಂದು ಮೈಸೂರಿನ ಕುದುರೆ ರೇಸ್‌ಗೆ ಹೋಗಿ ಬರುವುದಾಗಿ ಹೇಳಿ ಹೋದವನು ಇದುವರೆಗೂ ವಾಪಸ್ಸು ಬಾರದ ಕಾರಣ ಈತನ ತಾಯಿ ಲಿಂಗರಾಜಮ್ಮ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ.

ಈ ಸಂಬಂಧ ಅಗರ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ನಾಪತ್ತೆಯಾದ ವ್ಯಕ್ತಿಯ ಪತ್ತೆಗೆ ಕ್ರಮ ಜರುಗಿಸಿದ್ದಾರೆ. ಈತನ ಬಗ್ಗೆ ಯಾರಿಗಾದರೂ ಸುಳಿವು ದೊರೆತಲ್ಲಿ ಪೊಲೀಸ್ ಠಾಣೆಯ ನಂಬರ್ 9480804654, 08224 295176 ಕರೆ ಮಾಡುವಂತೆ ಪೊಲೀಸರು ಮನವಿ ಮಾಡಿದ್ದಾರೆ.

ಸಾರಿ ಹೇಳುವೆ ಜಗಕೆ...

ಸೀಟ್‌ಎಡ್ಜ್‌ನಲ್ಲಿ ಹೊಸ ಹಾಡು





ಕಿರುತೆರೆ, ಹಿರಿತೆರೆಯಲ್ಲಿ ತನ್ನದೇ ಛಾಪು ಮೂಡಿಸಿರುವ ಸಿದ್ದುಮೂಲಿಮನಿ ನಾಯಕನಾಗಿ ನಟಿಸಿರುವ ಚಿತ್ರ ಸೀಟ್‌ಎಡ್ಜ್, ಎನ್.ಆರ್.ಸಿನಿಮಾಸ್ ಅಡಿಯಲ್ಲಿ ಗಿರಿಧರ ಟಿ.ವಸಂತಪುರ ಮತ್ತು ಸುಜಾತ ಗಿರಿಧರ್ ನಿರ್ಮಿಸುತ್ತಿರುವ ಈ ಸಿನಿಮಾಕ್ಕೆ ಚೇತನ್ ಶೆಟ್ಟಿ ಆಕ್ಷನ್ ಕಟ್ ಹೇಳುತ್ತಿದ್ದಾರೆ.

ಕೆಮಿಸ್ಟ್ರಿ ಆಫ್ ಕರಿಯಪ್ಪ ಹಾಗೂ ಕ್ರಿಟಿಕಲ್ ಕೀರ್ತನೆಗಳು ಚಿತ್ರಗಳ ಸಹ ನಿರ್ದೇಶಕರಾಗಿ ಕೆಲಸ ಮಾಡಿರುವ ಚೇತನ್‌ಶೆಟ್ಟಿ ಸೀಟ್‌ಎಡ್ಜ್ ಮೂಲಕ ಸ್ವತಂತ್ರ ನಿರ್ದೇಶಕರಾಗಿ ಪರಿಚಯವಾಗುತ್ತಿದ್ದಾರೆ.

ಸೀಟ್‌ಎಡ್ಜ್ ಸಿನಿಮಾದ ಹಾಡುಗಳಿಗೆ ಆಕಾಶ್‌ಪರ್ವ ಅವರು ಸಂಗೀತ ಸಂಯೋಜಿಸಿದ್ದು, ಕೆಲ ದಿನಗಳ ಹಿಂದಷ್ಟೇ ಈ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿತ್ತು. ಸಿದ್ದು ಕೊಡಿಪುರ ಅವರ ಸಾಹಿತ್ಯದ ರೊಮ್ಯಾಂಟಿಕ್ ಗೀತೆ ಇದಾಗಿದ್ದು, ಇದನ್ನು ಅರ್ಮನ್ ಮಲ್ಲಿಕ್ ಹಾಡಿದ್ದರು. ಇದೀಗ ಸಾರಿ ಹೇಳುವೆ ಜಗಕ್ಕೆ ಎಂಬ ಮತ್ತೊಂದು ಸುಂದರ ಗೀತೆ ಬಿಡುಗಡೆಯಾಗಿದ್ದು, ಈ ಹಾಡಲ್ಲಿ ನಾಯಕ ಸಿದ್ದು ಮೂಲಿಮನಿ ಹಾಗೂ ನಾಯಕಿ ರವೀಕ್ಷಾ ಜೊತೆಯಾಗಿ ಹೆಜ್ಜೆ ಹಾಕಿದ್ದಾರೆ. ಇದರ ಬೆನ್ನಲ್ಲೇ ಇತ್ತೀಚೆಗಷ್ಟೇ ಸೀಟ್‌ಎಡ್ಜ್ ಚಿತ್ರದ ಅಂಗೋ ಇಂಗೋ ಎಂಬ ಮತ್ತೊಂದು ವಿಡಿಯೋ ಸಾಂಗ್ ಕೂಡ ಬಿಡುಗಡೆಯಾಗಿದೆ. ಲಕ್ಷ್ಮಿ ರಮೇಶ್ ಅವರ ಸಾಹಿತ್ಯವಿರುವ ಈ ಹಾಡಿಗೆ ಗಾಯಕ ಟಿಪ್ಪು ದನಿಯಾಗಿದ್ದಾರೆ. ಪಕ್ಕಾ ಮಾಸ್ ಆಗಿ, ಅಷ್ಟೇ ಕಲರ್‌ಫುಲ್ ಆಗಿ ಈ ಹಾಡು ಮೂಡಿಬಂದಿದೆ.

ಯೂಟ್ಯೂಬ್ ಬ್ಲಾಗರ್ ಆದ ಹುಡುಗನೊಬ್ಬನ ಘೋಸ್ಟ್ ಹಂಟಿಂಗ್ ಸಾಹಸ, ಅದರಲ್ಲಿ ಆತ ಏನೇನು ಸಮಸ್ಯೆಗಳನ್ನು ಎದುರಿಸುತ್ತಾನೆ ಎನ್ನುವುದರ ಸುತ್ತ ಇಡೀ ಸಿನಿಮಾದ ಕಥೆ ಸಾಗುತ್ತದೆ. ಬೆಂಗಳೂರು, ಮೈಸೂರು ಹಾಗೂ ಶಿವಮೊಗ್ಗದ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಈ ಚಿತ್ರಕ್ಕೆ ದೀಪಕ್‌ಕುಮಾರ್ ಅವರ ಛಾಯಾಗ್ರಹಣ, ನಾಗೇಂದ್ರ ಉಜ್ಜನಿ ಅವರ ಸಂಕಲನವಿದೆ, ಸದ್ಯ ಈ ಚಿತ್ರದ ಸಿ.ಜಿ.(ಕಂಪ್ಯೂಟರ್‌ಗ್ರಾಫಿಕ್ಸ್) ಕೆಲಸಗಳು ನಡೆಯುತ್ತಿದ್ದು, ಬರುವ ಜುಲೈನಲ್ಲಿ ಚಿತ್ರವನ್ನು ಬಿಡುಗಡೆ ಮಾಡಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ.

ರೈತನ ಬದುಕು ಬವಣೆ ಹೇಳುವ ಚಿತ್ರ ಅಥಣಿ





ರುಧಿರ ಕಣಿವೆ, ನವ ಇತಿಹಾಸದಂತಹ ಚಿತ್ರಗಳನ್ನು ನಿರ್ದೇಶಿಸಿದ ಸಮರ್ಥ್ ಎಂ. ನಿರ್ದೇಶನದ ಜತೆಗೆ ನಾಯಕನಾಗಿಯೂ ನಟಿಸಿರುವ ಚಿತ್ರ 'ಅಥಣಿ'. ಮೂಲತಃ ರೈತರಾಗಿರುವ ವಾಸುದೇವ ಆರ್. ನಿರ್ಮಿಸಿರುವ ಈ ಚಿತ್ರದ ಟ್ರೇಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನೆರವೇರಿತು. ಅಥಣಿ ಒಂದು ಊರಿನ ಹೆಸರಾಗಿದ್ದು, ರೈತನ ಬದುಕು ಬವಣೆಗಳ ಸುತ್ತ ನಡೆಯೋ ಕಥೆ ಇಟ್ಟುಕೊಂಡು ಸಮರ್ಥ ಅವರು ಈ ಚಿತ್ರವನ್ನು ನಿರೂಪಿಸಿದ್ದಾರೆ.

ಮೊದಲು ಮಾತನಾಡಿದ ನಿರ್ದೇಶಕ ಸಮರ್ಥ್, ಎಲ್ಲಾ ಊರುಗಳಲ್ಲಿ ರೈತರು ಎದುರಿಸುತ್ತಿರುವ ಒಂದಷ್ಟು ಸಮಸ್ಯೆಗಳನ್ನು ಚಿತ್ರದಲ್ಲಿ ತೋರಿಸಿದ್ದೇವೆ. ಅಥಣಿ ಒಂದು ಕಾಲ್ಪನಿಕ ಊರು. ಉತ್ತರ ಕರ್ನಾಟಕದ ಅಥಣಿಗೂ ನಮ್ಮ ಚಿತ್ರದ ಕಥೆಗೂ ಸಂಬಂಧ ವಿಲ್ಲ. ನಾವು ರೈತರಪರ ಇದ್ದೇವೆ ಎಂದು ಹೇಳುವ ಯಾವ ರಾಜಕಾರಣಿಯೂ ರೈತನ ಕಷ್ಟಕ್ಕೆ ನೆರವಾಗುವುದಿಲ್ಲ. ಈ ಚಿತ್ರದ ಮತ್ತೊಂದು ವಿಶೇಷವೆಂದರೆ ರೈತನ ಪರ ಕಾಳಜಿಯಿರುವ ಮೂಲತಃ ರೈತರಾದ ವಾಸುದೇವ್ ಅವರೇ ಚಿತ್ರದ ನಿರ್ಮಾಪಕರು. ಧರಣಿಮಂಡಲ ಮಧ್ಯದೊಳಗೆ ಎಂಬ ಅಡಿಬರಹವಿರೋ ಈ ಚಿತ್ರದಲ್ಲಿ ರೈತನ ಕಥೆಯ ಜೊತೆಗೆ ಸಸ್ಪೆನ್ಸ್, ಥ್ರಿಲ್ಲರ್ ಕಾನ್ಸೆಪ್ಟ್ ಕೂಡ ಇದೆ. ಚಿತ್ರದ ನಾಯಕನಾಗಿ ನಾನೇ ನಟಿಸಿದ್ದೇನೆ. ಮಧು ಅವರು ನಾಯಕಿ ಪಾತ್ರ ನಿರ್ವಹಿಸಿದ್ದಾರೆ. ಹರ್ಷ ಕಾಗೋಡು ಅವರ ಸಂಗೀತ ನಿರ್ದೇಶನ, ಸಂದೀಪ್ ಹೊನ್ನಾಳಿ ಅವರ ಛಾಯಾಗ್ರಹಣ, ಸುನಯ್ ಜೈನ್ ಅವರು ಸಂಕಲನ ಜೊತೆಗೆ ಛಾಯಾಗ್ರಹಣವನ್ನು ಮಾಡಿದ್ದಾರೆ. ಇತ್ತೀಚೆಗಷ್ಟೇ ನಿಧನರಾದ ರಾಕೇಶ್ ಪೂಜಾರಿ ಕೂಡ ಚಿತ್ರದಲ್ಲಿ ನನ್ನ ಮಾವನ ಪಾತ್ರದಲ್ಲಿ ಅಭಿನಯಿಸಿದ್ದಾರೆ. ಶೋಭರಾಜ್, ಯತಿರಾಜ್, ಭವ್ಯ, ಹನುಮಂತೇಗೌಡ, ಬಲರಾಜವಾಡಿ, ನಾಗೇಂದ್ರ ಅರಸ್ ಹೀಗೆ ಸಾಕಷ್ಟು ಹಿರಿಯ ಕಲಾವಿದರು ಚಿತ್ರದಲ್ಲಿದ್ದಾರೆ. ಸದ್ಯದಲ್ಲೇ ಚಿತ್ರವನ್ನು ತೆರೆಗೆ ತರುವ ತಯಾರಿ ನಡೆಯುತ್ತಿದೆ ಎಂದರು.

ನಿರ್ಮಾಪಕ ವಾಸುದೇವ್ ಆರ್. ದೊಡ್ಡಹೆಜ್ಜಾಜಿ ಮಾತನಾಡುತ್ತಾ, ನಾನೊಬ್ಬ ರೈತನಾಗಿರುವುದರಿಂದ ರೈತನ ಕಷ್ಟವನ್ನು ಕಣ್ಣಾರೆ ಕಂಡಿದ್ದೇನೆ. ಹಾಗಾಗಿ ಸಮರ್ಥ್ ಅವರು ಹೇಳಿದ ಕಥೆ ಇಷ್ಟವಾಗಿ ಚಿತ್ರಕ್ಕೆ ಬಂಡವಾಳ ಹಾಕಿದ್ದೇನೆ ಎಂದು ಹೇಳಿದರು.

ನಾಯಕಿ ಮಧು ಮಾತನಾಡಿ, ಚಿತ್ರದಲ್ಲಿ ನಾನೊಬ್ಬ ಹೋರಾಟಗಾರ್ತಿಯಾಗಿ ಕಾಣಿಸಿಕೊಂಡಿದ್ದೇನೆ ಎಂದರು. ಈ ಚಿತ್ರದಲ್ಲಿ ತಾನೊಬ್ಬ ವೈದ್ಯನಾಗಿ ಕಾಣಿಸಿಕೊಂಡಿರುವುದಾಗಿ ನಾಗೇಂದ್ರ ಅರಸ್ ಹೇಳಿದರು, ಛಾಯಾಗ್ರಾಹಕ, ಸಂಕಲನಕಾರ ಸುನಯ್ ಎಸ್.ಜೈನ್, ಕಾರ್ಯಕಾರಿ ನಿರ್ಮಾಪಕರಾದ ರಜನಿ(ಪರಿಸರ ಪ್ರೇಮಿ) ಅವರುಗಳು ಅಥಣಿ ಚಿತ್ರದ ಕುರಿತಂತೆ ಮಾತನಾಡಿದರು.

ಗೌರಿಶ್ರೀ ನಿರ್ದೇಶನದ ಆಕ್ರೋಶ



ಸಿನಿಮಾಗಳಲ್ಲಿ ಅಭಿನಯಿಸಬೇಕೆಂದರೆ ಮೊದಲು ಕಿರುಚಿತ್ರಗಳಲ್ಲಿ ನಟಿಸಿ ಅನುಭವ ಪಡೆಯಬೇಕು. ಯಶ್ವಂತ್ ಎಂಬ ಯುವ ಪ್ರತಿಭೆ ಚಿತ್ರರಂಗದಲ್ಲಿ ನಟಿಸಲು ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದಾರೆ, ಅದಕ್ಕೂ ಮುನ್ನ ಗೌರಿಶ್ರೀ ಅವರ ನಿರ್ದೇಶನದ ಆಕ್ರೋಶ ಎಂಬ ಕಿರುಚಿತ್ರದಲ್ಲಿ ನಟಿಸಿ ತನ್ನ ಪ್ರತಿಭೆ ಏನು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಇವರ ತಂದೆ ಜಗದೀಶ್ ವರ್ಮ ನಿರ್ಮಾಣದ ಈ ಕಿರುಚಿತ್ರದ ಪ್ರದರ್ಶನ ಹಾಗೂ ಪತ್ರಿಕಾಗೋಷ್ಠಿ ಇತ್ತೀಚೆಗೆ ನಡೆಯಿತು. ಹಿರಿಯ ನಿರ್ದೇಶಕ ಓಂ ಸಾಯಿಪ್ರಕಾಶ್, ಪುರುಷೋತ್ತಮ್ ಓಂಕಾರ್ ಮುಖ್ಯ ಅತಿಥಿಗಳಾಗಿ ಆಗಮಿಸಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ನಿರ್ದೇಶಕಿ ಗೌರಿಶ್ರೀ ಮಾತನಾಡುತ್ತಾ, ಸ್ನೇಹಿತೆಯೊಬ್ಬರ ಮೂಲಕ ಪರಿಚಯವಾದ ನಿರ್ಮಾಪಕ ಜಗದೀಶ್ ವರ್ಮ ಅವರು ನನ್ನ ಮಗ ಯಶ್ವಂತ್‌ನನ್ನು ಸಿನಿಮಾ ಹೀರೋ ಮಾಡಬೇಕೆಂದಿದ್ದೇನೆ ಎಂದರು. ಸಿನಿಮಾಗಿಂತ ಮುಂಚೆ ಆತನಿಗಾಗಿ ಒಂದು ಕಿರುಚಿತ್ರ ಮಾಡೋಣ. ಆತ ಇನ್ನೂ ಹೊಸ ಹುಡುಗ, ಮೊದಲು ಅಭಿನಯ ಕಲಿಯಲಿ. ನಂತರ ಸಿನಿಮಾ ಮಾಡೋಣ ಅಂದಾಗ ಹುಟ್ಟಿದ ಕಿರುಚಿತ್ರವೇ ಆಕ್ರೋಶ. ಯಶ್ವಂತ್ ತನ್ನ ಹಾವಭಾವದ ಮೂಲಕವೇ ನವರಸಗಳನ್ನು ಪ್ರದರ್ಶಿಸಿದ್ದಾನೆ. ಮುಂದೆ ದೊಡ್ಡ ಹೀರೋ ಆಗುವ ಎಲ್ಲಾ ಲಕ್ಷಣಗಳು ಆತನಲ್ಲಿವೆ. ಈ ಹಿಂದೆ ನಾನು ಅಮೂಲ್ಯ, ರೀತು, ಜನರಕ್ಷಕ, ಭಾರತಿ ಐಪಿಎಸ್‌ನಂತಹ ಬೇರೆ ಬೇರೆ ಜಾನರ್ ಚಿತ್ರಗಳನ್ನು ನಿರ್ದೇಶಿಸಿದ್ದೇನೆ. ಇನ್ನು ಆಕ್ರೋಶ ಕಿರುಚಿತ್ರದ ಕಥೆ ಒಂದೇ ದಿನದಲ್ಲಿ ಸಿದ್ಧವಾಯಿತು. ಎರಡೇ ದಿನದಲ್ಲಿ ಚಿತ್ರೀಕರಣ ಕೂಡ ಮಾಡಿದೆವು. ಯಶ್ವಂತ್‌ಗೆ ಕನ್ನಡ ಬಾರದಿದ್ದರೂ ಕಲಿತು ಅಭಿನಯಿಸಿದ್ದಾರೆ. ಸದ್ಯದಲ್ಲೇ ಇವರೇ ನಾಯಕನಾಗಿ ನಟಿಸಲಿರುವ ಹೊಸಚಿತ್ರ ಪ್ರಾರಂಭವಾಗಲಿದೆ. ರಾಜಾರವಿ ಅವರ ಛಾಯಾಗ್ರಹಣ, ವಿನು ಮನಸು ಅವರ ಸಂಗೀತ ನಿರ್ದೇಶನ, ಶಿವರಾಜ್ ಮೇಹು ಅವರ ಸಂಕಲನವಿರುವ ಈ ಚಿತ್ರದಲ್ಲಿ ಯಶ್ವಂತ್, ಗುರುರಾಜ್ ಹೊಸಕೋಟೆ, ಭಾಗ್ಯ, ಪ್ರೇಮ ಮಾಲೂರು ಮುಂತಾದವರಿದ್ದಾರೆ. ನಾನು ಕೂಡ ಅಭಿನಯಿಸಿದ್ದೇನೆ ಎಂದು ಹೇಳಿದರು.

ಆಕ್ರೋಶ ನನ್ನ ಮೊದಲ ಪ್ರಯತ್ನ, ನಿರ್ದೇಶಕರು ಹೇಳಿಕೊಟ್ಟ ಹಾಗೆ ಮಾಡಿದ್ದೇನೆ ಎಂದು ನಾಯಕನಟ ಯಶ್ವಂತ್ ಹೇಳಿದರು.

'ನಾಯಿ ಇದೆ ಎಚ್ಚರಿಕೆ' ಟ್ರೈಲರ್ ಬಿಡುಗಡೆ




ನಂಬಿಕೆಗೆ ಮತ್ತೊಂದು ಹೆಸರೇ ನಾಯಿ. ಅದನ್ನು ಸಾಕಿದವರ ಮನೆ ಮುಂದೆ ಸಾಮಾನ್ಯವಾಗಿ ಕಾಣಿಸುವ ಬೋರ್ಡ್ ನಾಯಿ ಇದೆ ಎಚ್ಚರಿಕೆ. ಈಗ ಇದೇ ಸಿನಿಮಾ ಶೀರ್ಷಿಕೆಯಾಗಿರುವುದು ವಿಶೇಷ. ವೃತ್ತಿಯಲ್ಲಿ ವೈದ್ಯರಾದ ಡಾ. ಲೀಲಾ ಮೋಹನ್ ಇದೇ ಶೀರ್ಷಿಕೆಯಡಿ ಚಿತ್ರವೊಂದನ್ನು ನಿರ್ಮಿಸುವ ಜತೆಗೆ ನಾಯಕನಾಗೂ ಕಾಣಿಸಿಕೊಂಡಿದ್ದಾರೆ. ಈ ಚಿತ್ರಕ್ಕೆ ಕಲಿಗೌಡ ಕಥೆ, ಚಿತ್ರಕಥೆ ಬರೆದು ಆಕ್ಷನ್‌ಕಟ್ ಹೇಳಿದ್ದಾರೆ, ಈ ಮೊದಲು ಡಾ.ಲೀಲಾ ಮೋಹನ್ ಅವರು ಗಡಿಯಾರ, ಕ್ರೌರ್ಯ, ಉಗ್ರಾವತಾರ, ಪುಟಾಣಿ ಪಂಟರುಗಳು, ರೋಡ್‌ಕಿಂಗ್ ಮತ್ತು ತೆಲುಗಿನ ಕಲ್ಯಾಣಮಸ್ತು ಚಿತ್ರಗಳಲ್ಲಿ ನಟಿಸಿದ್ದಾರೆ.

ಇತ್ತೀಚೆಗೆ ನಾಯಿ ಇದೆ ಎಚ್ಚರಿಕೆ ಚಿತ್ರದ ಟ್ರೈಲರ್ ಹಾಗೂ ಹಾಡುಗಳನ್ನು ನಿರ್ದೇಶಕ ಇಂದ್ರಜಿತ್ ಲಂಕೇಶ್, ನಟ ಪ್ರಥಮ್ ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭ ಹಾರೈಸಿದರು.

ನಿರ್ದೇಶಕ ಕಲಿಗೌಡ ಮಾತನಾಡುತ್ತಾ, ನಿರ್ದೇಶಕನಾಗಿ ಇದು ನನ್ನ ಎರಡನೇ ಚಿತ್ರ. ನಾಯಿ ನಿಯತ್ತಿನ ಪ್ರಾಣಿ ಎಂದು ಎಲ್ಲರಿಗೂ ಗೊತ್ತು. ಅದು ಬದುಕಿದಾಗಷ್ಟೇ ಅಲ್ಲ. ಸತ್ತಮೇಲೂ ಅದರ ನಿಯತ್ತು ಕಡಿಮೆ ಆಗಲ್ಲ ಎಂಬುದನ್ನು ನಮ್ಮ ಚಿತ್ರದ ಮೂಲಕ ತೋರಿಸಿದ್ದೇವೆ. ನಾನು ಹೇಳಿದ ಕಥೆ ಇಷ್ಟಪಟ್ಟು ಲೀಲಾ ಮೋಹನ್ ಅವರು ಚಿತ್ರವನ್ನು ನಿರ್ಮಿಸಿದ್ದಾರೆ ಎಂದರು.

ನಾಯಿ ಇದೆ ಎಚ್ಚರಿಕೆ ಚಿತ್ರದ ನಾಯಕ ಹಾಗೂ ನಿರ್ಮಾಪಕ ಡಾ.ಲೀಲಾ ಮೋಹನ್ ಮಾತನಾಡುತ್ತಾ, ನಾನು ವೃತ್ತಿಯಲ್ಲಿ ವೈದ್ಯ. ಈ ಚಿತ್ರದಲ್ಲೂ ಲೀಲಾ ಎಂಬ ವೈದ್ಯನಾಗಿ ಕಾಣಿಸಿಕೊಂಡಿದ್ದೇನೆ. ನಾಯಿ ಹಾಗೂ ಮನುಷ್ಯನ ನಡುವಿನ ಭಾವನಾತ್ಮಕ ಬಾಂಧವ್ಯದ ಕಥೆ ಚಿತ್ರದಲ್ಲಿದೆ. ಜೊತೆಗೆ ನಾಯಿ ಕಚ್ಚುವುದರಿಂದ ಆಗುವ ದುಷ್ಪರಿಣಾಮಗಳನ್ನು ಕೂಡ ಈ ಚಿತ್ರದಲ್ಲಿ ತೋರಿಸಿದ್ದೇವೆ, ಇದರ ಜೊತೆಗೆ ಸಸ್ಪೆನ್ಸ್, ಥ್ರಿಲ್ಲರ್, ಹಾರರ್, ಸೆಂಟಿಮೆಂಟ್ ಹೀಗೆ ಎಲ್ಲಾ ರೀತಿಯ ಅಂಶಗಳನ್ನು ಇಟ್ಟುಕೊಂಡು ಮನರಂಜನಾತ್ಮಕವಾಗಿ ಚಿತ್ರ ನಿರೂಪಿಸಿದ್ದೇವೆ. ದಿವ್ಯಶ್ರೀ ಅವರು ಚಿತ್ರದ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಪ್ರಮೋದ್ ಶೆಟ್ಟಿ ಬಲರಾಜವಾಡಿ, ದಿನೇಶ್ ಮಂಗಳೂರು, ನಾಗೇಂದ್ರ ಅರಸ್ ಪ್ರಮುಖ ತಾರಾಬಳಗದಲ್ಲಿದ್ದಾರೆ. ಈಗಾಗಲೇ ಸೆನ್ಸಾರ್ ಅಂಗಳದಲ್ಲಿರುವ ನಾಯಿ ಇದೆ ಎಚ್ಚರಿಕೆ ಚಿತ್ರವನ್ನು ಮುಂದಿನ ತಿಂಗಳಲ್ಲಿ ತೆರೆಗೆ ತರುವ ಪ್ರಯತ್ನ ಮಾಡುತ್ತಿದ್ದೇವೆ ಎಂದು ಹೇಳಿದರು. ನಾಯಕಿ ದಿವ್ಯಶ್ರೀ, ಮಾನಸ ಹಾಗೂ ಸಂಗೀತ ನಿರ್ದೇಶಕ ಮ್ಯಾಡ್ ಡಿ ಚಿತ್ರದ ಕುರಿತಂತೆ ಸಂಕ್ಷಿಪ್ತವಾಗಿ ಮಾತನಾಡಿದರು.

ಸಿನಿಪದಬಂಧ-577



ಉಮ್ಮತ್ತೂರು ಇಂದುಶೇಖರ್
ಮೊ.9880820462



ಎಡದಿಂದ ಬಲಕ್ಕೆ

1. ಹೂವೊಂದರ ಜೊತೆ ಜಿಲ್ಲೆಯೊಂದು ಸೇರಿದರೆ ನಟನೊಬ್ಬ ಪ್ರತ್ಯಕ್ಷ ! 6
6. ಕವಿ ಶಿವರಾಮ ಕಾರಂತರ ನೆನಪಿಸಿಕೊಳ್ಳಿ ಪನ್ನಗ ಸೋಮಶೇಖರ್ ಚಿತ್ರ ಸಿಗಲಿದೆ 9
7. ನನ್ನ ಶತ್ರು ಚಿತ್ರದ ನಾಯಕಿ 2
8. ನೂತನ ನಮ್ಮ ದೇಶಕ್ಕೆ ಅಂಬರೀಷ್ ಅಭಿನಯವಿದೆ 5
13. ಸೂರ್ಯ ರಶ್ಮಿ ಹೆಸರುಳ್ಳ ನಟ 5
15. ವಿಷ್ಣುವರ್ಧನ್ – ಸುಪರ್ಣ ಅಭಿನಯದ ಚಿತ್ರ 2
16. ಕಪ್ಪನೆಯ ಬೆಟ್ಟದಲ್ಲಿ ಆವರಿಸಿರುವ ಗಾಢ ಇರುಳು 9
18. ರಾಜಣ್ಣ, ಜಯಂತಿ, ಕಲ್ಪನಾ ಅಭಿನಯಕ್ಕೆ ವೈ. ಆರ್. ಸ್ವಾಮಿ ನಿರ್ದೇಶಕ 6

ಮೇಲಿನಿಂದ ಕೆಳಕ್ಕೆ

1. ಶಶಿಕುಮಾರ್ – ಮಾಲಾಶ್ರೀಗೆ ಕಂಕಣ ಬಲವಿದೆ ! 5
2. ವಿಷ್ಣುವರ್ಧನ್ – ಸಿತಾರ ಅಭಿನಯಕ್ಕೆ ಕೃಷ್ಣಮೂರ್ತಿ ಪುರಾಣಿಕ್ ಕಥೆಯಿದೆ 6
3. ಸಾಗರದಲ್ಲಿ ಉಕ್ಕಿದ "ಹಾಲು" 2
4. ಶ್ರೀನಾಥ್ – ಮಂಜುಳಾ ಅಭಿನಯಕ್ಕೆ ವಿ. ಟಿ. ತ್ಯಾಗರಾಜನ್ ನಿರ್ದೇಶಕ 4
5. ರಾಜ್‌ಕುಮಾರ್ ಸದಾ ಕಾಲ ಹೊಳೆಯುವ "ನಕ್ಷತ್ರ" 4
9. ನೂರು ನೂರು ತರಹದ ವೇದನೆ ಇಲ್ಲಿ ಅಸ್ತ ವ್ಯಸ್ತ 3
10. ಮನಸ್ಸು ಕದ್ದ ಕಳ್ಳರ ಕಳ್ಳ ರವಿಚಂದ್ರನ್ ! 6
11. ಶ್ರೀನಾಥ್ ಮಹಾನ್ ಚೋರ 4
12. ಪಾಯಿಂಟ್ ಹಾಕಿದಾಕೆ ಸುವಾಸನೆ ಬೀರಿದ್ದಾಳೆ 4
14. " ಈ ಜೀವನ ತಪೋವನ...", ಗೀತೆಯ ಚಿತ್ರ 5
17. ಈ ಲೋಕದಲ್ಲೂ ವೀರಪ್ಪನ್ ಕಾಣಿಸಿಕೊಂಡಿದ್ದನು 2

ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಸಿನಿ ಪದಬಂಧ 576ರ ಉತ್ತರ

ಸಿ	ನಿ	ಮಾ	ಜ	ಗ	ತ್ತು					
ಪಾ			ನ			ಮ		ಜ		ಕು
ಯಿ		ನ	ಗ	ರ	ದ	ಲ್ಲಿ	ನಾ	ಯ	ಕ	ರು
ರಾ	ಜ		ಣ					ಸಿಂ		ಕ್ಷೇ
ಮು		ಸ	ಮ	ರ	ಸಿಂ	ಹ		ಹ		ತ್ರ
			ನ		ಧೂ		ಮಾ			
ಸ್ವಾ		ಲೂ		ವ	ರ	ಭೈ	ಲ	ಕಾ		ದೇ
ಭಿ		ಸ್					ತಿ		ಬಾ	ವ
ಮಾ	ವ	ಮಾ	ವ	ಮ	ದು	ವೆ	ಮಾ	ಡು		ಮಾ
ನ		ದ		ನೆ			ಧ			ನ
					ಮಾ	ನ	ವ	ದಾ	ನ	ವ

ವಿಜೇತರು: ಕೃಷ್ಣಮೂರ್ತಿ, ನಂ. 647, 2ನೇ ಕ್ರಾಸ್, ಹಿನಕಲ್, ಮೈಸೂರು


ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಮೈಸೂರಲ್ಲಿ ಸನ್ನಾಫ್ ಮುತ್ತಣ್ಣನ ಕಮಂಗಿ ನನ್‌ಮಗನೇ ಹಾಡು...



ಆರಂಭದಿಂದಲೂ ಸಾಕಷ್ಟು ಸದ್ದು ಮಾಡುತ್ತಿರುವ ಚಿತ್ರ ಸನ್ನಾಫ್ ಮುತ್ತಣ್ಣ. ಶ್ರೀಕಾಂತ್ ಹುಣಸೂರು ನಿರ್ದೇಶನದ, ಪ್ರಣಂ ದೇವರಾಜ್ ನಾಯಕನಾಗಿ ನಟಿಸಿರುವ ಈ ಚಿತ್ರದ ಕಮಂಗಿ ನನ್ ಮಗನೇ ಎಂಬ ಹಾಡು ಇತ್ತೀಚೆಗೆ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಬಿಡುಗಡೆಯಾಯಿತು. ಈ ಕಾರ್ಯಕ್ರಮದಲ್ಲಿ ನಟ ಶರಣ್ ಹಾಗೂ ನಿರ್ದೇಶಕ ಪವನ್ ಒಡೆಯರ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಯೋಗರಾಜ್ ಭಟ್ಟರ ಸಾಹಿತ್ಯವಿರುವ ಈ ಹಾಡಿಗೆ ಶರಣ್ ಹಾಗೂ ಸಂಗೀತ ನಿರ್ದೇಶಕ ವಿ.ಹರಿಕೃಷ್ಣ ದನಿಯಾಗಿದ್ದಾರೆ,

ನಾನು ಹುಟ್ಟಿದ್ದು ಯಾದಗಿರಿಯಲ್ಲಿ, ಬೆಳೆದಿದ್ದು ಹುಬ್ಬಳ್ಳಿಯಲ್ಲಿ, ಈಗಿರುವುದು ಬೆಂಗಳೂರಿನಲ್ಲಿ. ಈ ಊರುಗಳನ್ನು ಬಿಟ್ಟರೆ ನಾನು ಹೆಚ್ಚು ಪ್ರೀತಿಸುವುದು ಮೈಸೂರನ್ನು ಎಂದ ಶರಣ್, ಅಂತಹ ನನ್ನ ನೆಚ್ಚಿನ ಊರಿನಲ್ಲಿ ನಾನು ಹಾಡಿರುವ ಹಾಡಿನ ಬಿಡುಗಡೆಯಾಗಿದ್ದು ಖುಷಿಯಾಗಿದೆ. ಸಚಿನ್ ಬಸ್ರೂರ್ ಹಾಕಿರುವ ಟ್ಯೂನ್ ಕೂಡ ಸೊಗಸಾಗಿದ್ದು, ಚಿತ್ರ ಯಶಸ್ವಿಯಾಗಲಿ ಎಂದು ಹಾರೈಸಿದರು.



ನಮ್ಮ ಚಿತ್ರದ ಚಿತ್ರೀಕರಣ ಮೈಸೂರಿನಲ್ಲೇ ಆಗಬೇಕಿತ್ತು. ಆಗಲಿಲ್ಲ. ಆದರೆ ನಮ್ಮಿಷ್ಟದ ಮೈಸೂರು ನಮ್ಮನ್ನು ಬಿಡುವುದಿಲ್ಲ. ಇದೀಗ ಚಿತ್ರದ ಮೊದಲ ಹಾಡು ಮೈಸೂರಿನಲ್ಲೇ ಬಿಡುಗಡೆಯಾಗಿದೆ ಎಂದು ನಾಯಕ ನಟ ಪ್ರಣಂ ದೇವರಾಜ್ ಹೇಳಿದರು, ನಾನು ಹುಟ್ಟಿ ಬೆಳೆದಿದ್ದು ಮೈಸೂರಿನಲ್ಲಿ. ನನ್ನೂರಿನಲ್ಲಿ ನನ್ನ ನಿರ್ದೇಶನದ ಚಿತ್ರದ ಮೊದಲ ಹಾಡು ಬಿಡುಗಡೆಯಾಗಿದ್ದು ಸಂತಸ ತಂದಿದೆ ಎಂದು ಶ್ರೀಕಾಂತ್ ಹುಣಸೂರು ಹೇಳಿದರು.

ಮೈಸೂರಿಗೂ ಕನ್ನಡ ಚಿತ್ರರಂಗಕ್ಕೂ ಅವಿನಾಭಾವ ಸಂಬಂಧವಿದೆ. ನಾನು ಹಾಗೂ ಪ್ರಣಂ ದೇವರಾಜ್ ಚಿತ್ರದಲ್ಲಿ ತಂದೆ ಮಗನಾಗಿ ಅಭಿನಯಿಸಿದ್ದೇವೆ ಎಂದು ಹಿರಿಯನಟ ರಂಗಾಯಣ ರಘು ಹೇಳಿದರು.

ಪುರಾತನ ಫಿಲಂಸ್ ನಿರ್ಮಾಣದ ಈ ಚಿತ್ರಕ್ಕೆ ಎಸ್‌ಆರ್‌ಕೆ ಫಿಲಂಸ್ ಸಾಥ್ ನೀಡಿದೆ. ಪ್ರಣಂ ದೇವರಾಜ್ ಜತೆ ನಾಯಕಿಯಾಗಿ ದಿಯಾ ಖ್ಯಾತಿಯ ಖುಷಿ ರವಿ ಅಭಿನಯಿಸಿದ್ದಾರೆ. ಸುಚೇಂದ್ರಪ್ರಸಾದ್, ಗಿರೀಶ್ ಶಿವಣ್ಣ, ತಬಲ ನಾಣಿ, ಶ್ರೀನಿವಾಸ್ ಪ್ರಭು, ಸುಧಾ ಬೆಳವಾಡಿ, ಅರುಣ್ ಚಕ್ರವರ್ತಿ, ಸಂದೀಪ ಪ್ರಮುಖ ಪಾತ್ರವರ್ಗದಲ್ಲಿದ್ದಾರೆ. ಸಚಿನ್ ಬಸ್ರೂರು ಸಂಗೀತವಿರುವ ಈ ಚಿತ್ರದ ಹಾಡುಗಳನ್ನು ಯೋಗರಾಜ್ ಭಟ್, ಜಯಂತ್ ಕಾಯ್ಕಿಣಿ, ಪ್ರಮೋದ್ ಮರವಂತೆ ಬರೆದಿದ್ದಾರೆ. ಸ್ಕೇಟಿಂಗ್ ಕೃಷ್ಣ ಅವರ ಛಾಯಾಗ್ರಹಣ ಹಾಗೂ ಹರೀಶ್ ಕೊಮ್ಮೆ ಅವರ ಸಂಕಲನ ಈ ಚಿತ್ರಕ್ಕಿದೆ.

ನಂ.ಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿ ಸಾಮೂಹಿಕ ವಿವಾಹ

ವೈವಾಹಿಕ ಜೀವನಕ್ಕೆ ಕಾಲಿಟ್ಟ 24 ಜೋಡಿ

ನಂಜನಗೂಡು, ಮೇ 22– ಜಿಲ್ಲಾಡಳಿತ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ವತಿಯಿಂದ ನಗರದ ಶ್ರೀಕಂಠೇಶ್ವರಸ್ವಾಮಿ ದೇವಾಲಯದಲ್ಲಿ ಏರ್ಪಡಿಸಿದ್ದ ಮಾಂಗಲ್ಯ ಭಾಗ್ಯ, ಸರಳ ಸಾಮೂಹಿಕ ವಿವಾಹದಲ್ಲಿ 24 ಜೋಡಿಗಳು ವೈವಾಹಿಕ ಜೀವನಕ್ಕೆ ಕಾಲಿಡುವ ಮೂಲಕ ಸತಿ–ಪತಿಗಳಾದರು.

ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಅರ್ಚಕ ಶಶಿಧರ ದೀಕ್ಷಿತ್, ಶ್ರೀಕಂಠೇಶ್ವರ ದೇವಾಲಯದ ಪ್ರಧಾನ ಅರ್ಚಕ ನಾಗಚಂದ್ರ ದೀಕ್ಷಿತ್ ನೇತೃತ್ವದಲ್ಲಿ ಧಾರ್ಮಿಕ ವಿಧಿ ವಿಧಾನಗಳೊಂದಿಗೆ ಪೂಜೆ ನೆರವೇರಿಸಿ, ನೂತನ ವಧು–ವರರಿಗೆ ಮದುವೆ ಮಾಡಿಸಿದರು.

ಪ.ಜಾತಿಯ 10, ನಾಯಕ ಸಮುದಾಯದ 4, ಸೋಲಿಗ ಸಮುದಾಯದ 2, ಉಪ್ಪಾರ ಸಮುದಾಯದ 1, ಗಾಣಿಗಶೆಟ್ಟಿ ಸಮುದಾಯದ 2, ಮಡಿವಾಳ ಶೆಟ್ಟಿ ಸಮುದಾಯದ 1, ಕುರುಬ ಸಮುದಾಯದ 1, 2 ಅಂತರ್ಜಾತಿ, 1 ವಿಶೇಷ ಚೇತನ ಜೋಡಿ ಸೇರಿದಂತೆ ಒಟ್ಟು 24 ಜೋಡಿಗಳು ಸರಳ ಸಾಮೂಹಿಕ ವಿವಾಹದಲ್ಲಿ ಮದುವೆಯಾದರು.

ಹಾವೇರಿ ಜಿಲ್ಲೆ ರಾಣಿಬೆನ್ನೂರು ತಾಲೂಕಿನ ಗುಡಿ ಹೊನ್ನತ್ತಿ ಗ್ರಾಮದ ಕುರುಬ ಜನಾಂಗಕ್ಕೆ ಸೇರಿದ ಕರಿಬಸಪ್ಪ ಮೈಸೂರಿನ ಖಾಸಗಿ ಫೈನಾನ್ಸ್‌ನಲ್ಲಿ ಕೆಲಸ ಮಾಡುತ್ತಿದ್ದು, ತಿ.ನರಸೀಪುರ ತಾಲೂಕಿನ ಕೋಳಿಮಲ್ಲನಹುಂಡಿ ಗ್ರಾಮದ ಪ.ಜಾತಿಗೆ ಸೇರಿದ ಮಮತಾಳನ್ನು ಪ್ರೀತಿಸಿದರು. 2 ಕುಟುಂಬಗಳು ಮದುವೆಗೆ ಒಪ್ಪಿಗೆ ನೀಡಿ ಸರಳ ವಿವಾಹದಲ್ಲಿ ಮದುವೆಯಾಗುವ ಮೂಲಕ ಪ್ರೀತಿ ಜಾತಿಯ ಎಲ್ಲೇ ಮೀರಿದ್ದು ಎಂಬುದನ್ನು ಸಾಬೀತುಪಡಿಸಿದರು. ನಂಜನಗೂಡಿನ ಎನ್‌ಜಿಓ ಕಾಲೋನಿಯ ಮರಾಠ ಸಮುದಾಯಕ್ಕೆ ಸೇರಿದ ಉದಯ್ ಕುಮಾರ್ ರಾವ್ ಮತ್ತು ಅದೇ ಬೀದಿಯ ನಾಯಕ ಸಮುದಾಯದ ನಿರ್ಮಲಾರನ್ನು ಅಂತರ್ಜಾತಿ ವಿವಾಹವಾದರು. ವಿಶೇಷಚೇತನ ಜೋಡಿಗಳಲ್ಲಿ ಮೈಸೂರಿನ ಕಣ್ಣಿನ ತೊಂದರೆ ಇರುವ ಮಹದೇವ ಪ್ರಸಾದ್, ಕಾಲಿನ ತೊಂದರೆ ಇರುವ ಭಾಗ್ಯಳನ್ನು ವರಿಸುವ ಮೂಲಕ ಸತಿಪತಿಗಳಾದರು.



ನಂ.ಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿ ಸಾಮೂಹಿಕ ವಿವಾಹ ನಡೆಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು ಮಾತನಾಡಿ, ಮದುವೆಗಾಗಿ ಸಾಲ ಸೋಲ ಮಾಡಿ ಆಡಂಬರದಿಂದ ದುಂದು ವೆಚ್ಚ ಮಾಡಿ ಬಡ ಮತ್ತು ಮಧ್ಯಮ ವರ್ಗದ ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೆ ಸಿಲುಕಬಾರದು ಎಂಬ ಸದುದ್ದೇಶದಿಂದ ರಾಜ್ಯ ಸರ್ಕಾರ ಮಾಂಗಲ್ಯ ಭಾಗ್ಯ ಯೋಜನೆಯನ್ನು 2020ರಲ್ಲಿ ಪ್ರಾರಂಭಿಸಿತು. ಮಧ್ಯಮ ಮತ್ತು ಬಡ ಕುಟುಂಬಗಳು ಸಾಲ ಮಾಡಿ ಮದುವೆ ಆಗಬೇಡಿ. ಸರಳವಾಗಿ ಮದುವೆ ಆಗುವ ಮೂಲಕ ಎಲ್ಲರಿಗೂ ಮಾದರಿ ಆಗಬೇಕು. ಈ ಬಾರಿ 24 ಜೋಡಿಗಳು ಸಾಮೂಹಿಕ ವಿವಾಹವಾಗಿದ್ದು, ಮುಂದಿನ ವರ್ಷ ಕನಿಷ್ಠ 100 ಜೋಡಿಗಳು ಈ ಸರಳ ಸಾಮೂಹಿಕ ವಿವಾಹದಲ್ಲಿ ಮದುವೆ ಆಗಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಸಮಾರಂಭದಲ್ಲಿ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು, ಶ್ರೀಕಂಠೇಶ್ವರ ದೇವಾಲಯದ ಇಓ ಜಗದೀಶ್ ಕುಮಾರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ವೃತ್ತ ನಿರೀಕ್ಷಕ ರವೀಂದ್ರ ಸೇರಿದಂತೆ ಸಾರ್ವಜನಿಕರಿದ್ದರು.

ಇಂದು ಕೆ.ಆರ್.ನಗರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ

514 ಕೋಟಿ ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಕೆ.ಆರ್.ನಗರ, ಮೇ 22– ಜಿಲ್ಲಾಡಳಿತ ಮತ್ತು ಜಿಪಂ ವತಿಯಿಂದ ಮೇ 23 ರಂದು ಬೆಳಗ್ಗೆ 11 ಗಂಟೆಗೆ ಪಟ್ಟಣದ ಪುರಸಭೆ ಬಯಲು ರಂಗ ಮಂದಿರದ ಆವರಣದಲ್ಲಿ ಕೆ.ಆರ್.ನಗರ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧ ಇಲಾಖೆಗಳ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಮತ್ತು ಉದ್ಘಾಟನಾ ಸಮಾರಂಭ ನಡೆಯಲಿದ್ದು, ಅಂದಾಜು 514 ಕೋಟಿ ವೆಚ್ಚದ ಕಾಮಗಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ.

ಶಾಸಕ ಡಿ.ರವಿಶಂಕರ್ ಅಧ್ಯಕ್ಷತೆಯಲ್ಲಿ ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಸಂಸದ ಯದುವೀರ್, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮತ್ತು ಸಚಿವ ಕೆ.ವೆಂಕಟೇಶ್ ಉಪಸ್ಥಿತರಿರುವರು.

ಇವರೊಂದಿಗೆ ಇಂಧನ ಸಚಿವ ಕೆ.ಜೆ. ಜಾರ್ಜ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಕಂದಾಯ ಸಚಿವ ಕೃಷ್ಣ ಭೈರೇಗೌಡ, ಕೃಷಿ ಸಚಿವ ಎನ್.ಚಲುವರಾಯಸ್ವಾಮಿ, ಪೌರಾಡಳಿತ ಸಚಿವ ರಹೀಮ್ ಖಾನ್, ಸಹಕಾರ ಸಚಿವ ಕೆ.ಎನ್.ರಾಜಣ್ಣ, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಪ್ರಾಥಮಿಕ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್, ನೀರಾವರಿ ಸಚಿವ ಬೋಸರಾಜು ಹಾಜರಿರುವರು.

ಕೆ.ಆರ್.ನಗರ ಪಟ್ಟಣ ಕಾರ್ಯಕ್ರಮಕ್ಕಾಗಿ ನವ ವಧುವಿನಂತೆ ಸಿಂಗಾರಗೊಂಡಿದ್ದು, ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳ ಉದ್ಘಾಟನೆ ಮತ್ತು ಶಂಕುಸ್ಥಾಪನೆಗೆ ಕ್ಷಣಗಣನೆ ಆರಂಭವಾಗಿದ್ದು ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರಲ್ಲಿ ಸಂಚಲನ ಮೂಡಿಸಿದೆ.

ನಾಳೆ ಇಂದಿರಾ ಕ್ಯಾಂಟೀನ್ ಉದ್ಘಾಟನೆ

ಸರಗೂರು, ಮೇ 22– ಪಟ್ಟಣದ ಮಹಾವೀರ ಸರ್ಕಲ್ ಬಳಿಯಿರುವ ಪ್ರವಾಸಿ ಮಂದಿರದ ಆವರಣದಲ್ಲಿ ಮೇ 24 ರಂದು ಬೆಳಗ್ಗೆ 10.30ಕ್ಕೆ ಇಂದಿರಾ ಕ್ಯಾಂಟೀನ್ ಅನ್ನು ಶಾಸಕ ಅನಿಲ್ ಉದ್ಘಾಟಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಗುರುವಾರ ಪಪಂ ಮುಖ್ಯಾಧಿಕಾರಿ ಎಸ್.ಕೆ.ಸಂತೋಷ್ ಕುಮಾರ್ ಇಂದಿರಾ ಕ್ಯಾಂಟೀನ್‌ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಇಂದು ಶ್ರೀಸಿದ್ದಪ್ಪಾಜಿ ದೇವಾಲಯ ಲೋಕಾರ್ಪಣೆ

ಮೂಗೂರು, ಮೇ 22– ಇಲ್ಲಿಗೆ ಸಮೀಪದ ಹೊಸಳ್ಳಿ ಮೋಳೆ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಸಿದ್ದಪ್ಪಾಜಿ ದೇವಾಲಯ ಮೇ 23 ರಂದು ಲೋಕಾರ್ಪಣೆಗೊಳ್ಳಲಿದೆ.



ರಾಜ ಬೊಪ್ಪೇಗೌಡನಪುರದ ಸಂಸ್ಥಾನ ಮಠದ ಶ್ರೀಜ್ಞಾನಾನಂದ ಚೆನ್ನರಾಜೇ ಅರಸ್ ಸ್ವಾಮೀಜಿ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಮುಂಜಾನೆ 5 ಗಂಟೆಗೆ ಕಳಸ ಪ್ರತಿಷ್ಠಾಪನೆ, ಕುಂಭಾಭಿಷೇಕ ಹಾಗೂ ಬೆಳಗ್ಗೆ 10 ಗಂಟೆಗೆ ಮಹಾಮಂಗಳಾರತಿ ಪ್ರಸಾದ ವಿತರಣೆ ನಡೆಯಲಿದೆ. ಕಾರ್ಯಕ್ರಮದ ಅಂಗವಾಗಿ ಗ್ರಾಮದಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದ್ದು, ಇಡೀ ಗ್ರಾಮವನ್ನು ತಳಿರು ತೋರಣ ಹಾಗೂ ವಿದ್ಯುತ್ ದೀಪಾಲಂಕಾರಗಳಿಂದ ಸಿಂಗರಿಸಲಾಗಿದೆ.

ಕುಡಿನೀರುಮುದ್ದನಹಳ್ಳಿಯಲ್ಲಿ ಕಲ್ಯಾಣಿ ಪುನಶ್ಚೇತನ

ಹುಣಸೂರು, ಮೇ 22– ಜಿಪಂ ಮೈಸೂರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಹಾಗೂ ಭಗೀರಥ ಸಂಸ್ಥೆ ಸಹಯೋಗದೊಂದಿಗೆ ಜಲಜೀವನ್ ಮಿಷನ್ ಯೋಜನೆಯಡಿ ಹುಣಸೂರು ತಾಲೂಕಿನ ಉಯಿಗೊಂಡನಹಳ್ಳಿ ಗ್ರಾಪಂ ವ್ಯಾಪ್ತಿಯ ಕುಡಿನೀರುಮುದ್ದನಹಳ್ಳಿ ಗ್ರಾಮದಲ್ಲಿರುವ ಪಟ್ಟಲದಮ್ಮನ ಕಲ್ಯಾಣಿ (ದೊಡ್ಡ ಆಲದಮರದ ಕಲ್ಯಾಣಿ) ಯನ್ನು IEC/HRD ಚಟುವಟಿಕೆಗಳ ಮೂಲಕ ಪುನಶ್ಚೇತನಗೊಳಿಸಲಾಯಿತು.



ಕಲ್ಯಾಣಿ ಪುನಶ್ಚೇತನ ಕಾರ್ಯಕ್ರಮ ನಡೆಯಿತು.

ಕಲ್ಯಾಣಿ ಉದ್ಘಾಟಿಸಿ ಮಾತನಾಡಿದ ಗ್ರಾಪಂ ಅಧ್ಯಕ್ಷ ದೇವರಾಜು, ನೀರು ಅಮೂಲ್ಯ ವಸ್ತುವಾಗಿದ್ದು ಮುಂದಿನ ಪೀಳಿಗೆಗೆ ಉಳಿಸಲು ನಾವು ಈ ಕಲ್ಯಾಣಿ ಹಾಗೂ ಕಿರು ಮೂಲಗಳನ್ನು ಉಳಿಸಬೇಕೆಂದು ತಿಳಿಸಿದರು.

ಕಲ್ಯಾಣಿ ಹಸ್ತಾಂತರ ಕಾರ್ಯಕ್ರಮದಲ್ಲಿ ಸದಸ್ಯರಾದ ಆಯುಬ್ ಪಾಷ, ಇಕ್ಬಾಲ್‌ಪಾಷ, ರಾಧಾ, ಪಿಡಿಓ ತೇಜೇಂದ್ರ ವರಪ್ರಸಾದ್, ಜಲಜೀವನ್ ಮಿಷನ್ ಯೋಜನೆ ಜಿಲ್ಲಾ ತಂಡದ ಮಹೇಶ್, ತಾಲೂಕು ಸಂಯೋಜಕ ಆನಂದ್, ರಾಜು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಶ್ರೀಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್‌ಗೆ ಅಗತ್ಯ ನೆರವು

ತಿ.ನರಸೀಪುರ, ಮೇ 22– ಜಾತಿ ತಾರತಮ್ಯವಿಲ್ಲದೇ ಸಮಾಜಮುಖಿ ಕೆಲಸ ಮಾಡುತ್ತಿರುವ ಯಡದೊರೆ ಗ್ರಾಮದ ಶ್ರೀಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್‌ಗೆ ಅಗತ್ಯ ಆರ್ಥಿಕ ನೆರವು ನೀಡುವುದಾಗಿ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಭರವಸೆ ನೀಡಿದರು.

ತಾಲೂಕಿನ ವಿವಿಧ ಗ್ರಾಮಗಳಲ್ಲಿ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ, ಯಡದೊರೆ ಗ್ರಾಮದ ಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಕಚೇರಿಗೆ ಭೇಟಿ ನೀಡಿ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಚಾರಿಟಬಲ್ ಅಧ್ಯಕ್ಷ ಮಹೇಶ್ ನಾಯಕ ಮಾಡಿದ ಮನವಿಗೆ ಸ್ಪಂದಿಸಿದ ಅವರು ಅಗತ್ಯ ಆರ್ಥಿಕ ನೆರವು ನೀಡುವುದಾಗಿ ಭರವಸೆ ನೀಡಿ ಸಮಾಜಮುಖಿ ಕಾರ್ಯಕ್ರಮದಲ್ಲಿ ಮುಂಚೂಣಿಯಲ್ಲಿರುವ ಟ್ರಸ್ಟ್‌ನ ಕಾರ್ಯ ವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.



ಶ್ರೀಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಮಹೇಶ್ ನಾಯಕ ಎಂಎಲ್‌ಸಿ ಡಾ.ಯತೀಂದ್ರಗೆ ಮನವಿ ಸಲ್ಲಿಸಿದರು.

ಟ್ರಸ್ಟ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ್ ಮಾತನಾಡಿ, ಟ್ರಸ್ಟ್ 5 ವರ್ಷಗಳ ಹಿಂದೆ ಸ್ಥಾಪನೆಗೊಂಡು ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡಿದೆ. ಪ್ರತಿ ಶೈಕ್ಷಣಿಕ ವರ್ಷದಲ್ಲಿ ಶಾಲಾ ಮಕ್ಕಳಿಗೆ ನೋಟ್‌ಬುಕ್, ಪಠ್ಯ ಪುಸ್ತಕ, ಶಾಲಾ ಬ್ಯಾಗ್ ಸೇರಿದಂತೆ ಶೈಕ್ಷಣಿಕ ಪರಿಕರಗಳನ್ನು ನೀಡುತ್ತಾ ಬಂದಿದೆ. ಗ್ರಾಮೀಣ ಕಡು ಬಡವರ ಶವ ಸಂಸ್ಕಾರಕ್ಕೂ ಟ್ರಸ್ಟ್ ನೆರವು ನೀಡುತ್ತಿದ್ದು, ಜಾತಿ, ಧರ್ಮದ ತಾರತಮ್ಯ ಮಾಡದೇ ಯಾವುದೇ ಸಮಾಜದ ಸದಸ್ಯರು ಮೃತಪಟ್ಟಲ್ಲಿ ಅವರ ಶವ ಸಂಸ್ಕಾರಕ್ಕೆ 5 ಸಾವಿರ ರೂ. ನೀಡುತ್ತಿದೆ. ಟ್ರಸ್ಟ್ ಹಮ್ಮಿಕೊಂಡಿರುವ ಸಮಾಜಮುಖಿ ಕಾರ್ಯಕ್ರಮಕ್ಕೆ ಪ್ರತಿ ವರ್ಷ 4 ರಿಂದ 5 ಲಕ್ಷ ರೂ. ಖರ್ಚಾಗುತ್ತಿದ್ದು, ದಾನಿಗಳು ಹಾಗೂ ಟ್ರಸ್ಟ್‌ನ ಟ್ರಸ್ಟಿಗಳಿಂದ ಸಂಪನ್ಮೂಲ ಕ್ರೋಢಿಕರಿಸಲಾಗುತ್ತಿದೆ. ಹಾಗಾಗಿ ಈ ವರ್ಷದ ಕಾರ್ಯಕ್ರಮ ಹಮ್ಮಿಕೊಳ್ಳಲು, ತಮ್ಮ ಬ್ಯಾನರ್‌ನಡಿ ಕೆಲಸ ನಿರ್ವಹಿಸಲು ತಮ್ಮ ವತಿಯಿಂದ ಆರ್ಥಿಕ ನೆರವು ನೀಡುವಂತೆ ಮನವಿ ಮಾಡಿದರು.

ಟ್ರಸ್ಟ್ ಅಧ್ಯಕ್ಷರ ಮನವಿಗೆ ಸ್ಪಂದಿಸಿದ ಯತೀಂದ್ರ ಅಗತ್ಯ ಆರ್ಥಿಕ ನೆರವು ನೀಡುವುದಾಗಿ ಭರವಸೆ ನೀಡಿದರು. ಈ ವೇಳೆ ಟ್ರಸ್ಟ್ ಸದಸ್ಯರು ಹಾಜರಿದ್ದರು.

ಮೇ 25ಕ್ಕೆ, ನಂ.ಗೂಡಲ್ಲಿ ಅದ್ದೂರಿ ಬಸವ ಜಯಂತಿ

ನಂಜನಗೂಡು, ಮೇ 22– ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹಾಗೂ ತಾಲೂಕು ವೀರಶೈವ ಲಿಂಗಾಯತ ಸಂಘ ಸಂಸ್ಥೆಗಳ ವತಿಯಿಂದ ಮೇ 25 ರಂದು ನಂಜನಗೂಡಿನಲ್ಲಿ ಅದ್ದೂರಿ ಬಸವ ಜಯಂತಿ ಆಚರಿಸಲಾಗುವುದು ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಎಸ್.ಎಂ.ಕೆಂಪಣ್ಣ ಹೇಳಿದರು.



ಸುದ್ದಿಗೋಷ್ಠಿಯಲ್ಲಿ ಎಸ್.ಎಂ.ಕೆಂಪಣ್ಣ ಮಾತನಾಡಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 8.30ಕ್ಕೆ ಶ್ರೀಕಂಠೇಶ್ವರ ದೇವಾಲಯದ ಆವರಣದಿಂದ ಸಾಂಸ್ಕೃತಿಕ ನಾಯಕ ಬಸವಣ್ಣ ಅವರ ಭಾವಚಿತ್ರವನ್ನು ವಿವಿಧ ಜಾನಪದ ಕಲಾ ತಂಡಗಳೊಂದಿಗೆ ಅದ್ದೂರಿಯಾಗಿ ಮೆರವಣಿಗೆ ಮಾಡಲಾಗುವುದು. ನವಿಲೂರು ಮಠದ ಶ್ರೀಚನ್ನಬಸವ ಸ್ವಾಮೀಜಿ ಸಮ್ಮುಖದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಮಧ್ಯಾಹ್ನ 12 ಗಂಟೆಗೆ ನಗರದ ವಿದ್ಯಾವರ್ಧಕ ಶಾಲಾ ಮೈದಾನದಲ್ಲಿ ಧಾರ್ಮಿಕ ಸಭೆ ಆಯೋಜಿಸಲಾಗಿದ್ದು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ದೇವನೂರು ಗುರುಮಲ್ಲೇಶ್ವರ ಮಠದ ಮಹಾಂತ ಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ. ಮಲ್ಲನಮೂಲೆ ಮಠದ ಶ್ರೀಚನ್ನಬಸವ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿದ್ದಾರೆ. ಅರಣ್ಯ ಇಲಾಖೆ ಸಚಿವ ಈಶ್ವರ್ ಖಂಡ್ರೆ ಬಸವೇಶ್ವರರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾಸಕ ದರ್ಶನ್, ಡಾ.ಯತೀಂದ್ರ, ಗಣೇಶ್ ಪ್ರಸಾದ್, ಸಂಸದ ಸುನೀಲ್ ಬೋಸ್, ಮಾಜಿ ಶಾಸಕರಾದ ಬಿ.ಹರ್ಷವರ್ಧನ್, ಕೇಶವಮೂರ್ತಿ ಸೇರಿದಂತೆ ಹಲವು ಚುನಾಯಿತ ಜನಪ್ರತಿನಿಧಿಗಳು, ವಿವಿಧ ಮಠಾಧೀಶರು ಭಾಗವಹಿಸಲಿದ್ದಾರೆ. ಮೇ 24ರ ರಾತ್ರಿ 7.30ಕ್ಕೆ ಜೀ ಕನ್ನಡ ವಾಹಿನಿಯ ಸರಿಗಮಪ ಜ್ಯೂರಿ ಯಾದ ಶಶಿಕಲಾ ಸುನೀಲ್ ಅವರು ಸಂಗೀತ ರಸ ಸಂಜೆ ಕಾರ್ಯಕ್ರಮ ನಡೆಸಿ ಕೊಡಲಿದ್ದಾರೆ. ಕಾರ್ಯಕ್ರಮಕ್ಕೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಗೋಷ್ಠಿಯಲ್ಲಿ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಉಪಾಧ್ಯಕ್ಷ ಸುಧಾಚಿಕ್ಕಮಾದಪ್ಪ, ಪ್ರಧಾನ ಕಾರ್ಯದರ್ಶಿ ಶಿಷ್ಟದೇಮು, ಖಜಾಂಚಿ ಎಂ.ಪಿ.ನಟರಾಜು, ವೀರಶೈವ ಕೋ–ಆಪರೇಟಿವ್ ಸೊಸೈಟಿ ಅಧ್ಯಕ್ಷ ಎನ್.ಸಿ.ಬಸವಣ್ಣ ಎಪಿಎಂಸಿ ಮಾಜಿ ಸದಸ್ಯ ಗುರು ಸ್ವಾಮಿ, ನಗರ ಸಮಿತಿ ಅಧ್ಯಕ್ಷ ಎನ್. ಮಹೇಶ್, ಯುವ ಸಮಿತಿ ಅಧ್ಯಕ್ಷ ಮಹದೇವಸ್ವಾಮಿ, ನಿರ್ದೇಶಕರಾದ ನಂದಿನಿ, ಶಿವನಾಗಪ್ಪ, ಚೆನ್ನಪ್ಪ, ಅಶೋಕ್, ಮಹೇಶ್, ರಾಜೇಂದ್ರ ಪ್ರಸಾದ್ ಇದ್ದರು.

ಹೆಚ್.ಡಿ.ಕೋಟೆ: ಹುಲಿ ದಾಳಿಗೆ ಹಸು ಬಲಿ

ಹೆಚ್.ಡಿ.ಕೋಟೆ, ಮೇ 22– ಹುಲಿ ದಾಳಿಗೆ ಹಸು ಬಲಿಯಾಗಿರುವ ಘಟನೆ ತಾಲೂಕಿನ ಗಣೇಶ್ವರ ಗ್ರಾಮದಲ್ಲಿ ಗುರುವಾರ ನಡೆದಿದೆ.



ಹುಲಿ ದಾಳಿಗೆ ಹಸು ಬಲಿಯಾಗಿರುವುದು

ಗ್ರಾಮದ ರೈತ ಜಾವೀದ್ ಎಂಬುವರಿಗೆ ಸೇರಿದ ಹಸು ಸಾವನ್ನಪ್ಪಿರುವುದು. ಇದರಿಂದ 50 ಸಾವಿರ ರೂ. ನಷ್ಟವಾಗಿದೆ ಎನ್ನಲಾಗಿದೆ. ಜಾವೀದ್ ಅವರು ಎಂದಿನಂತೆ ತಮ್ಮ ಜಮೀನಿನಲ್ಲಿ ಹಸುವನ್ನು ಮೇಯಲು ಕಟ್ಟಿ ಹಾಕಿದ್ದರು. ಈ ವೇಳೆ ಏಕಾಏಕಿ ದಾಳಿ ನಡೆಸಿದ ಹುಲಿ ಹಸುವನ್ನು ಬಲಿ ಪಡೆದಿದೆ.

ರೈತ ಜಾವೀದ್ ಮಾತನಾಡಿ, ಕಳೆದ ಆರೇಳು ತಿಂಗಳಿಂದ ಈ ಭಾಗದಲ್ಲಿ ಹುಲಿ ಕಾಣಿಸಿಕೊಂಡು ಮೇಕೆ, ಜಾನುವಾರು ಹಾಗೂ ಸಾಕು ಪ್ರಾಣಿಗಳನ್ನು ಕೊಂದು ಹಾಕಿದೆ. ಜೊತೆಗೆ ಮೂವರು ರೈತರ ಮೇಲೆ ದಾಳಿ ಮಾಡಲು ಪ್ರಯತ್ನಿಸಿತ್ತು. ಆದರೂ ಅರಣ್ಯ ಇಲಾಖೆಯವರು ಹುಲಿ ಸೆರೆ ಹಿಡಿಯಲು ವಿಫಲರಾಗಿದ್ದಾರೆ ಎಂದು ದೂರಿದರು.

ಸಾಲ ಸೋಲ ಮಾಡಿ 50 ಸಾವಿರ ಬೆಲೆ ಬಾಳುವ ಹಾಲು ಕರೆಯುವ ಹಸುವನ್ನು ಖರೀದಿಸಿ ಸಾಕುವ ಮೂಲಕ ಡೇರಿಗೆ ಹಾಲು ಸರಬರಾಜು ಮಾಡಿ ಜೀವನ ನಡೆಸುತ್ತಿದ್ದೆವು. ಇಂದು ಹುಲಿ ದಾಳಿ ಮಾಡಿ ಹಸು ಬಲಿ ತೆಗೆದುಕೊಂಡಿದೆ. ಇದರಿಂದ ಕುಟುಂಬ ಆರ್ಥಿಕ ನಷ್ಟಕ್ಕೆ ಒಳಗಾಗಿದೆ. ಹೀಗಾಗಿ ಅರಣ್ಯ ಇಲಾಖೆ ಪರಿಹಾರ ನೀಡಲು ಮುಂದಾಗಬೇಕು ಎಂದು ಮನವಿ ಮಾಡಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ, ಹುಲಿ ಸೆರೆಗೆ ಕ್ರಮ ಕೈಗೊಂಡು ಕ್ಯಾಮರಾ ಅಳವಡಿಸಿದ್ದಾರೆ ಎನ್ನಲಾಗಿದೆ.

ಹಲ್ಲರೆಯಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನ ಪ್ರಕರಣ

ಆರೋಪಿಗಳ ಪತ್ತೆ ಹಚ್ಚಿ ಶಿಕ್ಷೆ ವಿಧಿಸುವಂತೆ ಮನವಿ

ನಂಜನಗೂಡು, ಮೇ 22– ತಾಲೂಕಿನ ಹಲ್ಲರೆ ಗ್ರಾಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಅಪಮಾನವೆಸಗಿರುವ ಪ್ರಕರಣದ ತನಿಖೆಯನ್ನು ತ್ವರಿತವಾಗಿ ನಡೆಸಿ, ಆರೋಪಿಗಳನ್ನು ಪತ್ತೆ ಹಚ್ಚಿ ಶಿಕ್ಷೆಗೆ ಗುರಿಪಡಿಸುವಂತೆ ಆಗ್ರಹಿಸಿ ದಲಿತ ಸಂಘಟನೆಗಳ ನಿಯೋಗ ತಹಸೀಲ್ದಾರ್ ಹಾಗೂ ಡಿವೈಎಸ್‌ಪಿ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತು.



ತಹಸೀಲ್ದಾರ್, ಡಿವೈಎಸ್‌ಪಿಗೆ ಮನವಿ ಸಲ್ಲಿಸಲಾಯಿತು.

ನಗರದ ತಾಲೂಕು ಆಡಳಿತ ಭವನದಲ್ಲಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿ ಮಾತನಾಡಿದ ದಸಂಸ ಜಿಲ್ಲಾ ಪ್ರಧಾನ ಸಂಚಾಲಕ ನಾರಾಯಣ, ಮೇ 15 ರಂದು ಹಲ್ಲರೆ ಗ್ರಾಮದಲ್ಲಿ ಕಿಡಿಗೇಡಿಗಳು ಅಂಬೇಡ್ಕರ್ ನಾಮಫಲಕಕ್ಕೆ ಕೆಸರು ಎರಚಿ ಅಪಮಾನ ಮಾಡಿ ಗ್ರಾಮದಲ್ಲಿ ಅಶಾಂತಿ ಸೃಷ್ಟಿಸಿದ್ದಾರೆ. ಕಳೆದ ವರ್ಷ ಇದೇ ಗ್ರಾಮದಲ್ಲಿ ಅಂಬೇಡ್ಕರ್ ಅವರ ನಾಮಫಲಕ ಅಳವಡಿಕೆ ವಿಚಾರದಲ್ಲಿ 2 ಕೋಮುಗಳ ನಡುವೆ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು. ಬಳಿಕ ಗ್ರಾಮಸ್ಥರ ಸಮ್ಮುಖದಲ್ಲಿ ಸಭೆ ನಡೆಸಿ ಒಮ್ಮತದಿಂದ ನಾಮಫಲಕ ಅಳವಡಿಸಿ ಮುನ್ನೆಚ್ಚರಿಕೆ ಕ್ರಮವಾಗಿ ಸ್ಥಳದಲ್ಲಿ ಸಿಸಿ ಕ್ಯಾಮೆರಾ ಅಳವಡಿಸಿ ನಿರ್ವಹಣೆಯನ್ನು ಗ್ರಾಪಂ ಅಧಿಕಾರಿಗಳಿಗೆ ವಹಿಸಲಾಗಿತ್ತು. ಆದರೆ ಗ್ರಾಪಂ ಅಧಿಕಾರಿಗಳು ಸಿಸಿಟಿವಿ ನಿರ್ವಹಣೆಯಲ್ಲಿ ತೋರಿರುವ ನಿರ್ಲಕ್ಷ್ಯದಿಂದ ಸಾಕ್ಷ್ಯಗಳನ್ನು ಪತ್ತೆಹಚ್ಚಲು ಸಾಧ್ಯವಾಗುತ್ತಿಲ್ಲ ಎಂದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಆದ್ದರಿಂದ ಕರ್ತವ್ಯ ನಿರ್ವಹಣೆಯಲ್ಲಿ ಲೋಪವೆಸಗಿರುವ ಗ್ರಾಪಂ ಅಧಿಕಾರಿಗಳನ್ನು ಸೇವೆಯಿಂದ ವಜಾ ಮಾಡಬೇಕು ಹಾಗೂ ಘಟನೆ ನಡೆದ ದಿನ ವಾರದೊಳಗೆ ಅಪರಾಧಿಗಳನ್ನು ಪತ್ತೆ ಹಚ್ಚುವುದಾಗಿ ತಿಳಿಸಿದ್ದ ಪೊಲೀಸರು ಈವರೆಗೂ ಗಂಭೀರ ಕ್ರಮ ಕೈಗೊಂಡಿಲ್ಲ. 3 ದಿನದೊಳಗೆ ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಶಿಕ್ಷೆಕೊಡಿಸಲು ಪೊಲೀಸರು ಮುಂದಾಗಬೇಕು. ಇಲ್ಲವಾದಲ್ಲಿ ಉಗ್ರ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.

ಮನವಿ ಸ್ವೀಕರಿಸಿದ ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಹಾಗೂ ಡಿವೈಎಸ್‌ಪಿ ರಘು ಪ್ರಕರಣದ ತನಿಖೆ ಪ್ರಗತಿಯಲ್ಲಿದ್ದು, ತಪ್ಪಿತಸ್ಥರ ಮೇಲೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು. ಈ ಸಂದರ್ಭ ದಸಂಸ ಜಿಲ್ಲಾ ಸಂಚಾಲಕ ಮಲ್ಲೇಶ್, ಜಿಲ್ಲಾ ಸಂಯೋಜಕ ಬಸವಣ್ಣ, ಜನ ಸಂಗ್ರಾಮ ಪರಿಷತ್ ಗೌರವಾಧ್ಯಕ್ಷ ವಿಜಯ್ ಕುಮಾರ್, ಪುಟ್ಟಸ್ವಾಮಿ, ಶಿವರಾಜು ಉಪಸ್ಥಿತರಿದ್ದರು.

ನಾಳೆ ಪಿರಿಯಾಪಟ್ಟಣದಲ್ಲಿ ತಿರಂಗ ಯಾತ್ರೆ




ಪಿರಿಯಾಪಟ್ಟಣ, ಮೇ 22– ಆಪರೇಷನ್ ಸಿಂಧೂರ ಹೆಸರಿನಲ್ಲಿ ದೇಶದ ಭದ್ರತೆ, ಸಾರ್ವಭೌಮತ್ವ ಕಾಪಾಡುತ್ತಿರುವ ನಮ್ಮ ವೀರಯೋಧರಿಗೆ ಧೈರ್ಯ ತುಂಬುವ ಸಲುವಾಗಿ ಮೇ 24ರಂದು ಬೆಳಗ್ಗೆ 9.30ಕ್ಕೆ ಪಟ್ಟಣದಲ್ಲಿ ತಿರಂಗ ಯಾತ್ರೆ ಹಮ್ಮಿಕೊಳ್ಳಲಾಗಿದೆ.

ಪಟ್ಟಣದ ಬಸವೇಶ್ವರ ಸರ್ಕಲ್‌ನಿಂದ ಎಪಿಎಂಸಿವರೆಗೆ ತಿರಂಗ ಯಾತ್ರೆ ನಡೆಯಲಿದ್ದು, ತಾಲೂಕಿನ ವಿವಿಧ ಮಠಗಳ ಸ್ವಾಮೀಜಿಗಳು, ಸಂತರು ಸರ್ಕಾರಿ ಪ್ರೌಢಶಾಲೆ ಆವರಣದಲ್ಲಿರುವ ವೀರಯೋಧ ಬೆಳ್ಳಿಯಪ್ಪನವರ ಪ್ರತಿಮೆಗೆ ಪುಷ್ಪಾರ್ಚನೆ ಸಲ್ಲಿಸಿ ಯಾತ್ರೆಗೆ ಚಾಲನೆ ನೀಡಲಿದ್ದಾರೆ. ತಾಲೂಕಿನ ರೈತರು, ನಾಗರಿಕರು ಹಾಗೂ ಎಲ್ಲಾ ಪಕ್ಷದ ಮುಖಂಡರು, ಕಾರ್ಯಕರ್ತರು ಪಾಲ್ಗೊಳ್ಳಬೇಕೆಂದು ಬಿಜೆಪಿ ಹಾಗೂ ಜೆಡಿಎಸ್ ಮುಖಂಡರು ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು.

ಈ ವೇಳೆ ಮಾಜಿ ಶಾಸಕ ಹೆಚ್.ಸಿ. ಬಸವರಾಜ್, ಜೆಡಿಎಸ್ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಬಿಜೆಪಿ ಅಧ್ಯಕ್ಷ ರಾಜೇಂದ್ರ, ಮುಖಂಡರಾದ ಆರ್.ಟಿ.ಸತೀಶ್, ರಾಜೇಗೌಡ, ನಳಿನಿಗೌಡ, ಲೋಕಪಾಲಯ್ಯ, ಸ್ವಾಮಿ, ಶುಭಗೌಡ, ಮದನ್ ರಾಜೇ ಅರಸ್ ಸೇರಿದಂತೆ ಇತರರಿದ್ದರು.

ಎಂಎಲ್‌ಸಿ ಡಾ.ಯತೀಂದ್ರಗೆ ಸನ್ಮಾನ



ನಂಜನಗೂಡು ತಾಲೂಕಿನ ದುಗ್ಗಹಳ್ಳಿ ಗ್ರಾಪಂ ನೂತನ ಅಧ್ಯಕ್ಷ ಎಂ.ಕೊಂಗಳ್ಳಿ ಬಿ.ಶಂಕರ್ ಅವರು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅವರನ್ನು ಸನ್ಮಾನಿಸಿದರು. ಈ ವೇಳೆ ಜಿಲ್ಲಾ ಕನಕದಾಸ ನೌಕರರ ಸಂಘದ ಅಧ್ಯಕ್ಷ ಜವರೇಗೌಡ, ತಾಪಂ ಮಾಜಿ ಅಧ್ಯಕ್ಷ ತಮ್ಮಣ್ಣೇಗೌಡ, ಹಳ್ಳಿಕೆರೆಹುಂಡಿ ಶಿವಕುಮಾರ್, ಎಂ.ಎಸ್.ಡೆವಲಪರ್ಸ್‌ನ ಎನ್.ಮಂಜು, ಶಿವಪ್ರಸಾದ್, ಕಾಂಗ್ರೆಸ್ ಮುಖಂಡ ಸಂದೇಶ್ ಇದ್ದರು.

ಬೆನಕನಹಳ್ಳಿಯಲ್ಲಿ ಬಸವ ಪ್ರಚಾರ ರಥಯಾತ್ರೆಗೆ ಸ್ವಾಗತ

ತಿ.ನರಸೀಪುರ, ಮೇ 22– ಸುತ್ತೂರು ವೀರಸಿಂಹಾಸನ ಮಠದ ಪೀಠಾಧ್ಯಕ್ಷ ಶ್ರೀಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ಮೈಸೂರಿನ ಕಲಾಮಂದಿರದಲ್ಲಿ ನಡೆಯಲಿರುವ ಬಸವ ಜಯಂತಿ ಅಂಗವಾಗಿ ತಾಲೂಕಿನ ಬೆನಕನಹಳ್ಳಿ ಗ್ರಾಮಕ್ಕೆ ಆಗಮಿಸಿದ ಬಸವ ಪ್ರಚಾರ ರಥಯಾತ್ರೆಗೆ ಸ್ವಾಗತ ಕೋರಲಾಯಿತು.

ತಾಲೂಕಿನ ವಿವಿಧ ಗ್ರಾಮಗಳಲ್ಲಿ ಸಂಚರಿಸಿದ ಬಸವ ಪ್ರಚಾರ ರಥಯಾತ್ರೆ ಬೆನಕನಹಳ್ಳಿ ಗ್ರಾಮಕ್ಕೆ ಪ್ರವೇಶಿಸುತ್ತಿದ್ದಂತೆ ಕೃಷಿಕ ಸಮಾಜದ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ ನೇತೃತ್ವದಲ್ಲಿ ನೆರೆದಿದ್ದ ಸಮಾಜದ ಮುಖಂಡರು ರಥಯಾತ್ರೆಗೆ ಪುಷ್ಪಾರ್ಚನೆ ಮಾಡಿ ಬರಮಾಡಿಕೊಂಡರು.



ಬಸವ ಪ್ರಚಾರ ರಥಯಾತ್ರೆಗೆ ಬೆನಕನಹಳ್ಳಿಗೆ ಗ್ರಾಮಸ್ಥರು ಸ್ವಾಗತ ಕೋರಿದರು.

ಬಿ.ಎಂ.ಶಿವಮಲ್ಲಪ್ಪ ಮಾತನಾಡಿ, ಕಳೆದ ಒಂದು ತಿಂಗಳಿಂದ ತಾಲೂಕಿನ ವಿವಿಧ ಗ್ರಾಮಗಳಲ್ಲಿ ಬಸವ ಜಯಂತಿಯನ್ನು ವಿಜೃಂಭಣೆಯಿಂದ ಆಚರಿಲಾಗಿದೆ. ಸಣ್ಣ ಪುಟ್ಟ ಗ್ರಾಮಗಳಲ್ಲೂ ಸಮಾಜದ ಯುವಕರು, ಬಸವ ಯುವ ಬಳಗದವರು ಪ್ರಮುಖ ಸ್ವಾಮೀಜಿಗಳ ಸಾನಿಧ್ಯದಲ್ಲಿ ಅರ್ಥಪೂರ್ಣವಾಗಿ ಬಸವಣ್ಣನವರ ಜಯಂತಿ ಆಚರಿಸುವ ಮೂಲಕ ದಾಸೋಹ ಕಾರ್ಯಕ್ರಮ ನಡೆಸಿದ್ದಾರೆ. ಹೀಗಾಗಿ ಈಗ ಬಸವ ಬಳಗದ ಎಲ್ಲಾ ಒಕ್ಕೂಟಗಳನ್ನು ಒಗ್ಗೂಡಿಸಿ ಮೇ 24 ಮತ್ತು 25 ರಂದು ಜಿಲ್ಲಾ ಮಟ್ಟದಲ್ಲಿ 'ನಮ್ಮ ನಡೆ ಅನುಭವ ಮಂಟಪದ ಕಡೆಗೆ' ಎಂಬ ಹೆಸರಿನಲ್ಲಿ ಕಲಾ ಮಂದಿರದಲ್ಲಿ ವಿಜೃಂಭಣೆಯಿಂದ ಬಸವ ಜಯಂತಿ ಆಚರಿಸಲಾಗುತ್ತಿದೆ. ಕಾರ್ಯಕ್ರಮ ಸುತ್ತೂರು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನಿಧ್ಯದಲ್ಲಿ ನಡೆಯಲಿದ್ದು, ಹಲವು ಮಠಾಧೀಶರು ಭಾಗವಹಿಸಲಿದ್ದು, ಬಸವ ಭಕ್ತರು, ತಾಲೂಕಿನ ಎಲ್ಲಾ ವೀರಶೈವ ಮಹಾಸಭಾ ಸದಸ್ಯರು, ಜಾತ್ಯಾತೀತ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಈ ವೇಳೆ ಪ್ರಚಾರ ಸಮಿತಿ ಅಧ್ಯಕ್ಷ ಕೀಳನಪುರ ಮಂಜು, ದೊಡ್ಡನಹುಂಡಿ ನಂಜುಂಡಸ್ವಾಮಿ, ವೀರಭದ್ರಸ್ವಾಮಿ, ಬಸವರಾಜು, ಜಿ.ಆರ್. ಸುಂದರಪ್ಪ, ಸೋಸಲೆ ಪಿಎಸಿಸಿಎಸ್ ಮಾಜಿ ಅಧ್ಯಕ್ಷ ಪ್ರಭುಸ್ವಾಮಿ, ಡೈರಿ ಅಧ್ಯಕ್ಷ ಬಸವಣ್ಣ, ನಾಗಪ್ಪ, ಸುರೇಶ್, ರಾಜಪ್ಪ ಸೇರಿದಂತೆ ಬೆನಕನಹಳ್ಳಿ ಗ್ರಾಮಸ್ಥರು, ಯಜಮಾನರು ಹಾಜರಿದ್ದರು.

> ಕಾಯಕವೇ ಕೈಲಾಸ ಎಂದು ಮನುಕುಲಕ್ಕೆ ಮಹಾ ಸಂದೇಶ ನೀಡಿದ ಬಸವಣ್ಣನವರ ಜಯಂತಿ ಹಿಂದೂಗಳ ಹಬ್ಬವಾಗಿದೆ. ಬಸವಣ್ಣನವರು ಶೈವ ಧರ್ಮದ ಭಕ್ತಿ ಚಳವಳಿಯಲ್ಲಿ ಪ್ರಸಿದ್ಧ ಸಂತರಾಗಿದ್ದರು. ಇವರು ರಾಜನೀತಿಜ್ಞರಾಗಿ ಮತ್ತು ಸಮಾಜ ಸುಧಾರಕರಾಗಿ ತಮ್ಮ ಕಾವ್ಯ ಮತ್ತು ಬರವಣಿಗೆ ಮೂಲಕ ಸಾರ್ವಜನಿಕರಲ್ಲಿ ಸಾಮಾಜಿಕ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ಅವಿರತವಾಗಿ ಶ್ರಮಿಸಿದರು. ಅಂತಹ ಮಹಾನ್ ಕಾಯಕಯೋಗಿ ಬಸವಣ್ಣನವರ ವಚನಗಳು ಸರ್ವ ಕಾಲಕ್ಕೂ ಸಲ್ಲುವಂತದ್ದಾಗಿವೆ.
> –ಬಿ.ಎಂ.ಶಿವಮಲ್ಲಪ್ಪ, ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ.

ಗೃಹಿಣಿ ಆತ್ಮಹತ್ಯೆ

ನಂಜನಗೂಡು, ಮೇ 22– ಮಕ್ಕಳಾಗಿಲ್ಲ ಎಂಬ ಕಾರಣಕ್ಕೆ ಗೃಹಿಣಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನ ಕರಳಾಪುರ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಶ್ರೀಕಾಂತ್ ಅವರ ಪತ್ನಿ ಮಹಾದೇವಿ (25) ಆತ್ಮಹತ್ಯೆ ಮಾಡಿಕೊಂಡವರು. ಕಳೆದ 4 ವರ್ಷಗಳ ಹಿಂದೆ ತಾಲೂಕಿನ ಮಧುವಿನಹಳ್ಳಿ ಗ್ರಾಮದ ಮಹದೇವಶೆಟ್ಟಿ ಅವರ ಪುತ್ರಿ ಮಹಾದೇವಿ ಅವರನ್ನು ಕರಳಾಪುರ ಗ್ರಾಮದ ದೇವಶೆಟ್ಟಿ ಅವರ ಪುತ್ರ ಶ್ರೀಕಾಂತ್‌ಗೆ ಮದುವೆ ಮಾಡಿಕೊಡಲಾಗಿತ್ತು. ಆದರೆ ಮಕ್ಕಳಾಗಿಲ್ಲ ಎಂಬ ಕಾರಣಕ್ಕೆ ಮನನೊಂದು ಮಹಾದೇವಿ ಬುಧವಾರ ಮನೆಯಲ್ಲಿ ಯಾರು ಇಲ್ಲದ ವೇಳೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಮೃತಳ ತಂದೆ ಪೊಲೀಸರಿಗೆ ದೂರು ನೀಡಿದ್ದು, ಸ್ಥಳಕ್ಕೆ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಸುನೀಲ್ ಕುಮಾರ್ ಭೇಟಿ ನೀಡಿ, ಶವವನ್ನು ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಐಪಿಎಲ್ ಹಂಗಾಮ

ಗುಜರಾತ್ ವಿರುದ್ಧ ಪಂತ್ ಪಡೆಗೆ ಭರ್ಜರಿ ಜಯ



ಅಹಮದಾಬಾದ್, ಮೇ 22– ಮಿಚೆಲ್ ಮಾರ್ಷ್ ಅವರ ಶತಕದ ನೆರವಿನಿಂದ ಆಟಕ್ಕುಂಟು ಲೆಕ್ಕಕ್ಕಿಲ್ಲದ ಪಂದ್ಯದಲ್ಲಿ ರೋಷಾವೇಶದ ಪ್ರದರ್ಶನ ನೀಡಿದ ಲಕ್ನೋ ಸೂಪರ್ ಜೈಂಟ್ಸ್ ಗುಜರಾತ್ ಟೈಟಾನ್ಸ್ ವಿರುದ್ಧ 33 ರನ್‌ಗಳ ಭರ್ಜರಿ ಗೆಲುವು ಸಾಧಿಸಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಲಕ್ನೋ 20 ಓವರ್‌ಗಳಲ್ಲಿ 2 ವಿಕೆಟ್ ನಷ್ಟಕ್ಕೆ 235 ರನ್ ಗಳಿಸಿತು. ಬೃಹತ್ ಗುರಿ ಬೆನ್ನತ್ತಿದ ಗುಜರಾತ್ ಟೈಟನ್ಸ್ ನಿಗದಿತ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 202 ರನ್ ಗಳಿಸಿ ಸೋಲೊಪ್ಪಿಕೊಂಡಿತು. ಈಗಾಗಲೇ ಪ್ಲೇ ಆಫ್ ಪ್ರವೇಶಿಸಿರುವ ಟೈಟಾನ್ಸ್‌ಗೆ ಈ ಸೋಲು ಲೆಕ್ಕವಿಲ್ಲದಂತಾಗಿದೆ.

ಚೇಸಿಂಗ್ ಆರಂಭಿಸಿದ ಟೈಟನ್ಸ್ ಪರ ಸಾಯಿ ಸುದರ್ಶನ್ ಹಾಗೂ ಶುಭ್‌ಮನ್ ಗಿಲ್ ಮೊದಲ ವಿಕೆಟ್‌ಗೆ 46 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ 21 ರನ್ ಗಳಿಸಿದ್ದ ಸಾಯಿ ಸುದರ್ಶನ್ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ಜೋಸ್ ಬಟ್ಲರ್ ಸ್ಫೋಟಕ ಬ್ಯಾಟಿಂಗ್‌ಗೆ ಮುಂದಾಗಿ 18 ಎಸೆತಗಳಲ್ಲಿ 3 ಬೌಂಡರಿ, 2 ಸಿಕ್ಸರ್ ಒಳಗೊಂಡ 33 ರನ್ ಗಳಿಸಿದರೇ, ನಾಯಕ ಶುಭ್‌ಮನ್ ಗಿಲ್ 7 ಬೌಂಡರಿ ಒಳಗೊಂಡ 35 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ಶೆರ್ಫೇನ್ ರುದರ್ಫೋರ್ಡ್ 22 ಎಸೆತಗಳಲ್ಲಿ 3 ಸಿಕ್ಸರ್, 1 ಬೌಂಡರಿ ಒಳಗೊಂಡ 38ರನ್ ಗಳಿಸಿ ಔಟಾದರು. ಮತ್ತೊಂದೆಡೆ ಅಬ್ಬರಿಸಿದ ಶಾರೂಖ್ ಖಾನ್ ಬಿರುಸಿನ ಅರ್ಧ ಶತಕ ಸಿಡಿಸಿ ಮಿಂಚಿದರು. ಆದರೆ 29 ಎಸೆತಗಳಲ್ಲಿ 3 ಸಿಕ್ಸ್, 5 ಬೌಂಡರಿ ಒಳಗೊಂಡ 57 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ವಿಕೆಟ್ ಒಪ್ಪಿಸಿದರು. ಲಕ್ನೋ ಪರ ವಿಲಿಯಂ ಓ ರೂಕಿ 3, ಆವೇಶ್ ಖಾನ್, ಆಯುಷ್ ಬದೋನಿ ತಲಾ 2, ಆಕಾಶ್ ಮಹಾರಾಜ್ ಸಿಂಗ್, ಶೆಹ್ಬಾಜ್ ಅಹ್ಮದ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ಪರ ಆರಂಭಿಕರಾದ ಮಿಚೆಲ್ ಮಾರ್ಷ್ ಹಾಗೂ ಏಡನ್ ಮಾರ್ಕ್ರಮ್ ತಂಡಕ್ಕೆ ಉತ್ತಮ ಆರಂಭ ನೀಡಿತು. ಆದರೆ ಏಡನ್ ಮಾರ್ಕ್ರಮ್ 2 ಸಿಕ್ಸರ್, 3 ಬೌಂಡರಿ ಒಳಗೊಂಡ 36 ರನ್ ಗಳಿಸಿ ನಿರ್ಗಮಿಸಿದರು. ಈ ವೇಳೆ ತಂಡದ ಮೊತ್ತ 91 ರನ್ ಆಗಿತ್ತು. ಬಳಿಕ ಕ್ರೀಸ್‌ಗೆ ಬಂದ ನಿಕೋಲಸ್ ಪೂರನ್, ಮಿಚೆಲ್ ಮಾರ್ಷ್‌ಗೆ ಉತ್ತಮ ಸಾಥ್ ನೀಡಿದರು. ಈ ಜೋಡಿ ಬೌಂಡರಿ, ಸಿಕ್ಸರ್ ಮೂಲಕ ಸ್ಟೇಡಿಯಂನಲ್ಲಿ ರನ್ ಮಳೆಯನ್ನೇ ಹರಿಸಿತ್ತು. ಅಲ್ಲದೇ 2ನೇ ವಿಕೆಟ್‌ಗೆ 52 ಎಸೆತಗಳಲ್ಲಿ 121 ರನ್ ಜೊತೆಯಾಟವಾಡುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು.

ಪಂದ್ಯದಲ್ಲಿ ಅಬ್ಬರಿಸಿದ ಮಿಚೆಲ್ ಮಾರ್ಷ್ 64 ಎಸೆತಗಳಲ್ಲಿ 8 ಸಿಕ್ಸರ್, 10 ಬೌಂಡರಿ ಒಳಗೊಂಡ 117 ರನ್ ಸಿಡಿಸಿ ಔಟ್ ಆದರು. ಕಳೆದ ಕೆಲವು ಪಂದ್ಯಗಳಲ್ಲಿ ನಿರಾಸೆ ಮೂಡಿಸಿದ್ದ ನಿಕೋಲಸ್ ಪೂರನ್ ಗುಜರಾತ್ ವಿರುದ್ಧ ಅಬ್ಬರಿಸಿದರು. 27 ಎಸೆತಗಳಲ್ಲಿ 4 ಬೌಂಡರಿ, 5 ಸಿಕ್ಸ್ ಒಳಗೊಂಡ ಅಜೇಯ 56 ರನ್ ಸಿಡಿಸಿ ಮಿಂಚಿದರು. ನಾಯಕ ರಿಷಭ್ ಪಂತ್ 6 ಎಸೆತಗಳಲ್ಲಿ 2 ಸಿಕ್ಸರ್ ಬಾರಿಸಿ ಅಜೇಯ 16 ರನ್ ಸಿಡಿಸಿ ತಂಡದ ಮೊತ್ತವನ್ನು ಹಿಗ್ಗಿಸಿದರು. ಗುಜರಾತ್ ಪರ ಸಾಯಿ ಕಿಶೋರ್, ಅರ್ಶದ್ ಖಾನ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ಮಿಚೆಲ್ ಮಾರ್ಷ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಗುಜರಾತ್	13	9	4	0	18
ಬೆಂಗಳೂರು	12	8	3	1	17
ಪಂಜಾಬ್	12	8	3	1	17
ಮುಂಬೈ	13	8	5	0	16
ಡೆಲ್ಲಿ	13	6	6	1	13
ಕೊಲ್ಕತ್ತಾ	13	5	6	2	12
ಲಕ್ನೋ	13	6	7	0	12
ಹೈದರಾಬಾದ್	12	4	7	1	9
ರಾಜಸ್ಥಾನ್	14	4	10	0	8
ಚೆನ್ನೈ	13	3	10	0	6

ಇಂದಿನ ಪಂದ್ಯ

ರಾಯಲ್ ಚಾಲೆಂಜರ್ಸ್ ಬೆಂಗಳೂರು
V/S
ಸನ್‌ರೈಸರ್ಸ್ ಹೈದರಾಬಾದ್
ಸಮಯ: ಸಂಜೆ 7.30
ಸ್ಥಳ : ಅಟಲ್ ಬಿಹಾರಿ ವಾಜಪೇಯಿ ಕ್ರೀಡಾಂಗಣ, ಲಕ್ನೋ

ಗ್ಯಾರಂಟಿ ಯೋಜನೆಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು

ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎಸ್.ಅರುಣ್ ಕುಮಾರ್ ಸಲಹೆ

ಮೈಸೂರು, ಮೇ 22(ಎಂಟಿವೈ)– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಮಹತ್ವಾಕಾಂಕ್ಷೆಯ ಗ್ಯಾರಂಟಿ ಯೋಜನೆಯನ್ನು ಜಿಲ್ಲಾ ಮಟ್ಟದಲ್ಲಿ ಪರಿಣಾಮಕಾರಿಯಾಗಿ ಜಾರಿಗೊಳಿಸುವುದರೊಂದಿಗೆ ಗ್ಯಾರಂಟಿ ಯೋಜನೆಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು ಎಂದು ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಎಸ್.ಅರುಣ್‌ಕುಮಾರ್ ಸಲಹೆ ನೀಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯತ್‌ನ ಡಿ.ದೇವರಾಜ ಅರಸು ಸಭಾಂಗಣದಲ್ಲಿ ನಡೆದ ಗ್ಯಾರಂಟಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಎಲ್ಲಾ ಜಾತಿ, ಧರ್ಮ ಹಾಗೂ ಎಲ್ಲಾ ವರ್ಗದ ಬಡವರ ಹಿತಕಾಯಲು ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ಈ ಯೋಜನೆಗಳಿಂದಾಗಿ ಲಕ್ಷಾಂತರ ಕುಟುಂಬಗಳು ನೆಮ್ಮದಿ ಹಾಗೂ ಗೌರವದಿಂದ ಜೀವನ ಸಾಗಿಸುವಂತಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಪಂಚ ಗ್ಯಾರಂಟಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಅರ್ಹ ಫಲಾನುಭವಿಗಳಿಗೆ ಸವಲತ್ತು ತಲುಪಿಸಲು ಮುಂದಾಗಬೇಕು. ಅಲ್ಲದೆ, ಯೋಜನೆಗಳ ಬಗ್ಗೆ ಜನರಿಗೆ ಅರಿವು ಮೂಡಿಸಬೇಕು ಎಂದರು.



ಮೈಸೂರಿನ ಜಿಲ್ಲಾ ಪಂಚಾಯತ್‌ನ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಜಿಲ್ಲಾ ಅಧ್ಯಕ್ಷ ಎಸ್.ಅರುಣ್ ಕುಮಾರ್ ಗ್ಯಾರಂಟಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಪ್ರತಿಯೊಬ್ಬರಿಗೂ ಗ್ಯಾರಂಟಿ ಯೋಜನೆಯ ಸವಲತ್ತು ಸಿಗುವಂತೆ ಪ್ರತಿಯೊಂದು ಇಲಾಖೆಯು ಕಾರ್ಯ ನಿರ್ವಹಿಸಬೇಕು. ಎಲ್ಲಾ ಯೋಜನೆಗಳ ಬಗ್ಗೆ ಫಲಾನುಭವಿಗಳಿಗೆ ತಿಳಿಸಬೇಕು. ಗ್ಯಾರಂಟಿ ಯೋಜನೆಗಳ ಸೌಲಭ್ಯ ಪಡೆಯಲು ಫಲಾನುಭವಿಗಳಿಗೆ ಸಾಧ್ಯವಾಗದೇ ಇದ್ದರೆ ಅಂತಹ ಫಲಾನುಭವಿಗಳಿಂದ ದೂರು ಸ್ವೀಕರಿಸಲು ದೂರು ಪೆಟ್ಟಿಗೆಯನ್ನು ತೆರೆಯಬೇಕು. ಗೃಹಲಕ್ಷ್ಮಿ ಯೋಜನೆಯ ಬಗ್ಗೆ ಎಲ್ಲರಿಗೂ ಪ್ರಚಾರ ಮಾಡಿ ಮಾದರಿ ಯೋಜನೆಯನ್ನಾಗಿ ಮಾಡಬೇಕು. ಸಿಡಿಪಿಓಗಳು ಪ್ರತಿ ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಪರಿಶೀಲಿಸಬೇಕು. ಅಂಗನವಾಡಿ ಕಾರ್ಯಕರ್ತೆಯರು ಫಲಾನುಭವಿಗಳಿಗೆ ಅನುಕೂಲ ಆಗುತ್ತಿದೆಯೇ ಎಂದು ವಿಚಾರಣೆ ಮಾಡುವಂತೆ ಸೂಚಿಸಬೇಕು ಎಂದು ಹೇಳಿದರು.

ಅನ್ನಭಾಗ್ಯ ಯೋಜನೆಯಲ್ಲಿ ಯಾವುದೇ ಲೋಪವಾಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಅಧಿಕಾರಿಗಳ ಜವಾಬ್ದಾರಿಯಾಗಿದೆ. ಅನ್ನಭಾಗ್ಯ ಯೋಜನೆಗಾಗಿ ಆ್ಯಪ್‌ವೊಂದನ್ನು ರಚಿಸಿ, ಆ ಮೂಲಕ ಫಲಾನುಭವಿಗಳಿಗೆ ಮಾಹಿತಿ ಒದಗಿಸಬೇಕು ಎಂದರು.

ರಾಜ್ಯದ ಜನರಿಗೆ 200 ಯೂನಿಟ್ ಉಚಿತ ವಿದ್ಯುತ್ ಅನ್ನು ಗೃಹಜ್ಯೋತಿ ಯೋಜನೆಯಡಿ ನೀಡುತ್ತಿದ್ದು, ಈ ಬಗ್ಗೆ ಗ್ರಾಮೀಣ ಮಟ್ಟದಲ್ಲಿ ಇದರ ಬಗ್ಗೆ ಜಾಗೃತಿ ಮೂಡಿಸಬೇಕು. ಯುವನಿಧಿ ಯೋಜನೆಯಡಿ ಜಿಲ್ಲೆಯಲ್ಲಿ ಒಟ್ಟು 11154 ಅಭ್ಯರ್ಥಿಗಳು ನೋಂದಣಿಯಾಗಿದ್ದು, ಫೆಬ್ರವರಿ ಅಂತ್ಯಕ್ಕೆ 8286 ಫಲಾನುಭವಿಗಳು ಈ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳುತ್ತಿದ್ದಾರೆ. ಯಾವುದೇ ಗ್ಯಾರಂಟಿ ಯೋಜನೆಗಳ ಬಗ್ಗೆ ಅಪಸ್ವರ ಬರದಂತೆ ಪ್ರತಿಯೊಂದು ಇಲಾಖೆಯವರು ಹೆಚ್ಚು ಕ್ರಮವಹಿಸಬೇಕು. ಪ್ರತಿಯೊಂದು ಯೋಜನೆಗಳು ಜನರಿಗೆ ತಲುಪುವಂತೆ ಮಾಡಬೇಕು ಎಂದು ಹೇಳಿದರು.

ಸಭೆಯಲ್ಲಿ ಜಿ.ಪಂ ಸಿಇಓ ಯುಕೇಶ್ ಕುಮಾರ್, ಜಿ.ಪಂ ಸಿಪಿಓ ಪ್ರಭುಸ್ವಾಮಿ, ಗ್ಯಾರಂಟಿ ಯೋಜನೆಯ ಜಿಲ್ಲಾ ಮಟ್ಟದ ಉಪಾಧ್ಯಕ್ಷರಾದ ಚಂದ್ರಶೇಖರ್, ಸಾ.ಮಾ.ಯೋಗೇಶ್, ಪ್ರೊ.ಶಿವಕುಮಾರ್, ಹುಣಸೂರು ಬಸವಣ್ಣ ಸದಸ್ಯರಾದ ಉತ್ತನಹಳ್ಳಿ ಶಿವಣ್ಣ ಲತಾ, ಕೆ. ಮಾರುತಿ, ರಘು, ಅಬ್ದುಲ್ ಖಾನ್ ಪ್ರಸನ್ನ ಬಾಬು ಹಾಗೂ ಮತ್ತಿತರರು ಪಾಲ್ಗೊಂಡಿದ್ದರು.

ಸಿದ್ದರಾಮಯ್ಯ ಅತೀ ಹೆಚ್ಚು ಬಜೆಟ್ ಮಂಡಿಸಿದಂತೆ ಅತೀ ಹೆಚ್ಚು ಸಾಲವನ್ನೂ ಮಾಡಿದ್ದಾರೆ!

ಹಾಲಿನಿಂದ ಆಲ್ಕೋಹಾಲ್ ತನಕ ಸಾಲ ಮಾಡಿದ ಕೀರ್ತಿ ಸಿದ್ದರಾಮಯ್ಯರಿಗೆ ಸಲ್ಲುತ್ತೆ!!

● ಮೈಸೂರಿನಲ್ಲಿ ಎಂಎಲ್‌ಸಿ ಸಿ.ಟಿ.ರವಿ ಟೀಕೆ ● ಒಟ್ಟು 7 ಲಕ್ಷ ಕೋಟಿ ಸಾಲದಲ್ಲಿ ಸಿದ್ದರಾಮಯ್ಯ ಒಬ್ಬರೆ 4 ಲಕ್ಷ ಕೋಟಿ ಮಾಡಿದ್ದಾರೆ ● ಕಮ್ಯೂನಲ್, ಕ್ರಿಮಿನಲ್‌ಗಳಿಗೆ ಈ ಸರ್ಕಾರದಲ್ಲಿ ರಾಜಾಶ್ರಯ ● ಕೋಮುವಾದಿಗಳು ಹಾದಿ-ಬೀದಿಯಲ್ಲಿ ಹಮಾರ ಸರ್ಕಾರ್ ಎನ್ನುತ್ತಾರೆ ● ಬೆಂಗಳೂರು ನೀರಿನಲ್ಲಿ ತೇಲುತ್ತಿದ್ದರೆ ಸಿಎಂ ಹೊಸಪೇಟೆಯಲ್ಲಿ ಸಮಾವೇಶದ ಬ್ಯುಸಿಯಲ್ಲಿದ್ದರು.



ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಗುರುವಾರ ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅವರು ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ಚಾರ್ಜ್‌ಶೀಟ್ ಬಿಡುಗಡೆ ಮಾಡಿದರು.

ಮೈಸೂರು, ಮೇ22(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅತೀ ಹೆಚ್ಚು ಬಾರಿ ಬಜೆಟ್ ಮಂಡಿಸಿದಂತೆ, ಅತೀ ಹೆಚ್ಚು ಸಾಲವನ್ನು ಮಾಡಿದ್ದಾರೆ. ಹಾಲಿನಿಂದ ಹಿಡಿದು ಆಲ್ಕೋಹಾಲ್ ತನಕ ಸಾಲ ಮಾಡಿದಂತಹ ಕೀರ್ತಿ ಸಿದ್ದರಾಮಯ್ಯನವರಿಗೆ ಸಲ್ಲಬೇಕು ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಲೇವಡಿ ಮಾಡಿದ್ದಾರೆ.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಪತ್ರಕರ್ತರ ಜೊತೆ ಮಾತನಾಡಿದ ಅವರು, ಈ ತನಕ ಕರ್ನಾಟಕ ರಾಜ್ಯದ ಸಮಗ್ರ ಸಾಲ 7 ಲಕ್ಷ ಕೋಟಿಯಾಗಿದ್ದು, ಇದರಲ್ಲಿ ಸಿದ್ದರಾಮಯ್ಯ ಅವರೊಬ್ಬರೇ 4 ಲಕ್ಷ ಕೋಟಿ ಮಾಡಿದ್ದಾರೆ ಎಂದು ಆರೋಪಿಸಿದರು.

2024–25 ಆರ್ಥಿಕ ವರ್ಷದಲ್ಲಿ ಸಿದ್ದರಾಮಯ್ಯ ಅವರು 1.16 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಹೆಚ್ಚು ಸಾಲ ಮಾಡಿರುವುದು ಕಾಂಗ್ರೆಸ್ ಸರ್ಕಾರದ ಸಾಧನೆಯೂ ಆಗಿದೆ ಎಂದು ಸಿ.ಟಿ.ರವಿ ಟೀಕಿಸಿದರು.

ರಾಜಧಾನಿ ಬೆಂಗಳೂರು ನೀರಿನಲ್ಲಿ ತೇಲುವಾಗ, ಇಲ್ಲಿ ಜನರು ಸಂಕಷ್ಟದಲ್ಲಿರುವಾಗ ಸಾಧನೆ ಮಾಡಿದ್ದೇವೆಂದು ಹೊಸಪೇಟೆಯಲ್ಲಿ ಸಮಾವೇಶ ಮಾಡಿದ್ದಾರೆ. ಬೆಲೆ ಏರಿಕೆ, ಭ್ರಷ್ಟಾಚಾರ, ರೈತರ ಆತ್ಮಹತ್ಯೆ, ಸರ್ಕಾರಿ ನೌಕರರು ಹಾಗೂ ಅಧಿಕಾರಿಗಳ ಆತ್ಮಹತ್ಯೆ, ಗುತ್ತಿಗೆದಾರರ ಆತ್ಮಹತ್ಯೆ, ಕೊಲೆ, ಸುಲಿಗೆಯಾಗಿ ಕಾನೂನು ಸುವ್ಯವಸ್ಥೆ ಹದಗೆಟ್ಟಿರುವುದು ಈ ಸರ್ಕಾರದ ಸಾಧನೆಯೇ ಎಂದು ಪ್ರಶ್ನಿಸಿದರು.

ವಿವಿಧ ರೀತಿಯ 64 ಬೆಲೆ ಏರಿಕೆ ಮಾಡಿರುವುದು ಈ ಸರ್ಕಾರದ ದೊಡ್ಡ ಸಾಧನೆಯಾಗಿದ್ದು, ಯಾವ ಪುರುಷಾರ್ಥಕ್ಕೆ ಸಾಧನಾ ಸಮಾವೇಶ ಮಾಡಿದ್ದಾರೆ ಎಂದು ಮರು ಪ್ರಶ್ನಿಸಿದ ಸಿ.ಟಿ.ರವಿ, ಜನರ ತೆರಿಗೆ ಹಣದಲ್ಲಿ ಸಮಾವೇಶ ಮಾಡಿದ್ದಾರೆ. ಹೊಸಪೇಟೆ ಸಮಾವೇಶದಲ್ಲಿ ರಾಜ್ಯದ ಮುಖ್ಯ ಕಾರ್ಯದರ್ಶಿ, ಜಿಲ್ಲಾಧಿಕಾರಿ ಭಾಗಿಯಾಗಿದ್ದಾರೆ. ಅವರ ಸಮ್ಮುಖದಲ್ಲಿ ಕಾಂಗ್ರೆಸ್‌ಗೆ ಜಿಂದಾಬಾದ್ ಎಂದು ಕೂಗಿದ್ದಾರೆ. ಅಂದರೆ ಇದು ಕಾಂಗ್ರೆಸ್ ಸಮಾವೇಶವೇ ಇಲ್ಲ ಸರ್ಕಾರದ ಸಮಾವೇಶವೇ ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ಸರ್ಕಾರದಲ್ಲಿ ಭ್ರಷ್ಟಾಚಾರ ನಡೆಯದ ಇಲಾಖೆಗಳೇ ಇಲ್ಲ. ರಾಜ್ಯಾದ್ಯಂತ ಸರ್ಕಾರಿ ಆಸ್ಪತ್ರೆಗಳಲ್ಲಿ 700 ಕ್ಕೂ ಹೆಚ್ಚು ಬಾಣಂತಿಯರ ಸಾವಾಗಿದೆ. 3 ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸರ್ಕಾರಿ ನೌಕರರು ಹಾಗೂ ಅಧಿಕಾರಿಗಳು ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆಗೆ ಶರಣಾಗಿದ್ದಾರೆ ಎಂದರು.

ಕಮ್ಯೂನಲ್, ಕ್ರಿಮಿನಲ್‌ಗಳಿಗೆ ರಾಜಾಶ್ರಯ : ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಕೋಮು ಗಲಭೆ ಹೆಚ್ಚಾಗಿದೆ. ಕಮ್ಯೂನಲ್ ಮತ್ತು ಕ್ರಿಮಿನಲ್‌ಗಳಿಗೆ ಈ ಸರ್ಕಾರ ರಾಜಾಶ್ರಯ ನೀಡಿದೆ. ಇದರಿಂದ ಕೋಮುವಾದಿಗಳು ಹಮಾರ ಸರ್ಕಾರ್ ಘೋಷಣೆ ಕೂಗುತ್ತಿದ್ದಾರೆ. ಸಿದ್ದರಾಮಯ್ಯ ಮೊದಲ ಬಾರಿ ಮುಖ್ಯಮಂತ್ರಿ ಆಗಿದ್ದಾಗ ಲವಲವಿಕೆ ಇತ್ತು, ಉತ್ಸಾಹವಿತ್ತು. ಆದರೆ ಈಗ ಈ ಸರ್ಕಾರಕ್ಕೆ ಕೋವಿಡ್ ಬಂದಿದೆ ಎಂದು ಹೇಳಿದರು.

ಉದ್ಯೋಗ ಸೃಷ್ಟಿಸುವ, ಆರ್ಥಿಕ ಶಕ್ತಿ ವೃದ್ಧಿಸುವ ಒಂದು ಯೋಜನೆಯೂ ಸಾಕಾರಗೊಂಡಿಲ್ಲ. ಬೆಂಗಳೂರಿನಲ್ಲಿ ಆಸ್ತಿ ಮಾರಾಟಕ್ಕೆ ಒಂದು ಚದರಡಿಗೆ ನೂರು ರೂಪಾಯಿ ಲಂಚ ನಿಗದಿ ಮಾಡಿದ್ದಾರೆ. ಭ್ರಷ್ಟತೆ ಮಿತಿ ಮೀರಿದೆ ಎಂದು ಸಿ.ಟಿ.ರವಿ ಆರೋಪಿಸಿದರು.

ಸಂಸದ ಯದುವೀರ್, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಅಲ್ಪಸಂಖ್ಯಾತ ರಾಜ್ಯಾಧ್ಯಕ್ಷ ಡಾ.ಅನಿಲ್ ಥಾಮಸ್, ರಾಜ್ಯ ಸಂಚಾಲಕ ಎನ್.ವೈ.ಫಣೀಶ್, ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಮಹೇಶ್, ಮಾಧ್ಯಮ ಸಂಚಾಲಕ ಮಹೇಶ್ ರಾಜ್ ಅರಸ್, ಮಾಜಿ ಮೇಯರ್ ಸಂದೇಶ್ ಸ್ವಾಮಿ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಪಂಚ ಗ್ಯಾರಂಟಿಗಳು ಪಂಕ್ಚರ್ ಆಗಿವೆ

ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳು ಪಂಕ್ಚರ್ ಆಗಿವೆ ಎಂದು ಎರಡನೇ ಬಾರಿಗೆ ಚಾರ್ಜ್‌ಶೀಟ್ ಬಿಡುಗಡೆ ಮಾಡಿ ಸಿ.ಟಿ.ರವಿ ಟೀಕಿಸಿದರು.

"ಕರ್ನಾಟಕದ ಜನರ ಬದುಕಿಗೆ ಶಾಪವಾದ ವಸೂಲಿ ಸರ್ಕಾರ" ಚಾರ್ಜ್‌ಶೀಟ್ ಬಿಡುಗಡೆ ಮಾಡಿ ಮಾತನಾಡಿದರು. ಗೃಹಲಕ್ಷ್ಮಿ ಹಣ ಸರಿಯಾಗಿ ಬರುತ್ತಿಲ್ಲ, ಶಕ್ತಿ ಯೋಜನೆ ಗ್ರಾಮೀಣ ಭಾಗದಲ್ಲಿ ನಿಶ್ಯಕ್ತಿಯಾಗಿದೆ, ಫ್ರೀ ಬಸ್ ಘೋಷಣೆಯಾಗಿವೆ. ಆದರೆ ಬಸ್‌ಗಳೇ ಬರುತ್ತಿಲ್ಲ ಎಂದು ದೂರಿದರು.

ಬೇರೆ ರಾಜ್ಯದ ಚುನಾವಣೆಗಾಗಿ ಕರ್ನಾಟಕ ಎಟಿಎಂ, ಭ್ರಷ್ಟಾಚಾರದ ಕೂಪವಾದ ಕರ್ನಾಟಕ, ಕಮಿಷನ್ ಸರ್ಕಾರದಿಂದ ಸಾರ್ವಜನಿಕರ ಹಣ ಲೂಟಿ, ರಾಜ್ಯಕ್ಕೆ ಆರ್ಥಿಕ ದಿವಾಳಿ ಭಾಗ್ಯ ಕೊಟ್ಟ ವಸೂಲಿ ಸರ್ಕಾರ, ಈಡೇರದ ಗ್ಯಾರಂಟಿಗಳು, ಬೆಲೆ ಏರಿಕೆ ಭಾಗ್ಯ, ಆಡಳಿತ ಯಂತ್ರ ಸಂಪೂರ್ಣ ಕುಸಿತ ಎಂದು ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿದೆ. ಕೃಷಿ ಕ್ಷೇತ್ರದ ನಿರ್ಲಕ್ಷ್ಯ, ಸಾಮಾಜಿಕ ನ್ಯಾಯಕ್ಕೆ ತಿಲಾಂಜಲಿ, ಹಿಂದುಳಿದ ವರ್ಗಗಳ ಹಿತಾಸಕ್ತಿ ಬಲಿ, ಕಾಂಗ್ರೆಸ್ ಆಡಳಿತದಲ್ಲಿ ಹೆಣ್ಣು ಮಕ್ಕಳ ಆರ್ತನಾದ, ಹಿಂದೂ ವಿರೋಧಿ ನೀತಿ, ಮತಾಂಧ ಶಕ್ತಿಗಳ ಓಲೈಕೆ, ಬಹುಸಂಖ್ಯಾತರ ಭಾವನೆಗಳಿಗೆ ಬೆಲೆ ಕೊಡದ ಸರ್ಕಾರ, ಕೊಲೆ, ಸುಲಿಗೆ, ಅತ್ಯಾಚಾರ, ಲವ್ ಜಿಹಾದ್ ನಡೆಸಲು ಹೆದರದ ಕ್ರಿಮಿನಲ್‌ಗಳು ಎಂದು ಚಾರ್ಜ್‌ಶೀಟ್‌ನಲ್ಲಿ ಆಪಾದಿಸಲಾಗಿದೆ.

ಸಿದ್ದರಾಮಯ್ಯ ಅವರನ್ನು ಪಾಕ್ ಜನರು ವಜೀರೆ ಆಜಂ ಎಂದು ಕರೆಯುತ್ತಾರೆ

ತಮ್ಮ ಪರ ವಕಾಲತು ವಹಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಪಾಕಿಸ್ತಾನದ ಜನರು ವಜೀರೆ ಆಜಂ (ಪ್ರಧಾನಮಂತ್ರಿಯನ್ನು ಗೌರವದಿಂದ ಸಂಬೋಧಿಸುವ ಪದ) ಎಂದು ಕರೆಯುತ್ತಿದ್ದಾರೆ ಎಂದು ಸಿಟಿ.ರವಿ ಹೇಳಿದರು.

ಪಾಕಿಸ್ತಾನವನ್ನು ಓಲೈಕೆ ಮಾಡುತ್ತಿರುವ ಹಿನ್ನೆಲೆ ಪಾಕಿಸ್ತಾನದಲ್ಲಿ ಸಿದ್ದರಾಮಯ್ಯ ಖ್ಯಾತಿ ಗಳಿಸಿದ್ದಾರೆ. ತಮ್ಮ ಪರವಾಗಿ ಮಾತನಾಡುತ್ತಿರುವ ಸಿದ್ದರಾಮಯ್ಯ ಅವರನ್ನು ಪಾಕಿಸ್ತಾನಿಯರು ಹಾಡಿ ಹೊಗಳುತ್ತಿದ್ದಾರೆ ಎಂದರು.

ಪಾಕಿಸ್ತಾನ ವಿಚಾರವಾಗಿ ರಾಹುಲ್ ಗಾಂಧಿ ನೀಡಿದ ಹೇಳಿಕೆಗಳನ್ನು ಕಾಂಗ್ರೆಸ್ ಪಕ್ಷ ಸಮರ್ಥನೆ ಮಾಡಿಕೊಳ್ಳುತ್ತಿದೆ. ಪಾಕಿಸ್ತಾನದ ಪರ ಇವರು ನೀಡಿದ ಹೇಳಿಕೆಗಳು ಅಲ್ಲಿ ಫ್ಲ್ಯಾಶ್ ನ್ಯೂಸ್ ಆಗುತ್ತಿದೆ ಎಂದು ಸಿ.ಟಿ.ರವಿ ಹೇಳಿದರು.

ಪಾಕಿಸ್ತಾನಿಯರಿಗೆ ಇಮ್ರಾನ್ ಖಾನ್, ನವಾಜ್ ಷರೀಫ್‌ಗಿಂತಲೂ ರಾಹುಲ್ ಗಾಂಧಿ ಮೇಲೆ ಹೆಚ್ಚಿನ ಭರವಸೆ ಇದೆ. ಹಾಗಾಗಿ ಪಾಕ್‌ನವರು ಇವರ ಮೇಲೆ ಆಶಾವಾದ ತೋರಿದ್ದಾರೆ ಎಂದು ಹೇಳಿದರು. ಕಾಂಗ್ರೆಸ್ ಪಕ್ಷ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅಲ್ಲ, ಪಾಕಿಸ್ತಾನ್ ನ್ಯಾಷನಲ್ ಕಾಂಗ್ರೆಸ್ ಎಂದು ಸಿ.ಟಿ.ರವಿ ಗೇಲಿ ಮಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಾಮನ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಏಸ್ (ತ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧಡ್ಕನ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕಿರಿಕ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಟಕೀಲಾ (ಕ)	4 ಪ್ರದರ್ಶನಗಳು
ರಾಜಕಮಲ್	
ಡೆವಿಲ್ಸ್ ಡಬಲ್ ನೆಕ್ಸ್ಟ್ ಲೆವಲ್ (ತ)	4 ಪ್ರದರ್ಶನಗಳು
ಸಂಗಂ	
ಸೈನೈಡ್ (ಕ)	4 ಪ್ರದರ್ಶನಗಳು
ಲಿಡೋ	
ಯುದ್ಧಕಾಂಡ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ರೆಟ್ರೋ (ತ): ಬೆ.9.40ಕ್ಕೆ, ಮ.1ಕ್ಕೆ, ರಾ.7ಕ್ಕೆ, ಥಂಡರ್‌ಬೋಲ್ಟ್ಸ್ (3ಡಿ)(ಇಂ): ಸಂ.4.20ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 2	ಥಂಡರ್‌ಬೋಲ್ಟ್ಸ್ (3ಡಿ)(ಇಂ): ಬೆ.10.25ಕ್ಕೆ, ಯುದ್ಧಕಾಂಡ 2 (ಕ): ಮ.1.05ಕ್ಕೆ, ಸಂ.4.05ಕ್ಕೆ, ತುಡಾರಂ (ಮ): ರಾ.7ಕ್ಕೆ, ರಾ.10.20ಕ್ಕೆ
ಸ್ಕ್ರೀನ್ 3	ಹಿಟ್ ದಿ ಥರ್ಡ್ ಕೇಸ್ (ತೆ): ಬೆ.10ಕ್ಕೆ, ಮ.3.55ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಟೂರಿಸ್ಟ್ ಫ್ಯಾಮಿಲಿ (ತ): ಮ.1.10ಕ್ಕೆ.
ಸ್ಕ್ರೀನ್ 4	ಪಪ್ಪಿ (ಕ): ಬೆ.10.30ಕ್ಕೆ, ರೈಡ್ 2 (ಹಿಂ): ಮ.1ಕ್ಕೆ, ರಾ.7.25ಕ್ಕೆ, ರಾ.10.25ಕ್ಕೆ, ರೆಟ್ರೋ (ತ): ಸಂ.4.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪ್ರೀತಿಯ ಹುಚ್ಚ (ಕ): ಬೆ.11ಕ್ಕೆ, ರಿಕ್ಷಾ ಚಾಲಕ (ಕ): ಮ.1.35ಕ್ಕೆ, ಕೋರ (ಕ): ಸಂ.6.35ಕ್ಕೆ, ಖದೀಮ (ಕ): ಸಂ.6.35ಕ್ಕೆ, ಟೆನ್ ಅವರ್ಸ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ಯುದ್ಧಕಾಂಡ 2 (ಕ): ಮ.1ಕ್ಕೆ, ಸಂ.6.35ಕ್ಕೆ, ಒಡೆಲ್ಲಾ (ತೆ): ಮ.3.45ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ವೀರ ಚಂದ್ರಹಾಸ (ಕ): ಮ.1ಕ್ಕೆ, ಮ.3.55ಕ್ಕೆ, ಗುಡ್ ಬ್ಯಾಡ್ ಅಗ್ಲಿ (ತ): ಸಂ.6.50ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಯುದ್ಧಕಾಂಡ 2 (ಕ): ಬೆ.10.50ಕ್ಕೆ, ವಾಮನ (ಕ): ಮ.1.35ಕ್ಕೆ, ಸಂ.4.10ಕ್ಕೆ, ಅರ್ಜುನ್ s/o ವೈಜಯಂತಿ (ತೆ): ಸಂ.6.45ಕ್ಕೆ, ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್ ಎನ್‌ಕೌಂಟರ್; ಓರ್ವ ಯೋಧ ಹುತಾತ್ಮ!

ಶ್ರೀನಗರ, ಮೇ 22– ಜಮ್ಮು ಮತ್ತು ಕಾಶ್ಮೀರದ ಕಿಶ್ತ್ವಾರ್‌ನಲ್ಲಿ ಉಗ್ರರು ಹಾಗೂ ಭದ್ರತಾ ಪಡೆಗಳ ನಡುವೆ ಗುರುವಾರ ನಡೆದ ಎನ್‌ಕೌಂಟರ್‌ನಲ್ಲಿ ಯೋಧರೊಬ್ಬರು ಹುತಾತ್ಮರಾಗಿದ್ದಾರೆ. ಕಿಶ್ತ್ವಾರ್ ಜಿಲ್ಲೆಯ ಚತ್ರೂವಿನ ಸಿಂಗ್‌ಪೋರಾ ಪ್ರದೇಶದಲ್ಲಿ ನಾಲ್ವರು ಉಗ್ರರು ಅಡಗಿ ಕುಳಿತಿರುವ ಶಂಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಭದ್ರತಾ ಪಡೆಗಳು ಕಾರ್ಯಾಚರಣೆಗಿಳಿದಿದ್ದವು.

ಈ ವೇಳೆ ಉಗ್ರರು ಅಡಗಿದ್ದ ಸ್ಥಳ ಸಮೀಪಿಸುತ್ತಿದ್ದಂತೆಯೇ ಯೋಧರ ಮೇಲೆ ಗುಂಡಿನ ದಾಳಿ ಆರಂಭಿಸಿದ್ದಾರೆ. ಕೂಡಲೇ ಕಾರ್ಯಾಚರಣೆಯನ್ನು ತೀವ್ರಗೊಳಿಸಿದ ಸೇನಾಪಡೆ ಉಗ್ರರ ದಾಳಿಗೆ ದಿಟ್ಟ ಉತ್ತರ ನೀಡಿದ್ದು, ಉಗ್ರರು ಅಡಗಿರುವ ಪ್ರದೇಶವನ್ನು ಸುತ್ತುವರೆಯಲಾಯಿತು.

ಉಗ್ರರ ನಿರ್ದಿಷ್ಟ ಸ್ಥಳವನ್ನು ಗುರುತಿಸಲು ವೈಮಾನಿಕ ಕಣ್ಗಾವಲುಗಾಗಿ ಡ್ರೋನ್ ಮತ್ತಿತರ ಉಪಕರಣಗಳನ್ನು ನಿಯೋಜಿಸಲಾಗಿತ್ತು ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ವೈಟ್ ನೈಟ್ ಕಾರ್ಪ್ಸ್ "ಜಮ್ಮು ಕಾಶ್ಮೀರ ಪೊಲೀಸರೊಂದಿಗೆ ಇಂದು ಬೆಳಗ್ಗೆ ಚತ್ರು, ಕಿಶ್ತ್ವಾರ್‌ನಲ್ಲಿ ನಡೆದ ಜಂಟಿ ಕಾರ್ಯಾಚರಣೆಯಲ್ಲಿ ಉಗ್ರರೊಂದಿಗೆ ಎನ್ ಕೌಂಟರ್ ನಡೆದಿದ್ದು, ಉಗ್ರರ ಹತ್ಯೆಗೆ ಕಾರ್ಯಾಚರಣೆಗಳು ನಡೆಯುತ್ತಿವೆ ಎಂದು ಹೇಳಿದೆ.

ಮೇ 16ರಂದು, ಜಮ್ಮು ಮತ್ತು ಕಾಶ್ಮೀರ ಪೊಲೀಸರು ಮತ್ತು ಕೇಂದ್ರ ಮೀಸಲು ಪೊಲೀಸ್ ಪಡೆ, ಭಾರತೀಯ ಸೇನೆ ಕೇಲಾರ್, ಶೋಪಿಯಾನ್ ಮತ್ತು ಟ್ರಾಲ್‌ನಲ್ಲಿ ನಡೆಸಿದ ಎರಡು ಪ್ರತ್ಯೇಕ ಕಾರ್ಯಾಚರಣೆಗಳಲ್ಲಿ ಆರು ಉಗ್ರರನ್ನು ಹತ್ಯೆ ಮಾಡಿದ್ದರು.

ನಕ್ಸಲರು ಇರಿಸಿದ್ದ ಐಇಡಿ ಸ್ಫೋಟ; ಎನ್‌ಕೌಂಟರ್ ಮುಗಿಸಿ ಹಿಂತಿರುಗುತ್ತಿದ್ದ ಡಿಆರ್‌ಜಿ ಯೋಧ ಹುತಾತ್ಮ

ನಾರಾಯಣಪುರ, ಮೇ 22– ಛತ್ತೀಸಗಢದ ನಾರಾಯಣಪುರ ಜಿಲ್ಲೆಯಲ್ಲಿ ನಕ್ಸಲರು ಇರಿಸಿದ್ದ ಸುಧಾರಿತ ಸ್ಫೋಟಕ ಸಾಧನ (IED) ಸ್ಫೋಟಗೊಂಡು ರಾಜ್ಯ ಪೊಲೀಸ್‌ನ ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ) ಯೋಧ ಸಾವಿಗೀಡಾಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬುಧವಾರ ಸಂಜೆ ದಟ್ಟ ಅರಣ್ಯದ ಅಭುಜ್‌ಮದ್ ಪ್ರದೇಶದಲ್ಲಿ ಮಾವೋವಾದಿಗಳೊಂದಿಗೆ ನಡೆದ ಪ್ರಮುಖ ಎನ್‌ಕೌಂಟರ್ ನಂತರ ಭದ್ರತಾ ಸಿಬ್ಬಂದಿ ಹಿಂತಿರುಗುತ್ತಿದ್ದ ವೇಳೆ ಐಇಡಿ ಸ್ಫೋಟಗೊಂಡಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನಾರಾಯಣಪುರ ಮತ್ತು ಬಿಜಾಪುರ ಜಿಲ್ಲೆಗಳ ಗಡಿಯಲ್ಲಿರುವ ಕಾಡುಗಳಲ್ಲಿ ನಡೆದ ಈ ಎನ್‌ಕೌಂಟರ್‌ನಲ್ಲಿ ನಿಷೇಧಿತ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾವೋವಾದಿ) ಪ್ರಧಾನ ಕಾರ್ಯದರ್ಶಿ ನಂಬಲ ಕೇಶವ ರಾವ್ ಅಲಿಯಾಸ್ ಬಸವರಾಜು (70) ಸೇರಿದಂತೆ ಕನಿಷ್ಠ 27 ನಕ್ಸಲರು ಸಾವಿಗೀಡಾಗಿದ್ದಾರೆ.

ಎನ್‌ಕೌಂಟರ್‌ನಿಂದ ಹಿಂದಿರುಗುತ್ತಿದ್ದ ವೇಳೆ ಬಿಜಾಪುರ ಡಿಆರ್‌ಜಿಗೆ ಸೇರಿದ ಯೋಧ ರಮೇಶ್ ಹೆಮ್ಲಾ ಎಂಬುವವರು ಒತ್ತಡ–ಸಕ್ರಿಯಗೊಳಿಸಿದ ಐಇಡಿ ಮೇಲೆ ಹೆಜ್ಜೆ ಇಟ್ಟಿದ್ದಾರೆ. ಇದರಿಂದಾಗಿ ಸ್ಫೋಟ ಸಂಭವಿಸಿ, ಸ್ಥಳದಲ್ಲೇ ಅವರು ಮೃತಪಟ್ಟಿದ್ದಾರೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಗುರುವಾರ ಮಧ್ಯಾಹ್ನ 12 ಗಂಟೆಗೆ ನಾರಾಯಣಪುರದ ಪೊಲೀಸ್ ಲೈನ್ಸ್‌ನಲ್ಲಿ ಹುತಾತ್ಮರಾದ ಇಬ್ಬರು ಯೋಧರಿಗೆ ಮಾಲಾರ್ಪಣೆ ಸಮಾರಂಭ ನಡೆಯಲಿದ್ದು, ನಂತರ ಅವರ ಶವಗಳನ್ನು ಅವರವರ ಊರುಗಳಿಗೆ ಕಳುಹಿಸಲಾಗುವುದು ಎಂದು ಅಧಿಕಾರಿ ತಿಳಿಸಿದ್ದಾರೆ.

ಕೈಲಾಸ ಶಿವಗಣಾರಾಧನ ಆಹ್ವಾನ ಪತ್ರಿಕೆ



ಶ್ರೀ ಬಿ.ಆರ್.ಸಿದ್ದಪ್ಪನವರು

ಲಿಂಗೈಕ್ಯ : 14-05-2025

ಇವರು ದಿ: 14-05-2025 ರಂದು ಲಿಂಗೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿ.24-05-2025 ಶನಿವಾರ ಬೆ.11 ಗಂಟೆಗೆ ಮೈಸೂರಿನ ಶ್ರೀ ಸುತ್ತೂರು ಮಠಾಧ್ಯಕ್ಷರಾದ ಪೂಜ್ಯಶ್ರೀ ಗುರುಶಾಂತಸ್ವಾಮಿಗಳವರ ದಿವ್ಯಪಾದಪೂಜೆಯನ್ನು ಹಾಗೂ ಶಿವಗಣಾರಾಧನೆಯನ್ನು ಮೈಸೂರಿನ ಕುವೆಂಪುನಗರದಲ್ಲಿರುವ ಸ್ವಗೃಹ ನಂ. 1737, 4ನೇ ಕ್ರಾಸ್, ಅನಿಕೇತನ ರಸ್ತೆ, ಪಿಸಿಬಿ ಬ್ಲಾಕ್‌ನಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಶ್ರೀಗುರು ಕೃಪೆಗೆ ಪಾತ್ರರಾಗಿ ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ಗೌರಮ್ಮ ಮತ್ತು ಮಕ್ಕಳು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು, ಲೇ॥ ಶ್ರೀಮತಿ ಭದ್ರಮ್ಮ ಮತ್ತು ಲೇ॥ ನಾಗಣ್ಣ ಗೌಡರ ರಾಜಣ್ಣನವರ ಕುಟುಂಬವರ್ಗ ಹಾಗೂ ಬಂಧುಮಿತ್ರರು

CONSTRUCTION WORK

We Undertake new residential Commercial & Industrial Constructions, Repair and Renovation works contact:

8296698852

2.5 BHK HOME INTERIORS @ ₹ 2.5 Lakh*

Home Space Mart

*T&C Apply

91089 23123

Kumuda Spa

Best price guaranteed in Hair & Salon services. SPA & Massage Packages available in most reasonable price.

0821-4193567
9632769550

ACCOUNTS PROFESSIONALS WANTED

Preference will be given to CA ARTICLESHIP COMPLETED CANDIDATES

Call: 96869 59608

ನೇರ II ಪಿಯುಸಿ!!

I ಪಿಯುಸಿ ಪಾಸಾಗಿಲ್ಲವೇ?/ I ಪಿಯುಸಿ ಓದಿಲ್ಲವೇ? ಚಿಂತೆ ಬಿಡಿ. ನಮ್ಮ ನೇರ II ಪಿಯುಸಿ ಕೋರ್ಸ್‌ಗೆ ಸೇರಿಕೊಳ್ಳಿ. ನಾವು ಉತ್ತಮ ಕೋಚಿಂಗ್ ಜೊತೆ ಮುದ್ರಿತ ನೋಟ್ಸ್ ನೀಡಿ II ಪಿಯುಸಿಗೆ ಉತ್ತಮವಾಗಿ ಅಣಿಗೊಳಿಸುತ್ತೇವೆ. 2004 ರಿಂದ ಉತ್ತಮ ಫಲಿತಾಂಶ.ಆಫ್ಲೈನ್ ಹಾಗೂ ಆನ್ಲೈನ್ ತರಗತಿಗಳು ಲಭ್ಯ. ಜ್ಞಾನ ವರ್ಧಿನಿ ಸೆಂಟರ್.

9844355941, 9482674031
www.direct2puc.com

ಮಹಿಳಾ ಆಯಾ ಬೇಕಾಗಿದ್ದಾರೆ

ಎಸ್.ಎಸ್.ಎಲ್.ಸಿ (ಉತ್ತೀರ್ಣ / ಅನುತ್ತೀರ್ಣ) "ತಕ್ಷಣವೇ ಸಂಪರ್ಕಿಸಿ" ಮುಖ್ಯಶಿಕ್ಷಕರು ಸಂತಮರಿನಾಸ್ ಆಂಗ್ಲ ಪ್ರೌಢಶಾಲೆ, ಎನ್.ಆರ್.ಮೊಹಲ್ಲಾ, ಮೈಸೂರು. 1/ಬಿ, ರಾಜೇಂದ್ರನಗರ ಮುಖ್ಯರಸ್ತೆ. (ಕಾವೇರಿ ಪ್ಯಾಲೇಸ್ ಚೌಲ್ಟ್ರೀ ಹತ್ತಿರ) ಸಂದರ್ಶನದ ಸಮಯ ಬೆಳಗ್ಗೆ 10 ಗಂಟೆಯಿಂದ 1 ಗಂಟೆಯವರೆಗೆ

100% TEAK WOOD FACTORY FINISH DOORS & WINDOWS @ FACTORY DEPOT RATES



10 YEARS WARRANTY* ISI

9731591267
9901291267

JOB OPPORTUNITY

Only for those who wants to earn more, valuable time pass, recognition, good environment, No time boundary, even work from Home.

Call : 63611 97278

ಇಂಪೀರಿಯಲ್ ಸಿಟಿ

HP HYLAND PROPERTIES

ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು

ಕೇವಲ ₹749/ ಪ್ರತಿ ಚದರ ಅಡಿ

ಬುಕಿಂಗ್ ಪ್ರಾರಂಭವಾಗಿದೆ

ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕೀ.ಮೀ

MUDA LIMITS

ಸುಲಭ 4 ಕಂತುಗಳ ಸೌಲಭ್ಯವಿದೆ

30x40 | 30x50
40x60 | 50x80

ಅಳತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು

ಹೈಲ್ಯಾಂಡ್ ಪ್ರಾಪರ್ಟೀಸ್
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು

88840 71010
90713 86615

AVAILABLE FOR RENT

1) 45 feet by 11 feet godown.
2) Single room with attached bathroom.

Veene Sheshanna Road, K.R. Mohalla, Mysore

Mob: 96205-58280

ನಿವೇಶನಗಳು ಮಾರಾಟಕ್ಕಿವೆ

ಟಿ. ನರಸೀಪುರ ರಸ್ತೆ (ವರಕೂಡು)

- ಪಶ್ಚಿಮಕ್ಕೆ , A ಖಾತ
- ಬ್ಯಾಂಕ್ ಸಾಲ ಸೌಲಭ್ಯವಿದೆ
- ಮಾಲೀಕರಿಂದ ನೇರ ಮಾರಾಟ

ಅಳತೆ **20 / 30**

9972602543

ಮನೆಗೆಲಸದವಳು ಬೇಕಾಗಿದ್ದಾರೆ

ನಮ್ಮ ನಿವಾಸ ವಿಜಯನಗರ 3ನೇ ಹಂತ, 19ನೇ ಕ್ರಾಸ್ ನಲ್ಲಿರುವ ಮನೆಗೆ ಪೂರ್ಣಾವಧಿ ಮನೆಗೆಲಸದವಳನ್ನು ಹುಡುಕುತ್ತಿದ್ದೇವೆ, ಅದ್ವತೆಯು ಮೇರೆಗೆ ವ್ಯಕ್ತಿಯು ನಮ್ಮ ಅಂಗಡಿಯ ಸುತ್ತಮುತ್ತ ವಾಸಿಸಬೇಕು. ಸಮಯ: ಬೆಳಿಗ್ಗೆ 11 ರಿಂದ ಸಂಜೆ 5.30 ರವರೆಗೆ. ಆಸಕ್ತರು ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಿ

Mob: 6361726253

Sarada Vilas College

Sarada Vilas Educational Institutions (R)

"A Legacy of Excellence"

Affiliated to University of Mysore & Reaccredited by NAAC with 'A' Grade
Krishnamurthypuram, Mysuru

ADMISSIONS OPEN FOR 2025-26

B.Sc. with CBZ, PCM and PEM

HIGHLIGHTS OF THE COLLEGE

- A grade by NAAC
- Scholarship to merit students by the institution
- Well Equipped Laboratories & Digital Library
- Certificate courses in various subjects
- MoU with reputed institutions
- Career guidance & Placement cell
- Play ground and multi gym facilities
- International and National level seminars
- Communication skill classes
- NCC, NSS & Red Cross

A GOOD PLACEMENT RECORD | Internships and Projects in Reputed Industries and Research Institutions

Visit college website for further details: www.saradavilas.com
Contact us: Email: principal@saradavilas.com Ph: 0821- 2330221, 0821- 2332479, 9880024483, 9663857675, 9480191644, 9986064343

Sd/ Hon. Secretary

ಪದ್ಮ ಚಿತ್ರಮಂದಿರ

ಇಂದಿನಿಂದ 2ನೇ ವಾರ

ಪರೋಟ ಸೂರಿ ನಟಿಸಿರುವ ಮಾಮನ್ MAAMAN

ದಿನ 4 ಪ್ರದರ್ಶನ (ತಮಿಳು)



10.30
1.30
4.30
7.30

ಬುಕ್ ಮೈ ಷೋನಲ್ಲಿ ಟಿಕೇಟ್ ಲಭ್ಯವಿದೆ.

WANTED

- Front Office Executive
- Room Boy
- Security

For a reputed Hotel in the Heart of the city. Attractive Salary with food & accommodation will be provided.

Call : 72049 33402 / 86186 47910

10ನೇ ವರ್ಷದ ಸವಿನೆನಪು



ಶ್ರೀಮತಿ ಲಕ್ಷ್ಮಮ್ಮರವರು

ದುಃಖತಪ್ತರು: ಬೋರೆಲಿಂಗೇಗೌಡರು ಮತ್ತು ಮಕ್ಕಳು ಶ್ರೀ ಮಹದೇಶ್ವರ ಲಾರಿ ಮಾಲೀಕರು ಕುಂಬಾರಕೊಪ್ಪಲು, ಮೈಸೂರು

ರತ್ನ ಪ್ಯಾರ ಮೆಡಿಕಲ್ ಕಾಲೇಜು

ಕುವೆಂಪುನಗರ, ಮೈಸೂರು

ADMISSION OPEN

- Bachelor's in Medical Lab technology
- Bachelor's in cardiac care Technology, OT, Dialysis & X-Ray
- Diploma in Medical Lab Technology
- B.Com (Digital Marketing)
- Direct PUC (Science, Commerce & Arts)

SSLC/PUC Pass/Fail

9886654463




HOUSE FOR SALE

DUPLEX HOUSE IN SARASWATHIPURAM

Built up area
Total 1886 Sq. Ft.
Ground floor 1200 Sq. Ft.
First floor 636 Sq. Ft.

8105295640

ಮೊದಲನೇ ವರ್ಷದ ಸವಿನೆನಪು



ಶ್ರೀ ಪಿ.ಬಸವರಾಜು (ರೈಲ್ವೆ)

ನಿಧನ: 23.05.2024

ದುಃಖತಪ್ತರು: ಶ್ರೀಮತಿ ನಿರ್ಮಲ, ಮಕ್ಕಳು ಹಾಗೂ ಕುಟುಂಬವರ್ಗದವರು



ಶ್ರದ್ಧಾಂಜಲಿ



ಜನನ 6-7-1951 **ಬಸವರಾಜು** ನಿಧನ 21-5-2025

(ಚಿಕ್ಕಮ್ಮ ಬಸವರಾಜು ರವರ ಪತಿ)
ಮಾಜಿ ನಗರ ಪಾಲಿಕೆ ಸದಸ್ಯರು

ಇವರು ದಿ.21.5.25ರಂದು ದೈವಾದೀನರಾಗಿದ್ದು ಇವರ ಅಂತ್ಯಕ್ರಿಯೆಯನ್ನು ದಿನಾಂಕ 23.5.25ರ ಶುಕ್ರವಾರ ಬೆಳಗ್ಗೆ 11 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುತ್ತದೆ

ಇಂತಿ ದುಃಖತಪ್ತರು: ಕುಟುಂಬವರ್ಗದವರು